ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 10 ಗುರುವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 116 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



ಆರೋಗ್ಯ ವಿಮಾ ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಪ್ರತಿಭಟನೆ



ಮೈಸೂರು,ಆ.9 (ಎಂಟಿವೈ)– ನಗರ ಪಾಲಿಕೆ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಪ.ಜಾತಿ, ಪ.ಪಂಗಡಗಳ ಕಲ್ಯಾಣನಿಧಿ ಅಡಿಯಲ್ಲಿ ಜೀವ ವಿಮಾ ಆರೋಗ್ಯ ಯೋಜನೆ ಅನುಷ್ಠಾನಗೊಳಿಸುವಂತೆ ಆಗ್ರಹಿಸಿ ಪ.ಜಾತಿ, ಪ.ಪಂಗಡಗಳ ನಾಗರಿಕ ಹಕ್ಕು ಹೋರಾಟ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು ಪಾಲಿಕೆ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು, ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುವ ಪ.ಜಾತಿ, ಪ.ಪಂಗಡದ ಜನರಿಗೆ ನೀಡಬೇಕಾದ ಹಲವು ಸೌಲಭ್ಯಗಳಲ್ಲಿ ಮುಖ್ಯವಾದ ವೈದ್ಯಕೀಯ ಸೌಲಭ್ಯಕ್ಕಾಗಿ ಆರೋಗ್ಯ ಜೀವ ವಿಮೆ ಮಾಡಿಕೊಡುವಂತೆ ನ್ಯಾಯಾಲಯ ಆದೇಶಿಸಿ 4 ವರ್ಷಗಳಾಗಿದೆ. ಆದರೂ ಪಾಲಿಕೆ ಅಧಿಕಾರಿಗಳು ಪ.ಜಾತಿ, ಪ.ಪಂಗಡದವರಿಗೆ ಶೇ.24.10ರ ಅಡಿಯಲ್ಲಿ ಸೌಲಭ್ಯ ನೀಡದೆ ವಂಚಿಸುತ್ತಿದ್ದಾರೆ ಎಂದು ಆರೋಪಿಸಿದರು. ಈ ಯೋಜನೆ ಕುರಿತು ಅರಿವು ಮೂಡಿಸಲು ಸೂಚನಾ ಫಲಕ, ಜಾಲತಾಣ, ರಾಜ್ಯ ಮತ್ತು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಚಾರಗೊಳಿಸುವಂತೆ ಆದೇಶದಲ್ಲಿ ಸೂಚಿಸಿದ್ದರೂ ಯಾವುದೇ ಪ್ರಚಾರ ಕೈಗೊಂಡಿಲ್ಲ. ಪ.ಜಾತಿ, ಪ.ಪಂಗಡ ಜನಾಂಗದ ಮತ ಪಡೆದು ಜಯಗಳಿಸಿದ ಪಾಲಿಕೆ ಸದಸ್ಯರು ಇಂತಹ ಸೌಲಭ್ಯ ಕೊಡಿಸುವಲ್ಲಿ ವಿಫಲರಾಗಿದ್ದಾರೆ. ಇಂತಹ ಸೇವಾ ಕಾರ್ಯವನ್ನು ಜನಸಾಮಾನ್ಯರಿಗೆ ಒದಗಿಸಿ ಕೊಡದೆ ಕೇವಲ ಲಾಭದಾಯಕ ಕಾರ್ಯಕ್ರಮ ರೂಪಿಸಿಕೊಂಡು ತಮ್ಮ ಅಧಿಕಾರದ ಅವಧಿಯನ್ನು ವೈಭವಿಸಿಕೊಳ್ಳುತ್ತಿದ್ದಾರೆ ಎಂದು ದೂರಿದರು. ಪ್ರತಿಭಟನೆಯಲ್ಲಿ ಪ.ಜಾತಿ, ಪ.ಪಂಗಡಗಳ ನಾಗರಿಕ ಹಕ್ಕು ಹೋರಾಟ ಸಮಿತಿ ಜಯಶಂಕರ ಶ್ಯಾಮ್, ಗೋವಿಂದರಾಜು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಹಿಟ್ 6 ಪ್ಲಾಂಟ್ 6 ವಿಶೇಷ ಅಭಿಯಾನ ಆರಂಭಿಸಿದ ಎಸ್‌ಪಿಪಿಎ



ಮೈಸೂರು, ಆ. 9–ಪರಿಸರ ಸಂರಕ್ಷಣೆ ಹಾಗೂ ಸರಿ ನೆಡುವ ವಿಶೇಷ ಅಭಿಯಾನಕ್ಕೆ ಒತ್ತು ನೀಡಿರುವ ಸೊಸೈಟಿ ಫಾರ್ ಪ್ರೊಟೆಕ್ಷನ್ ಆಫ್ ಪ್ಲಾಂಟ್ಸ್ ಅಂಡ್ ಅನಿಮಲ್ಸ್ (ಎಸ್‌ಪಿಪಿಎ) ಸಂಸ್ಥೆಯ ಧ್ರುವ ಪಾಟೀಲ್ ಮೈಸೂರಿನ ಗಂಗೋತ್ರಿ ಗ್ಲೇಡ್ಸ್ ಕ್ರಿಕೆಟ್ ಮೈದಾನದಲ್ಲಿ 10 ಸಸಿಗಳನ್ನು ನೆಟ್ಟಿದ್ದಾರೆ.

ಕರ್ನಾಟಕ ಪ್ರೀಮಿಯರ್ ಲೀಗ್ ಋತುವಿನಲ್ಲಿ ಮೈಸೂರು ವಾರಿಯರ್ಸ್ ತಂಡ ಬಾರಿಸುವ ಪ್ರತಿ ಸಿಕ್ಸರ್‌ಗೆ ಸಂಸ್ಥೆಯು 10 ಸಸಿಗಳನ್ನು ನೆಡುವ ಜಂಟಿ ಪಾಲುದಾರಿಕೆಯ ಯೋಜನೆಯನ್ನು ಹಮ್ಮಿಕೊಂಡಿದೆ. #Hit6 Plant6 ಅಭಿಯಾನದಡಿ ಈ ಪಾಲುದಾರಿಕೆ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ.

ಕ್ರಿಕೆಟಿಗರಾದ ಪ್ರಸಿದ್ಧ್ ಕೃಷ್ಣ, ಜಗದೀಶ್ ಸುಚಿತ್, ಮನೋಜ್ ಭಾಂಡಗೆ, ಆರ್. ಸಮರ್ಥ್ ಧ್ರುವ ಪಾಟೀಲ್, ವಿಶ್ವದ ಕಿರಿಯ ನಿರ್ದೇಶಕ ಕಿಶನ್ ಅವರೊಂದಿಗೆ ಧ್ರುವ ಸಸಿ ನೆಟ್ಟರು. ಈ ವಿಶೇಷ ಅಭಿಯಾನದ ಮೂಲಕ ಜನರಲ್ಲಿ ಮತ್ತು ಯುವಕರಲ್ಲಿ ಜಾಗೃತಿ ಮೂಡಿಸಲಾಗುವುದು ಎಂದು ಆಟಗಾರರು ಹಾಗೂ ಎಸ್‌ಪಿಪಿಎ ಸದಸ್ಯರು ತಿಳಿಸಿದ್ದಾರೆ.

ವಿಜಯಪುರದ ಮಾಮದಪುರದಲ್ಲಿ ಮಾನವ ನಿರ್ಮಿತ ಅರಣ್ಯದಲ್ಲಿ ಸಸಿಗಳನ್ನು ನೆಡುವ ಮೂಲಕ ಅರಣ್ಯೀಕರಣಕ್ಕೆ ವಿಶೇಷ ಆದ್ಯತೆ ನೀಡಲಾಗುವುದು.


ಇದೇ ಸಂದರ್ಭದಲ್ಲಿ ಮಾತ ನಾಡಿದ ಎಸ್‌ಪಿಪಿಎ ಸಂಸ್ಥಾಪಕ ಧ್ರುವ ಪಾಟೀಲ್, ಕ್ರಿಕೆಟ್ ಮತ್ತು ಕ್ರಿಕೆಟಿಗರು ಪರಿಸರ ಸಂರಕ್ಷಣೆಗೆ ರಾಯಭಾರಿಗಳಾಗಬಹುದು. ಇವರನ್ನು ನೋಡಿ ಯುವಕರು ಕೂಡ ಈ ಅಭಿಯಾನದಲ್ಲಿ ಕೈಜೋಡಿಸುವ ನಿರೀಕ್ಷೆ ಎಂದು ತಿಳಿಸಿದರು.

ಮೈಸೂರು ಕಲ್ಯಾಣ ಮಂಟಪ ಮಾಲೀಕರ ಸಂಘದ ಅಧ್ಯಕ್ಷರಾಗಿ ಎಸ್.ಮೂರ್ತಿ ಆಯ್ಕೆ



ಮೈಸೂರು,ಆ.9(ಆರ್‌ಕೆ)– ಮೈಸೂರು ಕಲ್ಯಾಣ ಮಂಟಪ ಮಾಲೀಕರ ಸಂಘದ ನೂತನ ಅಧ್ಯಕ್ಷರಾಗಿ ರಾಹುಲ್ ಕನ್ವೆನ್ಷನ್ ಹಾಲ್ ಮಾಲೀಕ ಎಸ್.ಮೂರ್ತಿ ಆಯ್ಕೆಯಾಗಿದ್ದಾರೆ. ಕಾರ್ಯದರ್ಶಿಯಾಗಿ ಪಿ.ಎ.ಅನುಪಮ್, ಖಜಾಂಚಿ ಮಲ್ಲಿನಾಥ ಜತ್ತರ್, ನಿರ್ದೇಶಕರಾಗಿ ಕೆ.ಆರ್.ಸತ್ಯನಾರಾಯಣ್, ವಿ.ಮಹೇಶ್, ಎಂ.ಮನೋಜ್ ಶೆಣೈ, ಸಿ.ಚಂದ್ರಶೇಖರ್, ಎಲ್.ಶಿವಣ್ಣ, ಜಿ.ಶಶಿಧರ್ ಆಯ್ಕೆಯಾಗಿದ್ದು, ಮೈಸೂರಿನ ಎಂಆರ್‌ಸಿ ಸಭಾಂಗಣದಲ್ಲಿ ನಡೆದ ಸಂಘದ ವಾರ್ಷಿಕ ಮಹಾಸಭೆ ಮತ್ತು ಪದಗ್ರಹಣ ಕಾರ್ಯಕ್ರಮದಲ್ಲಿ ನೂತನ ಪದಾಧಿಕಾರಿಗಳು ಅಧಿಕಾರ ವಹಿಸಿಕೊಂಡರು.

ಈ ವೇಳೆ ಮಾತನಾಡಿದ ಎಸ್. ಮೂರ್ತಿ, ಸಂಘದ ಗೌರವಾಧ್ಯಕ್ಷರಾದ ಮಾಜಿ ಶಾಸಕ ಸಾ.ರಾ.ಮಹೇಶ್ ಮತ್ತು ಎಂ.ಕೆ.ಸೋಮಶೇಖರ್ ಮಾರ್ಗದರ್ಶನದಲ್ಲಿ ಕಲ್ಯಾಣ ಮಂಟಪಗಳ ಸಮಸ್ಯೆ ಪರಿಹರಿಸುತ್ತೇವೆ. ಛತ್ರಗಳಲ್ಲಿ ನಡೆಯುವ ಶುಭ ಸಮಾರಂಭಗಳ ನಂತರ ಉಳಿಯುವ ಆಹಾರವನ್ನು ವ್ಯರ್ಥ ಮಾಡದೇ ಅಕ್ಷಯ ಆಹಾರ ಜೋಳಿಗೆ ಸಂಸ್ಥೆಗೆ ನೀಡಬೇಕೆಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಅಕ್ಷಯ ಆಹಾರ ಜೋಳಿಗೆ ಮುಖ್ಯಸ್ಥ ರಾಜೇಂದ್ರ ಅವರನ್ನು ಸನ್ಮಾನಿಸಲಾಯಿತು. ಮಾಜಿ ಶಾಸಕರಾದ ಸಾ.ರಾ.ಮಹೇಶ್, ಎಂ.ಕೆ.ಸೋಮಶೇಖರ್, ಶಾಸಕ ಟಿ.ಎಸ್.ಶ್ರೀವತ್ಸ, ಎಂ.ಎನ್.ವೆಂಕಟೇಶ್ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.



ಸಚಿವರಾದ ನಂತರ ಪ್ರಥಮ ಬಾರಿಗೆ ಬುಧವಾರ ಮೈಸೂರಿಗೆ ಆಗಮಿಸಿದ ಯುವ ಸಬಲೀಕರಣ, ಕ್ರೀಡಾ ಹಾಗೂ ಪರಿಶಿಷ್ಟ ಪಂಗಡ ಕಲ್ಯಾಣ ಸಚಿವರೂ ಆದ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ ಅವರನ್ನು ನಗರ ಪಾಲಿಕೆ ಸದಸ್ಯ ಲೋಕೇಶ್ ಪಿಯಾ ನೇತೃತ್ವದಲ್ಲಿ ಸ್ವಾಗತಿಸಿ, ಅದ್ಧೂರಿಯಾಗಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ದೇವರಾಜ್ ಕಾಟೂರು, ಮಂಜುನಾಥ, ಕೃಷ್ಣ, ಸತೀಶ, ಪ್ರಶಾಂತ್, ಆರ್ಯ, ಶಿವಲಿಂಗು, ಯೋಗೇಶ್, ನಾರಾಯಣ ಇನ್ನಿತರರಿದ್ದರು.



ಇತ್ತೀಚೆಗೆ ಶಿವಮೊಗ್ಗದಲ್ಲಿ ನಡೆದ ಓಪನ್ ಇಂಟರ್‌ನ್ಯಾಷನಲ್ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಮೈಸೂರಿನ ಆರ್.ನಂದನ್, ಕತಾ ಮತ್ತು ಕುಮಿತಾದಲ್ಲಿ ಚಿನ್ನದ ಪದಕ ಪಡೆದುಕೊಂಡಿದ್ದಾರೆ. ಈತ ಹೆಬ್ಬಾಳು ಬಡಾವಣೆ ಎರಡನೇ ಹಂತದ ನಿವಾಸಿ ಎಸ್.ರಾಜಾಚಾರಿ ಮತ್ತು ಎಸ್.ಶೋಭಾ ದಂಪತಿ ಪುತ್ರ.

ಎಲ್‌ಇಡಿ ಬಲ್ಬ್ ಬಳಕೆಯಿಂದ ವಿದ್ಯುತ್ ಬಿಲ್ ಶೇ.68ರಷ್ಟು ಕಡಿತ

ಬಾಕಿ ಕಡೆಗಳಿಗೂ ಕೇಂದ್ರ ನಿಯಂತ್ರಣ ಮೇಲ್ವಿಚಾರಣಾ ವ್ಯವಸ್ಥೆ ಅಳವಡಿಸಲು ಕ್ರಮ

ಮೈಸೂರು, ಆ.9(ಜಿಎ)–ಮೈಸೂರು ನಗರದಾದ್ಯಂತ ಎಲ್‌ಇಡಿ ಲೈಟ್ ಬೆಳಗುತ್ತಿರುವುದರಿಂದ ಪಾಲಿಕೆಗೆ ಬರುತ್ತಿದ್ದ ವಿದ್ಯುತ್ ಬಿಲ್‌ನಲ್ಲಿ ಶೇ.68ರಷ್ಟು ಕಡಿತವಾಗಿದ್ದು, ಸ್ವಯಂಚಾಲಿತ ಟೈಮರ್ ಮೂಲಕ ಬೀದಿದೀಪಗಳ ಮೇಲ್ವಿಚಾರಣಾ ವ್ಯವಸ್ಥೆ ಅಳವಡಿಸಿಕೊಂಡಿದ್ದಾರೆ. ಮೊದಲು ನಗರದಲ್ಲಿ ಬಳಸುತ್ತಿದ್ದ ಬೀದಿದಿಂದ ಪಾಲಿಕೆಗೆ 3 ಕೋಟಿ ರೂ. ವಿದ್ಯುತ್ ಬಿಲ್ ಬರುತಿತ್ತು. ಆದರೆ, ಈಗ ಸಂಪೂರ್ಣ ನಗರದಲ್ಲಿ ಎಲ್‌ಇಡಿ ದೀಪಗಳನ್ನು ಅಳವಡಿಕೆ ಮತ್ತು ಕೇಂದ್ರ ನಿಯಂತ್ರಣ ಮೇಲ್ವಿಚಾರಣಾ ವ್ಯವಸ್ಥೆ **(central control monitoring system)** ಅಳಡಿಸುವುದರಿಂದ 70 ಲಕ್ಷ ರೂ. ಬಿಲ್ ಬರುತ್ತಿದೆ. ಮೈಸೂರು ನಗರದಾದ್ಯಂತ 78 ಸಾವಿರ ಎಲ್‌ಇಡಿ ಬೀದಿದೀಪಗಳನ್ನು ಅಳವಡಿಸಿದ್ದು, ಈ ಎಲ್ಲಾ ದೀಪಗಳಿಗೂ ಕೇಂದ್ರ ನಿಯಂತ್ರಣ ಮೇಲ್ವಿಚಾರಣಾ ವ್ಯವಸ್ಥೆ (ccms) ಮಾಡಿರುವುದರಿಂದ ಇದರ ಸ್ವಯಂಚಾಲಿತ ಟೈಮರ್ ಮೂಲಕ ಸಂಜೆ 6.30ಕ್ಕೆ ಸ್ವಯಂಚಾಲಿತವಾಗಿ ಆನ್ ಆಗಿ ಬೆಳಗ್ಗೆ 6.30ಕ್ಕೆ ಆಫ್ ಆಗಲಿದೆ. 65 ವಾರ್ಡ್‌ಗಳಲ್ಲಿ ಈ ರೀತಿ ತಂತ್ರಜ್ಞಾನವನ್ನು ಅಳವಡಿಸಲಾಗಿದೆ.

ಬಾಕಿ 300ಕ್ಕೂ ಹೆಚ್ಚು ಬೀದಿದೀಪಗಳಿಗೆ ಈ ತಂತ್ರಜ್ಞಾನವನ್ನು ಅಳವಡಿಸಿಲ್ಲ. ಇದರಿಂದ ಬೀದಿ ದೀಪಗಳ ನಿರ್ವಹಣೆಯ ಸ್ವಿಚ್ ಬೋರ್ಡ್‌ಗಳು ಅಪಾಯದ ಸ್ಥಿತಿಯಲ್ಲಿವೆ. ನಗರದ ಬಹುತೇಕ ಎಲ್ಲಾ ವಾರ್ಡ್‌ಗಳು, ಬಡಾವಣೆಗಳಲ್ಲಿ ಬೀದಿದೀಪಗಳನ್ನು ಆಫ್ ಅಂಡ್ ಆನ್ ಮಾಡಲು ಕೈಗೆಟಕುವ ಅಂತರದಲ್ಲಿ ವೈಯರ್‌ಗಳ ವ್ಯವಸ್ಥೆ ಮಾಡಲಾಗಿದೆ. ಸಂಜೆಯಾಗುತ್ತಿದ್ದಂತೆ ಈ ವೈರ್‌ಗಳನ್ನು ಅಲ್ಲಿರುವ ಫ್ಯೂಜ್‌ಗೆ ಸಿಕ್ಕಿಸಬೇಕು. ಆಗ ಲೈಟ್ ಹೊತ್ತಿಕೊಳ್ಳುತ್ತದೆ. ಒಂದು ವೇಳೆ ಸ್ವಲ್ಪ ಹೆಚ್ಚು ಕಮ್ಮಿಯಾದರೂ ಅಪಾಯ ತಪ್ಪಿದ್ದಲ್ಲ. ಇನ್ನೂ ಕೆಲವೆಡೆ ಸ್ವಿಚ್ ಬೋರ್ಡ್‌ಗಳು ನೇತಾಡುತ್ತಿರುತ್ತವೆ. ಇವುಗಳಿಗೆ ಉತ್ತಮ ವ್ಯವಸ್ಥೆ ಇಲ್ಲದೆ ಇರುವುದೇ ಇದಕ್ಕೆ ಕಾರಣವಾಗಿದೆ.



ಮೈಸೂರು ಮಹಾನಗರ ಪಾಲಿಕೆ ವತಿಯಿಂದ ನಗರದ ಬೀದಿದೀಪಗಳ ನಿರ್ವಹಣೆಗಾಗಿ ವಿಶೇಷ ಟೆಂಡರ್ ನೀಡಿ ಅವರ ಮೂಲಕ ಸಂಪೂರ್ಣ ನಿರ್ವಹಣೆ ಮಾಡಲಾಗುತ್ತದೆ. ಆದರೂ ಗುತ್ತಿಗೆದಾರರು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ. ಇದು ಗುತ್ತಿಗೆ ದಾರರ ನಿರ್ಲಕ್ಷತೆಗೆ ಸಾಕ್ಷಿ. ಅನೇಕ ವಾರ್ಡ್‌ಗಳಲ್ಲಿ ಕತ್ತಲು ಆವರಿಸುತ್ತಿದ್ದಂತೆ ಸಾರ್ವಜನಿಕರೇ ಆ 2 ವೈಯರ್‌ಗಳನ್ನು ಹಿಡಿದು ಆನ್ ಮಾಡುವ ಸ್ಥಿತಿ ಇದೆ.

ಬಾಕಿ ದೀಪಗಳಿಗೂ ತಂತ್ರಜ್ಞಾನ ಅಳವಡಿಕೆ

ಮೈಸೂರು ನಗರಾದ್ಯಂತ 75 ಸಾವಿರ ಎಲ್‌ಇಡಿ ದೀಪಗಳನ್ನು ಅಳವಡಿಸಲಾಗಿದ್ದು, ಇದರಿಂದ ವಿದ್ಯುತ್ ಬಿಲ್ ಕಡಿಮೆ ಆಗಿದ್ದು, ನಗರದ ವಾಣಿವಿಲಾಸ ವಾಟರ್ ವರ್ಕ್ಸ್‌ನಲ್ಲಿ ಸ್ಥಾಪಿತವಾಗಿರುವ ಕೇಂದ್ರ ನಿಯಂತ್ರಣ ಮೇಲ್ವಿಚಾರಣಾ ವ್ಯವಸ್ಥೆ ಇದರ ಸ್ವಯಂಚಾಲಿತ ಟೈಮರ್ ಮೂಲಕ ಸಂಜೆ 6.30ಕ್ಕೆ ಸ್ವಯಂಚಾಲಿತವಾಗಿ ಆನ್ ಆಗಿ ಬೆಳಗ್ಗೆ 6.30ಕ್ಕೆ ಆಫ್ ಆಗಲಿದೆ. ಇದನ್ನು ಅಳಡಿಸುವುದರಿಂದ ಸಾಫ್ಟ್‌ವೇರ್ ಮೂಲಕ ಬೀದಿ ದೀಪಗಳನ್ನು ನಿಯಂತ್ರಿಸಬಹುದಾಗಿದೆ. ಮೊಬೈಲ್ ಮೂಲಕವು ಇದನ್ನು ನಿಯಂತ್ರಿಸಬಹುದಾಗಿದೆ. ಬಾಕಿ 200 ರಿಂದ 300 ದೀಪಗಳಿಗೆ ಈ ತಂತ್ರಜ್ಞಾನವನ್ನು ಶೀಘ್ರದಲ್ಲಿ ಅಳವಡಿಸಲಾಗುವುದು.

–ಟಿ.ಎಸ್.ಸತ್ಯಮೂರ್ತಿ, ಪಾಲಿಕೆ ಎಲೆಕ್ಟ್ರಿಕಲ್ ವಿಭಾಗದ ಎಕ್ಸಿಕ್ಯುಟಿವ್ ಇಂಜಿನಿಯರ್

ಕ್ವಿಟ್ ಇಂಡಿಯಾ ಚಳವಳಿ ದಿನಾಚರಣೆ



ಮೈಸೂರು, ಆ.9– ಮೈಸೂರು ಸ್ವಾತಂತ್ರ್ಯ ಹೋರಾಟಗಾರರ ಸಂಘದ ವತಿಯಿಂದ ಬುಧವಾರ 81ನೇ ವರ್ಷದ ಕ್ವಿಟ್ ಇಂಡಿಯಾ (ಬ್ರಿಟಿಷರೇ ಭಾರತ ಬಿಟ್ಟು ತೊಲಗಿ) ಚಳವಳಿಯ ದಿನ ಆಚರಿಸಲಾಯಿತು.

ಸುಬ್ಬರಾಯನಕೆರೆ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದ ಆವರಣದಲ್ಲಿರುವ ಸಂಘದ ಮುಂಭಾಗವಿರುವ ಗಾಂಧೀಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಧ್ವಜಾರೋಹಣ ನೆರವೇರಿಸಿ ಹಾಗೂ ರಾಷ್ಟ್ರಗೀತೆ ಹಾಡುವುದರ ಮೂಲಕ 81ನೇ ವರ್ಷದ ಕ್ವಿಟ್ ಇಂಡಿಯಾ ಚಳವಳಿ ದಿನವನ್ನು ಆಚರಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ವೈ.ಸಿ.ರೇವಣ್ಣ ಮಾತನಾಡಿ, ಸ್ವಾತಂತ್ರ್ಯ ಹೋರಾಟಗಾರರಲ್ಲಿ ಹೋರಾಟದ ಕಿಚ್ಚು ಹಚ್ಚಲು ಗಾಂಧೀಜಿಯವರು 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಈ ಘೋಷವಾಕ್ಯದ ಚಳವಳಿಯನ್ನು ಆರಂಭಿಸಿದರು. ಇದು ದೇಶವನ್ನು ಸ್ವಾತಂತ್ರ್ಯಗೊಳಿಸುವಲ್ಲಿ ಮಹತ್ವದ ಹಂತವಾಯಿತು ಎಂದು ಹೇಳಿದರು.

ನಗರಪಾಲಿಕೆ ಸದಸ್ಯೆ ಪ್ರಮೀಳಾ ಭರತ್ ಮಾತನಾಡಿ, ಬ್ರಿಟಿಷರು ನಮ್ಮ ದೇಶದ ಸಂಪತ್ತು ಲೂಟಿ ಮಾಡಿದರು. ಇವರ ಈ ದೌರ್ಜನ್ಯ ವಿರೋಧಿಸಿ ಸಂಗೊಳ್ಳಿ ರಾಯಣ್ಣ ಕಿತ್ತೂರು ರಾಣಿ ಚೆನ್ನಮ್ಮ ಸೇರಿ ಹಲವರು ಹೋರಾಡಿ ಬಲಿದಾನ ಮಾಡಿದರು. ದೇಶಕ್ಕೆ ಸ್ವಾತಂತ್ರ್ಯ ಲಭಿಸಲು ಕ್ವಿಟ್ ಇಂಡಿಯಾ ಮಹತ್ವ ಚಳವಳಿಯಾಗಿದ್ದು, ಗಾಂಧೀಜಿ ಅವರ ನೇತೃತ್ವದಲ್ಲಿ ನಡೆದ ಅಹಿಂಸಾತ್ಮಕ ಹೋರಾಟದ ಫಲವಾಗಿ 1947ರಲ್ಲಿ ಸ್ವಾತಂತ್ರ್ಯ ದೊರೆಯಿತು ಎಂದು ಸ್ಮರಿಸಿದರು. ಈ ಸಂದರ್ಭದಲ್ಲಿ ಪರಮೇಶ್ ಗೌಡ, ಸುರೇಂದ್ರ, ಪಾಪಣ್ಣ, ರಾಜೇಂದ್ರ, ಸುದರ್ಶನ್, ಶ್ರೀನಿವಾಸ್, ವಿಘ್ನೇಶ್ವರ ಭಟ್, ರಾಜೇಂದ್ರ ಸುಕನ್ಯ, ಎಸ್.ಎನ್.ರಾಜೇಶ್, ರಾಕೇಶ್, ಪವನ್ ಸಿದ್ದರಾಮು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ರಸ್ತೆಬದಿ ನಿಂತಿದ್ದ ಲಾರಿ ಬೆಂಕಿಗಾಹುತಿ



ಮೈಸೂರು,ಆ.9 (ಎಂಕೆ)–ಮೈಸೂರು–ನಂಜನಗೂಡು ರಸ್ತೆಯಲ್ಲಿ ನಿಂತಿದ್ದ ಲಾರಿ ಆಕಸ್ಮಿಕ ಬೆಂಕಿಯಿಂದ ಹೊತ್ತಿ ಉರಿದ ಘಟನೆ ಬುಧವಾರ ರಾತ್ರಿ ನಡೆದಿದ್ದು, ಅದೃಷ್ಟವಶಾತ್ ಲಾರಿ ಚಾಲಕ ಹಾಗೂ ಕ್ಲೀನರ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಎಪಿಎಂಸಿ ಬಂಡಿಪಾಳ್ಯದ ಸಮೀಪದಲ್ಲಿನ ರಿಂಗ್‌ರಸ್ತೆ ಬಳಿ ಗುಜರಾತ್‌ನಿಂದ ಮೇವು(ಹೊಟ್ಟು) ತಂದಿದ್ದ ಲಾರಿಯಲ್ಲಿ ರಾತ್ರಿ 10.30ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದ್ದು, ಕ್ಷಣಾರ್ಧದಲ್ಲಿಯೇ ಹೊತ್ತಿ ಉರಿಯಲಾರಂಭಿಸಿದೆ. ಹೊಟ್ಟು ತುಂಬಿದ್ದರಿಂದ ಬಹುತೇಕ ಸುಟ್ಟು ಕರಕಲಾಗಿದ್ದು, ಊಟಕ್ಕೆಂದು ರಸ್ತೆಬದಿ ಲಾರಿ ನಿಲ್ಲಿಸಿದ್ದ ಚಾಲಕ ಮತ್ತು ಕ್ಲೀನರ್ ಅಪಾಯದಿಂದ ಪಾರಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸರಸ್ವತಿಪುರಂ ಅಗ್ನಿಶಾಮಕ ಸಿಬ್ಬಂದಿ ಗಂಟೆಗೂ ಹೆಚ್ಚು ಕಾಲ ಕಾರ್ಯಾಚರಣೆ ನಡೆಸಿ, ಬೆಂಕಿ ನಂದಿದ್ದಾರೆ.

ಆ.14ರವರೆಗೆ ಉಚಿತ ಸಲಹೆ, ಔಷಧ ಶಿಬಿರ

ಮೈಸೂರು,ಆ.9–ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ವತಿಯಿಂದ ಪಾಲಿಸಿಸ್ಟಿಕ್ ಓವೇರಿಯನ್ ಸಿಂಡ್ರೋಮ್ (PCOS) ಬಗ್ಗೆ ಉಚಿತ ಸಲಹೆ ಮತ್ತು ಔಷಧ ಶಿಬಿರವನ್ನು ಆ.8ರಿಂದ ಆ.14ರವರೆಗೆ ಆಯೋಜಿಸಲಾಗಿದೆ. ಆಸಕ್ತರು ಡಾ.ಧನಲಕ್ಷ್ಮೀ ಇವರನ್ನು ಬೆಳಗ್ಗೆ 9ರಿಂದ ಸಂಜೆ 4 ರವರೆಗೆ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಇಲ್ಲಿ ಬಂದು ನೋಂದಣಿ ಮಾಡಿಸಿ ಶಿಬಿರದ ಪ್ರಯೋಜನ ಪಡೆಯಬಹುದು. ಮಾಹಿತಿಗೆ ಮೊ.ನಂ.7619160493 ಸಂಪರ್ಕಿಸಬಹುದು ಎಂದು ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು–ಆಸ್ಪತ್ರೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರಂಥ ಸ್ವರೂಪ ನಿರ್ವಹಿಸಲು ತಂತ್ರಜ್ಞಾನ ಅಳವಡಿಸಿ

ಡಾ.ಎಸ್.ಆರ್.ರಂಗನಾಥನ್ 131ನೇ ಜನ್ಮದಿನ ಅಂಗವಾಗಿ 'ಗ್ರಂಥಪಾಲಕರ ದಿನ' ಆಚರಣೆ



ಮೈಸೂರು,ಆ.9(ಜಿಎ)–ಬದಲಾಗುತ್ತಿರುವ ಗ್ರಂಥ ಸ್ವರೂಪಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಬೇಕಾಗುವ ತಂತ್ರಜ್ಞಾನವನ್ನು ಅತ್ಯಂತ ಶೀಘ್ರದಲ್ಲಿ ಅಳವಡಿಸಿಕೊಳ್ಳಬೇಕೆಂದು ಗ್ರಂಥಪಾಲಕರಿಗೆ ಹೈದರಾಬಾದ್‌ನ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ನಿವೃತ್ತ ಪ್ರಾಧ್ಯಾಪಕ ಎನ್.ಜಿ.ಸತೀಶ್ ಕರೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದಲ್ಲಿ ಡಾ.ಎಸ್.ಆರ್.ರಂಗನಾಥನ್ ಅವರ 131ನೇ ಜನ್ಮದಿನದ ಅಂಗವಾಗಿ ಏರ್ಪಡಿಸಿದ್ದ 'ಗ್ರಂಥಪಾಲಕರ ದಿನ'ದ ಕಾರ್ಯಕ್ರಮ ಉದ್ಘಾಟಿಸಿ, ರಂಗನಾಥನ್ ಸೂತ್ರಗಳ ಮರು ಕ್ರಮಣಿಕೆಯ ಬಗ್ಗೆ ಉಪನ್ಯಾಸ ನೀಡಿದರು.

ಈ ವೇಳೆ ಮಾತನಾಡಿದ ಅವರು, ಓದುಗರೇ ಪ್ರಥಮ ಎಂಬ ತತ್ವವನ್ನು ಮನಸ್ಸಿನಲ್ಲಿಟ್ಟುಕೊಂಡು ಗ್ರಂಥಪಾಲಕರು ತಮ್ಮ ಸೇವೆಯನ್ನು ಪರಿಷ್ಕರಿಸಿಕೊಳ್ಳಬೇಕು. ಗ್ರಂಥಪಾಲಕರು ಸುಳ್ಳು ಮಾಹಿತಿ ಹರಿಯುವಿಕೆಯ ತಡೆಯುವಿಕೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುವ ಬಗ್ಗೆ ಯೋಚಿಸಬೇಕೆಂದು ಸೂಚಿಸಿದರು.


ಮದ್ರಾಸ್ ವಿಶ್ವವಿದ್ಯಾನಿಲಯದ ಹಾಗೂ ಪ್ರಲೇಖನ ಮತ್ತು ಸಂಶೋಧನ ತರಬೇತಿ ಕೇಂದ್ರದ ನಿವೃತ್ತ ಪ್ರಾಧ್ಯಾಪಕ ಪ್ರೊ ಕೆ.ಎಸ್. ರಾಘವನ್ ಮಾತನಾಡಿ, ಗ್ರಂಥಾಲಯಗಳಿಗೆ ಓದುಗರ ಭೇಟಿಯ ಕ್ಷೀಣತೆಯ ಸಮಸ್ಯೆ ಬಹಳ ಮುಂಚಿನಿಂದಲೂ ಇದೆ. ಓದುಗರ ಸಂಖ್ಯೆಯನ್ನು ಹೆಚ್ಚಿಸಲು ದೆಹಲಿ ಸಾರ್ವಜನಿಕ ಗ್ರಂಥಾಲಯದಲ್ಲಿ ವೈದ್ಯರ ಹಾಗೂ ವಕೀಲರ ಸಮಾಲೋಚನೆಯನ್ನು ಓದುಗರೊಂದಿಗೆ ಉಚಿತವಾಗಿ ಏರ್ಪಡಿಸಿದ್ದು, ಇದರಿಂದ ಪರೋಕ್ಷವಾಗಿ ಗ್ರಂಥಾಲಯದಲ್ಲಿನ ಪುಸ್ತಕಗಳ ಉಪಯೋಗವನ್ನು ಹೆಚ್ಚಿಸುವ ಪ್ರಯೋಗ ಈ ಹಿಂದೆ ಯಶಸ್ವಿಯಾಗಿದೆ ಎಂದು ಹೇಳಿದರು.

ಗ್ರಂಥ ಸಂರಕ್ಷಣೆ ಕಾರ್ಯದಲ್ಲಿ ತೊಡಗಿರಬೇಕಾದ ಅನಿವಾರ್ಯತೆ ಇದೆ. ಬಹುಶಿಸ್ತೀಯ ಮಾದರಿಯಾಗಿ ಗ್ರಂಥಾಲಯ ವಿಜ್ಞಾನ ವಿಭಾಗಗಳು "ಐ–ಸ್ಕೂಲ್" ಎಂಬ ಹೊಸ ವ್ಯವಸ್ಥೆ ಹೊರತಂದಿದೆ. ಗ್ರಂಥಾಲಯಗಳು ತಂತ್ರಜ್ಞಾನಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿದೆ ಎಂಬುದನ್ನು ವಿವರಿಸಿದರು.

ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಅಧ್ಯಕ್ಷ ಪ್ರೊ.ಎನ್.ಎಸ್.ಹರಿನಾರಾಯಣ ಮಾತನಾಡಿ, ಗ್ರಂಥಾಲಯದ ಪಿತಾಮಹ ಡಾ.ಎಸ್.ಆರ್ ರಂಗನಾಥನ್ ಅವರ ಜನ್ಮದಿನ ನೆನಪಿನಲ್ಲಿ ಪ್ರತೀ ವರ್ಷವು ಆಗಸ್ಟ್ 9 ಅಥವಾ ಆಗಸ್ಟ್ 12ರಂದು ರಾಷ್ಟ್ರೀಯ ಗ್ರಂಥಪಾಲಕರ ದಿನವೆಂದು ಆಚರಿಸಲಾಗುತ್ತಿದೆ ಈ ವರ್ಷ ಅವರ 131ನೇ ಜನ್ಮದಿನವನ್ನು ಭಾರತಾದ್ಯಂತ ಆಚರಿಸಲಾಗುತ್ತಿದೆ. ಗ್ರಂಥಾಲಯಗಳಲ್ಲಿ ಎಲ್ಲರಿಗೂ ಸಿಗುವಂತೆ ಮುಕ್ತದ್ವಾರ ಪದ್ಧತಿಯನ್ನು ಒಂದು ಶತಮಾನದ ಹಿಂದೆಯೇ ಪರಿಚಯಿಸಿದ ಕೀರ್ತಿ ರಂಗನಾಥನ್ ಅವರದ್ದು. ಅವರ ಕೃತಿಗಳಾದ ಗ್ರಂಥಾಲಯ ಪಂಚಸೂತ್ರಗಳು, ದ್ವಿಬಿಂದು ವರ್ಗೀಕರಣ ಮುಂತಾದವುಗಳು ವಿಶ್ವಮಾನ್ಯತೆ ಪಡೆದಿವೆ ಎಂದರು.

ಮಾಹಿತಿ ಸಂಸ್ಕರಣಕ್ಕೆ ಕೊಟ್ಟಿರುವ ಮೂಲ ತತ್ವಗಳು ಇಂದಿನ ಜ್ಞಾನ ಸಂಸ್ಕರಣೆಯಲ್ಲಿ ಪ್ರಸ್ತುತವಾಗಿದೆ. ಶಬ್ದಬ್ರಹ್ಮರಾದ ರಂಗನಾಥನ್ ಅವರು ಗ್ರಂಥಾಲಯ ವಿಜ್ಞಾನದಲ್ಲಿ ಅನೇಕ ಪರಿಭಾಷಿಕ ಪದಗಳನ್ನು ಸೃಷ್ಟಿಸಿದ್ದಾರೆ. ಪಾಶ್ಚಾತ್ಯ ವಿದ್ವಾಂಸರಾದ ಯುಗೀನ್ ಗಾರ್‌ಫೀಲ್ಡ್‌ರವರು "ರಂಗನಾಥನ್ ಅವರು ಗ್ರಂಥಾಲಯ ವಿಜ್ಞಾನದ ಐನ್‌ಸ್ಟೈನ್" ಎಂದಿದ್ದಾರೆ ಎಂದು ಸ್ಮರಿಸಿದರು. ಕಾರ್ಯಕ್ರಮದಲ್ಲಿ ಮೈಸೂರು ವಿವಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಅಧ್ಯಕ್ಷೆ ಪ್ರೊ.ಎಂ.ಎಸ್. ಸಪ್ನ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ಎಂ. ಚಂದ್ರಶೇಖರ, ಪ್ರೊ.ಆದಿತುಕುಮಾರಿ, ಡಾ.ಸುನೀಲ್‌ಕುಮಾರ್, ಡಾ.ನಿವೇದಿತ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.8.2023 ಗುರುವಾರ, ಮಳೆ ನಕ್ಷತ್ರ: ಆಶ್ಲೇಷ 04.08.2023ರಿಂದ 16.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಕೃತ್ತಿಕ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆವರೆಗೆ

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್–ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಡಿಸಿ ಕಚೇರಿ ಹಿಂಭಾಗ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.

■ **ಉತ್ತಿಷ್ಠ ಭಾರತ ಪ್ರತಿಷ್ಠಾನ, ಗ್ರೀನ್ ಗ್ರಾಮೀಣಾಭಿವೃದ್ಧಿ ಮತ್ತು ತರಬೇತಿ ಸಂಸ್ಥೆ :** ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಕವಿಗೋಷ್ಠಿ, ಉದ್ಘಾಟನೆ : ಹಿರಿಯ ಕವಯತ್ರಿ ಡಾ. ಪುಷ್ಪ ಅಯ್ಯಂಗಾರ್, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮುಖ್ಯ ಅತಿಥಿಗಳು: ಹಿರಿಯ ಸಮಾಜ ಸೇವಕ ಡಾ. ಕೆ.ರಘುರಾವ್ ವಾಜಪೇಯಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರದ ಅಧ್ಯಕ್ಷ ಎಂಪಿ ಪ್ರಭುಸ್ವಾಮಿ, ಸನ್ಮಾನ: ಎನ್. ಶ್ರೀಧರ ದೀಕ್ಷಿತ್, ಸ್ಥಳ: ನಿಮಿಷಾಂಬ ನಗರದ ಹಿರಿಯರ ಹಗಲು ಯೋಗಕ್ಷೇಮ ಕೇಂದ್ರ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಆದ್ಯಗೋವಿಂದಾಚಾರ್ಯ ಅವರಿಂದ ಭಾಗವತ ಸಪ್ತಾಹ ಕುರಿತು ಪ್ರವಚನ, ಸ್ಥಳ: ಶ್ರೀರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ, ಸಂಜೆ 4.45ರಿಂದ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ಪ್ರೊ. ಮಳಲಿ ವಸಂತಕುಮಾರ್ ಅವರ 78ನೇ ನೆನಪಿನ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಹಿರಿಯ ಸಾಹಿತಿ ಪ್ರೊ. ಸಿ.ಪಿ.ಕೆ., ಪ್ರಶಸ್ತಿ ಪುರಸ್ಕೃತರು: ಹಿರಿಯ ಜಾನಪದ ವಿದ್ವಾಂಸ ಪ್ರೊ. ಜಿ.ಎಸ್. ಭಟ್ಟ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ದತ್ತಿ ಪ್ರಶಸ್ತಿ ಪ್ರದಾನ : ಹಿರಿಯ ವಿದ್ವಾಂಸ ಪ್ರೊ. ಅನಂತರಾಮು, ಅಭಿನಂದನಾ ನುಡಿ: ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಎಸ್.ಎನ್. ಹೆಗ್ಡೆ, ಉಪಸ್ಥಿತರು : ಶ್ರೀಮತಿ ಶಾಂತ ಮಳಲಿ ವಸಂತಕುಮಾರ್, ಸ್ಥಳ: ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಶ್ರೀ ಮಾಧವಚಾರ್ಯ ಅವರಿಂದ ಕಿಷ್ಕಿಂದಾ ಕಾಂಡ ಕುರಿತು ಪ್ರವಚನ, ಸ್ಥಳ:ವಿದ್ಯಾಪೀಠದ ಆವರಣ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ 7ರವರೆಗೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಅಘಹರಾನಂದ ಅವರಿಂದ ಸೋದರ ಸಂನ್ಯಾಸಿಗಳೊಂದಿಗೆ ಸ್ವಾಮಿ ವಿವೇಕಾನಂದರು ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ,, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್ :** ವಿದ್ವಾನ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಂಜಲಿಯ ಯೋಗ ಸೂತ್ರಗಳು–ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಗೋಕುಲಂ, ಸಂಜೆ 6ಕ್ಕೆ.

■ **ಶ್ರೀಕೃಷ್ಣಧಾಮ :** ಶ್ರೀ ಶ್ರೀ ಪ್ರಸನ್ನತೀರ್ಥ ಶ್ರೀಪಾದಂಗಳವರ 36ನೇ ಚಾತುರ್ಮಾಸ್ಯದ ಪ್ರಯುಕ್ತ ಸಾಂಸ್ಕೃತಿಕ ಹಬ್ಬ, ಕೀರ್ತನ್ ಹೊಳ್ಳ ಅವರಿಂದ ದಾಸಕೀರ್ತನಾಮೃತ, ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ, ಸಂಜೆ 7 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ–ಮೈಸೂರಿನ ಎನ್. ರವಿಶಂಕರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 7.15 ಭಾವಗೀತೆ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ–ಮೈಸೂರು ಉಮೇಶ್, 8.40 ಪಂಪನ ಪೆಂಪು–ಪಂಪ ಭಾರತದ ನಾಟಕೀಯ ಸನ್ನಿವೇಶಗಳನ್ನಾಧರಿಸಿದ ಕಾರ್ಯಕ್ರಮ. ಪ್ರಸ್ತುತಿ–ಜಿ.ಶಾಂತಕುಮಾರ್, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಡಾ.ಆರ್.ಎನ್.ಶ್ರೀಲತಾ– ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಎಂ.ಎ. ಶೋಭ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಎನ್. ಜ್ಯೋತಿ, ಸಿ. ವಿಶ್ವನಾಥ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಜನಪದ ಸಂಗೀತ– ಸಿದ್ದಯ್ಯ ಮತ್ತು ಸಂಗಡಿಗರು, 4.30 ರಸಮಂಜರಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ರೇಷ್ಮೆ ಇಲಾಖೆಯಿಂದ ದೊರೆಯುವ ಸೌಲಭ್ಯಗಳನ್ನು ಕುರಿತ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಹೆಚ್.ಸಿ.ನಾಗೇಂದ್ರಪ್ಪ, 8.00 ಸಂಸದ್ ಸಮೀಕ್ಷಾ, 8.15 ಯುವವಾಣಿ–ಚಿತ್ರ ಚಿತ್ತಾರ, ಪ್ರಸ್ತುತಪಡಿಸುತ್ತಾರೆ ಮೈಸೂರಿನ ಜ್ಞಾನೋದಯ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಶರಧಿ ಶ್ರೀ ಬಿ.ವಿ, 9.30 ಕನ್ನಡ ಭಾರತಿ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪದ ವರದಿ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಆಗಸ್ಟ್ 10 ಗುರುವಾರ 2023

ಸಂಪುಟ: 44 | ಸಂಚಿಕೆ: 116 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4



ಮೈಸೂರಿನ ಪಾರಂಪರಿಕ ದೊಡ್ಡ ಗಡಿಯಾರ ನವೀಕರಣ ಆರಂಭ

- 43 ಲಕ್ಷ ವೆಚ್ಚದಲ್ಲಿ ದುರಸ್ತಿ
- 75 ಲಕ್ಷ ವೆಚ್ಚದಲ್ಲಿ ಸರ್ಕಾರಿ ಅತಿಥಿ ಗೃಹದ ಸ್ವಾಗತ ಕಮಾನು ನವೀಕರಣ
- ಲಲಿತ ಮಹಲ್ ರಸ್ತೆ ಆರ್ಚ್ ಕಂಬಗಳ ಸ್ಥಳಾಂತರಕ್ಕೆ ಡಿಪಿಆರ್
- ಮಹಾರಾಣಿ ಕಾಲೇಜು ಕಮಾನು, ಜೈಲು ಬಳಿಯ ಗುಮ್ಮಿ ಸ್ಮಾರಕಗಳಿಗೂ ಕಾಯಕಲ್ಪಕ್ಕೆ ಪಾಲಿಕೆ ಸಿದ್ಧತೆ

ಮೈಸೂರು, ಆ.9(ಆರ್‌ಕೆ)–ಮೈಸೂರಿನ ಪಾರಂಪರಿಕ ಸ್ಮಾರಕಗಳನ್ನು ನವೀಕರಿಸಿ, ಸಂರಕ್ಷಿಸಲು ಮೈಸೂರು ಮಹಾ ನಗರಪಾಲಿಕೆ ಮುಂದಾಗಿದೆ.


ಶಿಥಿಲಾವಸ್ಥೆಯಲ್ಲಿರುವ ಮೈಸೂರಿನ ಹೃದಯ ಭಾಗದ ದೊಡ್ಡ ಗಡಿಯಾರ ಪಾರಂಪರಿಕ ಸ್ಮಾರಕದ ದುರಸ್ತಿ ಕಾಮಗಾರಿಗೆ ಕಡೆಗೂ ಮೈಸೂರು ಮಹಾ ನಗರಪಾಲಿಕೆ ಬುಧವಾರ ಚಾಲನೆ ನೀಡಿದೆ. ಶಾಸಕ ಕೆ. ಹರೀಶ್‌ಗೌಡ ಹಾಗೂ ಮೇಯರ್ ಶಿವಕುಮಾರ್ ನವೀಕರಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದರು. ದೊಡ್ಡ ಗಡಿಯಾರದ ತಳಹದಿಯಲ್ಲಿ ಇಲಿ–ಹೆಗ್ಗಣಗಳು ರಂಧ್ರ ಕೊರೆದು ನೆಲೆ ಮಾಡಿಕೊಂಡಿದ್ದವಲ್ಲದೇ, ಮಳೆ–ಬಿಸಿಲಿನಿಂದಾಗಿ ಕಟ್ಟಡದ ಮೇಲ್ಛಾವಣಿಯ ಕಬ್ಬಿಣ ತುಕ್ಕು ಹಿಡಿದಿದ್ದವು. ಕಳೆದ ಹಲವು ವರ್ಷಗಳಿಂದ ಪಾರಂಪರಿಕ ತಜ್ಞರಾದ ಮೈಸೂರು ವಿಶ್ವವಿದ್ಯಾನಿಲಯದ ಪುರಾತತ್ವ, ಪ್ರಾಚೀನ ಇತಿಹಾಸ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ. ಎನ್.ಎಸ್. ರಂಗರಾಜ್ ಅವರು ದೊಡ್ಡ ಗಡಿಯಾರ ಪಾರಂಪರಿಕ ಕಟ್ಟಡ ದುಸ್ಥಿತಿಯಲ್ಲಿದ್ದು,

● 10ನೇ ಪುಟಕ್ಕೆ

ನಿರುದ್ಯೋಗ ನಿವಾರಣೆ, ವಲಸೆ ತಡೆಯುವುದು, ಕೃಷಿಯನ್ನೇ ಪ್ರಮುಖ ಆದಾಯ ಮೂಲವಾಗಿಸಲು ಸಹಕಾರ ಕೃಷಿ ಪದ್ಧತಿ ಜಾರಿ

ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾಹಿತಿ

- ಕೇಂದ್ರ, ರಾಜ್ಯದ ವಿವಿಧ ಯೋಜನೆ ಒಂದೇ ಸೂರಿನಡಿ ತಂದು ಸಮೂಹ ಕೃಷಿಗೆ ಒತ್ತು
- ಈ ಪದ್ಧತಿಯಡಿ ಬೆಳೆದ ಹಣ್ಣು–ತರಕಾರಿ, ಆಹಾರ ಪದಾರ್ಥಗಳ ಸರ್ಕಾರಿ ಸಂಸ್ಥೆಗಳ ಮೂಲಕವೇ ಖರೀದಿ
- ಸ್ತ್ರೀಶಕ್ತಿ ಮಾದರಿ ಕೃಷಿ ಪದ್ಧತಿ ಜಾರಿಗೆ ನಿರ್ಧಾರ
- ಇಂತಹ ವ್ಯವಸ್ಥೆ ರೂಪಿಸಿಕೊಳ್ಳಲು ರಾಜ್ಯಾದ್ಯಂತ ಎಲ್ಲರಿಗೂ ಮುಕ್ತಾವಕಾಶ



ಬೆಂಗಳೂರು, ಆ. 9(ಕೆಎಂಶಿ)– ನಿರುದ್ಯೋಗ ಸಮಸ್ಯೆ ನಿವಾರಣೆ, ನಗರಗಳಿಗೆ ವಲಸೆ ತಪ್ಪಿಸಿ ಕೃಷಿಯನ್ನು ಆದಾಯದ ಮೂಲವಾಗಿ ಮಾಡಲು 'ಸಹಕಾರ ಕೃಷಿ ಪದ್ಧತಿ'ಯನ್ನು ಜಾರಿಗೆ ತರುವುದಾಗಿ ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಇಂದಿಲ್ಲಿ ಪ್ರಕಟಿಸಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳನ್ನು ಒಂದೇ ಸೂರಿನಡಿ ತಂದು ಸಮೂಹ ಕೃಷಿಗೆ ಒತ್ತು ನೀಡುವ ಉದ್ದೇಶದಿಂದ ಇಂತಹ ತೀರ್ಮಾನ ಕೈಗೊಂಡಿದ್ದೇವೆ. ಸಮೂಹ ಕೃಷಿಯಲ್ಲಿ ಉತ್ಪಾದಿಸಿ ಹಣ್ಣು, ತರಕಾರಿ ಸೇರಿದಂತೆ ಎಲ್ಲಾ ಬಗೆಯ ಉತ್ಪಾದನೆಗೊಂಡ ಆಹಾರ ಪದಾರ್ಥಗಳನ್ನು ಸರ್ಕಾರದ ಸಂಸ್ಥೆಗಳ ಮೂಲಕ ಖರೀದಿಸಿ ಮಾರಾಟ ಮಾಡುವ ವ್ಯವಸ್ಥೆಗೆ ಒತ್ತು ಕೊಡಲಾಗುವುದು. ಸರ್ಕಾರದ ಭೂಮಿ ರಿಯಲ್ ಎಸ್ಟೇಟ್ ಉದ್ಯಮಿಗಳ ಪಾಲಾಗುತ್ತಿದೆ. ಅದನ್ನು ತಪ್ಪಿಸಲು ಪಾಳು ಬಿದ್ದಿರುವ ಜಮೀನನ್ನು ಒಂದೆಡೆ ಸೇರಿಸಿ ಇಂತಹ ಸಹಕಾರ ಸಂಘಗಳಿಗೆ ನೀಡಲಾಗುವುದು. ಸ್ತ್ರೀ ಶಕ್ತಿ ಸಂಘದ ಮಾದರಿಯಲ್ಲೇ ಈ ಕೃಷಿ ಪದ್ಧತಿ ಜಾರಿಗೆ ಬರಲಿದೆ. ಪ್ರಾಯೋಗಿಕವಾಗಿ ಮೈಸೂರು ಜಿಲ್ಲೆಯಿಂದ ಆರಂಭಿಸಲು ತೀರ್ಮಾನಿಸಿದ್ದು, ಸರ್ಕಾರ ಭೂಮಿಯನ್ನು ಗುರುತಿಸಿ ಗಡಿ ನಿಗದಿ ಪಡಿಸುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶ ಮಾಡಿದ್ದೇನೆ. ಇದು ಕೇವಲ ಮೈಸೂರು ಜಿಲ್ಲೆಗೆ ಸೀಮಿತವಲ್ಲ. ಇಡೀ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗುವುದು.

● 6ನೇ ಪುಟಕ್ಕೆ

ಮೈಸೂರು–ಚೆನ್ನೈ ಬುಲೆಟ್ ಟ್ರೈನ್ ಮಾರ್ಗದ ವೈಮಾನಿಕ ಸರ್ವೆ ಶೀಘ್ರ ಆರಂಭ



ಮೈಸೂರು, ಆ.9– ಮೈಸೂರು–ಚೆನ್ನೈ ಬುಲೆಟ್ ಟ್ರೈನ್ ಮಾರ್ಗ ನಿರ್ಮಾಣಕ್ಕಾಗಿ ಶೀಘ್ರದಲ್ಲೇ ವೈಮಾನಿಕ ಸರ್ವೆ ಕಾರ್ಯ ನಡೆಯಲಿದ್ದು, ನಂತರ ಡಿಪಿಆರ್ ಸಿದ್ಧಪಡಿಸಲಾಗುತ್ತದೆ.

ಬೆಂಗಳೂರು –ಚೆನ್ನೈ ಎಕ್ಸ್‌ಪ್ರೆಸ್ ಕಾರಿಡಾರ್ ಕಾಮಗಾರಿ ಪ್ರಗತಿಯಲ್ಲಿದ್ದು, ಇದರ ನಡುವೆಯೇ ಮೈಸೂರು–ಚೆನ್ನೈ ಬುಲೆಟ್ ಟ್ರೈನ್ ಯೋಜನೆಯ ಹಳಿ ನಿರ್ಮಾಣಕ್ಕೆ ಭೂ ಸಮೀಕ್ಷೆ ಕೆಲಸಗಳು ಮುಗಿದಿದ್ದು, ವೈಮಾನಿಕ ಸಮೀಕ್ಷೆ ಮಾತ್ರ ಬಾಕಿ ಇದೆ. ನ್ಯಾಷನಲ್ ಹೈಸ್ಪೀಡ್ ರೈಲ್ ಕಾರ್ಪೊರೇಷನ್ ಲಿಮಿಟೆಡ್ ಸಂಸ್ಥೆ ವತಿಯಿಂದ ದೇಶದ ವಿವಿಧೆಡೆ ಬುಲೆಟ್ ಟ್ರೈನ್ ಮಾರ್ಗ ನಿರ್ಮಾಣ ಮಾಡುತ್ತಿದ್ದು, ಇದರ ಭಾಗವಾಗಿ ಮೈಸೂರು–ಚೆನ್ನೈ ಮಾರ್ಗದಲ್ಲಿ ಬುಲೆಟ್ ಟ್ರೈನ್ ಹಳಿ ನಿರ್ಮಾಣದ ಸರ್ವೆ ಕಾರ್ಯ ಪೂರ್ಣಗೊಳಿಸಲಾಗಿದೆ. ಮೈಸೂರಿನಿಂದ ಚೆನ್ನೈವರೆಗೆ 435 ಕಿ.ಮೀ. ಬುಲೆಟ್ ರೈಲು ಮಾರ್ಗ ನಿರ್ಮಾಣವಾಗಬೇಕಿದ್ದು, ಉಪಗ್ರಹ ಸರ್ವೆ, ಭೂಮಿ ಸರ್ವೆ, ನಕ್ಷೆ, ಅಂದಾಜು ಪಟ್ಟಿ ತಯಾರಿಸುವ ಹೊಣೆಯನ್ನು ಹೈದರಾಬಾದ್ ಮೂಲದ ಸಂಸ್ಥೆಗೆ ನೀಡಲಾಗಿದ್ದು, ಚೆನ್ನೈ ಕಡೆಯಿಂದ ಕೋಲಾರದ ತನಕ ಕೆಲಸ ಮುಗಿದಿದೆ. ಭೂಮಾಪಕರು, ಇಂಜಿನಿಯರ್‌ಗಳು ಹಾಗೂ ಸಿಬ್ಬಂದಿ ಎರಡೂ ಬದಿಯಲ್ಲಿ ಗುರುತು ಮಾಡಿ, ಕ್ರಮಸಂಖ್ಯೆ ಹಾಕಿ ವೈಮಾನಿಕ ಸಮೀಕ್ಷೆಗೆ ಅಣಿಮಾಡುತ್ತಿದ್ದಾರೆ.

ಎರಡೂವರೆ ಗಂಟೆ ಪ್ರಯಾಣ: ಬುಲೆಟ್ ಟ್ರೈನ್ ಗಂಟೆಗೆ ಗರಿಷ್ಠ 350 ಕಿ.ಮೀ. ಅಥವಾ ಸರಾಸರಿ 250 ಕಿ.ಮೀ. ವೇಗದಲ್ಲಿ ಸಂಚರಿಸಲಿವೆ. ಸದ್ಯ ಬೆಂಗಳೂರು–ಚೆನ್ನೈ ಮಾರ್ಗದಲ್ಲಿ ಶತಾಬ್ದಿ, ಬೃಂದಾವನ, ಲಾಲ್‌ಬಾಗ್ ಸೇರಿ ಕೆಲ ಸೂಪರ್‌ಫಾಸ್ಟ್ ರೈಲುಗಳು ಸಂಚರಿಸುತ್ತಿದ್ದು, ಚೆನ್ನೈಗೆ ತಲುಪಲು 5–6 ಗಂಟೆ ಬೇಕಾಗುತ್ತಿದೆ. ಆದರೆ ಬುಲೆಟ್ ಟ್ರೇನ್‌ನಿಂದ ಕೇವಲ 2.30 ಗಂಟೆಯಲ್ಲಿ ತಲುಪಬಹುದು.

ನಿಮಗೆ ಜಾತಿ, ಧರ್ಮದ ಗೊಡವೆ ಬೇಡ...

- ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು
- ಕೆಎಎಸ್ ಅಧಿಕಾರಿಗಳ ಸಂಘದ ಶತಮಾನೋತ್ಸವ ಸಮಾರಂಭ
- ಅಧಿಕಾರಿಗಳು ಪ್ರಾಮಾಣಿಕ, ಜನಪರವಾಗಿ ಕೆಲಸ ಮಾಡಿದರೆ ಸರ್ಕಾರಕ್ಕೆ ಒಳ್ಳೆ ಹೆಸರು



ಬೆಂಗಳೂರು, ಆ. 9(ಕೆಎಂಶಿ)– ರಾಜಕಾರಣ ಇಲ್ಲವೇ ಧರ್ಮಕಲಹಗಳಲ್ಲಿ ತೊಡಗಿಸಿಕೊಳ್ಳಬೇಡಿ ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಕಿವಿಮಾತು ಹೇಳಿದ್ದಾರೆ.

ಕೆಎಎಸ್ ಅಧಿಕಾರಿಗಳ ಸಂಘದ ಶತಮಾನೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರೊಂದಿಗೆ ವೇದಿಕೆ ಹಂಚಿಕೊಂಡು ಮಾತನಾಡಿದ ಅವರು, ಅಧಿಕಾರಿಗಳು ಪ್ರಾಮಾಣಿಕವಾಗಿ, ಜನಪರವಾಗಿ ಕೆಲಸ ಮಾಡಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಅಧಿಕಾರಿ ಮತ್ತು ನೌಕರರು ಬಡವರ ವಿರೋಧಿ, ಜನವಿರೋಧಿ ಹಾಗೂ ಭ್ರಷ್ಟಾಚಾರದಲ್ಲಿ ತೊಡಗಿಸಿಕೊಳ್ಳಬಾರದು. ಅಷ್ಟೇ ಅಲ್ಲ ಜಾತಿ ಧರ್ಮದ ಕಲಹದಲ್ಲೂ ಇರಬಾರದು. ಧರ್ಮಕ್ಕೂ, ಆಡಳಿತಕ್ಕೂ ಸಂಬಂಧವಿಲ್ಲ ಎಂದರು. ರಾಜಕಾರಣಿಗಳು ಕಾನೂನು ಹಾಗೂ ನೀತಿಗಳನ್ನು ರೂಪಿಸಿದರೆ, ಅವುಗಳನ್ನು ಜಾರಿಗೊಳಿಸುವುದು ನೀವು. ಅಧಿಕಾರಿಗಳು ಜನರು ಮತ್ತು ಸರ್ಕಾರದ ನಡುವೆ ಸೇತುವೆಯಾಗಿ ಕೆಲಸ ಮಾಡಿದರೆ, ಕುಗ್ರಾಮಕ್ಕೂ ಸರ್ಕಾರದ ಸೌಲಭ್ಯ ತಲುಪಿಸಬಹುದು ಎಂದು ಹೇಳಿದರು. ಪ್ರತಿಯೊಬ್ಬ ಅಧಿಕಾರಿ ಸಂವಿಧಾನದ ಚೌಕಟ್ಟಿನೊಳಗೆ, ಸಂವಿಧಾನದ ಧ್ಯೇಯೋದ್ದೇಶಗಳನ್ನು ಅರಿತು ಕಾರ್ಯನಿರ್ವಹಿಸಬೇಕು. ವಿದ್ಯಾವಂತರಾದ ಅಧಿಕಾರಿಗಳು, ವೈಜ್ಞಾನಿಕ ಹಾಗೂ ವೈಚಾರಿಕ ಚಿಂತನೆಯನ್ನು ಕರ್ತವ್ಯ ನಿರ್ವಹಿಸುವ ಮೂಲಕ

● 6ನೇ ಪುಟಕ್ಕೆ

ಮೈಸೂರು ದೇವರಾಜ ಮಾರುಕಟ್ಟೆ ಕಟ್ಟಡ ನೆಲಸಮ ವಿರೋಧಿಸಿ ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ಪಿಐಎಲ್ ವಜಾ

ಸರ್ಕಾರದ ನೆಲಸಮ ನಿರ್ಧಾರ ಎತ್ತಿ ಹಿಡಿದ ನ್ಯಾಯಾಲಯ

- ನವೀಕರಿಸಲು ತಜ್ಞ ಕೆಲಸಗಾರರು ಇಲ್ಲ; ನೆಲಸಮ ಬಿಟ್ಟು ಅನ್ಯ ಮಾರ್ಗವಿಲ್ಲ: ನೆಲಸಮ ಪರ ವಾದ ಮಂಡನೆ
- ಪಾರಂಪರಿಕ ಪ್ರಿಯರ ಅಸಮಾಧಾನ



ಮೈಸೂರು, ಆ.9(ಬಿಎಲ್‌ಯು)–ಮೈಸೂರು ಮಹಾರಾಜರ ಕಾಲದಲ್ಲಿ ನಿರ್ಮಾಣವಾಗಿರುವ ಸಾಂಸ್ಕೃತಿಕ ನಗರಿ ಮೈಸೂರಿನ ಪ್ರಸಿದ್ಧ ದೇವರಾಜ ಮಾರುಕಟ್ಟೆ ಕಟ್ಟಡದ ನೆಲಸಮ ವಿರೋಧಿಸಿ ನಗರದ ಪಾರಂಪರಿಕ ಪ್ರಿಯರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಹೈಕೋರ್ಟ್‌ನ ವಿಭಾಗೀಯ ಪೀಠ ವಜಾ ಮಾಡಿದೆ. ಈ ಮೂಲಕ ಶಿಥಿಲಾವಸ್ಥೆಯಲ್ಲಿರುವ ದೇವರಾಜ ಮಾರುಕಟ್ಟೆ ಕಟ್ಟಡವನ್ನು ನೆಲಸಮ ಮಾಡಿ, ಹೊಸದಾಗಿ ಮಾರುಕಟ್ಟೆ ಸಂಕೀರ್ಣ ನಿರ್ಮಾಣ ಮಾಡಬೇಕೆಂಬ ಸರ್ಕಾರದ ನಿಲುವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ. ಹೈಕೋರ್ಟ್ ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಪ್ರಸನ್ನ ಬಿ.ವರಾಳೆ ನೇತೃತ್ವದ ವಿಭಾಗೀಯ ಪೀಠ ವಾದ–ಪ್ರತಿವಾದ ಆಲಿಸಿ, ಪಾರಂಪರಿಕ ಪ್ರಿಯರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ವಜಾಗೊಳಿಸಿದೆ.

ಮೈಸೂರಿನ ಹೃದಯ ಭಾಗದಲ್ಲಿರುವ ದೇವರಾಜ ಮಾರುಕಟ್ಟೆ ಕಟ್ಟಡವನ್ನು 1886ರಲ್ಲಿ ಅಂದಿನ ಮೈಸೂರು ಮಹಾರಾಜರಾಗಿದ್ದ ಒಂಭತ್ತನೆ ಚಾಮರಾಜ ಒಡೆಯರ್ ನಿರ್ಮಾಣ ಮಾಡಿದ್ದರು. ಮೈಸೂರು ಅರಮನೆಗೆ ಕುಡಿಯುವ ನೀರು ಪೂರೈಸುತ್ತಿದ್ದ ದಿವಾನ್ ಪೂರ್ಣಯ್ಯ ಕಾಲುವೆ ಮೇಲೆ ನಿರ್ಮಾಣ ಮಾಡಿರುವ ಈ ಮಾರುಕಟ್ಟೆಗೆ 1925 ರಲ್ಲಿ ದೊಡ್ಡ ದೇವರಾಜ ಒಡೆಯರ್ ಅವರ ಹೆಸರಿಡಲಾಯಿತು. ಅಂದಿನಿಂದ ಇದು ದೇವರಾಜ ಮಾರುಕಟ್ಟೆ ಎಂದೇ ಪ್ರಖ್ಯಾತಿ ಗಳಿಸಿದೆ.

ಒಟ್ಟು 3.67 ಎಕರೆ ಪ್ರದೇಶದಲ್ಲಿ ನಿರ್ಮಾಣ ಮಾಡಿರುವ ದೇವರಾಜ ಮಾರುಕಟ್ಟೆಗೆ ಈಗ 137 ವರ್ಷವಾಗಿದೆ. ಸ್ವಾತಂತ್ರ್ಯ ನಂತರ ಮಾರುಕಟ್ಟೆಯ ಕಟ್ಟಡವನ್ನು ಸರ್ಕಾರ ಸರಿಯಾಗಿ ನಿರ್ವಹಣೆ ಮಾಡದೆ ಇದ್ದ ಕಾರಣಕ್ಕೆ ದಿನ ಕಳೆದಂತೆ ಕಟ್ಟಡ ಸತ್ವ ಕಳೆದುಕೊಳ್ಳುತ್ತಾ

● 10ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ನಾನೀಗ ಈ ಕವಡೆ ಹಾಕ್ತೀನಿ. 1 ರಿಂದ 5ರ ತನಕ ಏನೇ ಬಿದ್ರೂ ನೀವ್ ನನ್ನ ಶಾಪಿಂಗ್ ಕರ್ಕೊಂಡು ಹೋಗಬೇಕು.

ಗಂಡ : 6 ಬಿದ್ರೆ?

ಹೆಂಡತಿ : ನೀವ್ಯಾವತ್ತೂ ಚೌಕಾಬಾರಾ ಆಡಿಲ್ವಾ? 6 ಬಿದ್ರೆ ಇನ್ನೊಂದ್ ಸಲ ಕವಡೆ ಹಾಕಬೇಕು ಅಷ್ಟೆ.

ಮೈಸೂರು ಮಿತ್ರ

ಗುರುವಾರ, 10 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಅಸಾಮಾನ್ಯ ವ್ಯಕ್ತಿಗಳು ಐಡಿಯಾಗಳ ಬಗ್ಗೆ ಚರ್ಚಿಸುತ್ತಾರೆ. ಸಾಮಾನ್ಯ ವ್ಯಕ್ತಿಗಳು ಸಂದರ್ಭಗಳ ಬಗ್ಗೆ ಚರ್ಚಿಸುತ್ತಾರೆ. ದುರ್ಬಲರು ಮಾತ್ರ ವ್ಯಕ್ತಿಯ ಅವಗುಣಗಳ ಬಗ್ಗೆ ಮಾತನಾಡುತ್ತಾರೆ –ಸಾಕ್ರಟಿಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಪ್ಪನಂತ ನಂಟನಿಲ್ಲ, ಸೊಪ್ಪಿನಂತ ಊಟವಿಲ್ಲ

ನಿಮ್ಮ ಪತ್ರಗಳು

ಪೊಲೀಸ್ ಆಯುಕ್ತರ ಗಮನಕ್ಕೆ!

ಮಾನ್ಯರೆ,

ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಪುಂಡ–ಪೋಕರಿಗಳು ರಾಜಾರೋಷವಾಗಿ ದ್ವಿಚಕ್ರ ವಾಹನಗಳಲ್ಲಿ ವ್ಹೀಲಿಂಗ್ ಮಾಡುತ್ತಾ ಸಾರ್ವಜನಿಕರಲ್ಲಿ ಭೀತಿ ಮೂಡಿಸುತ್ತಿದ್ದಾರೆ.

ಅದಕ್ಕಿಂತಲೂ ಭಯಾನಕ ವಿಚಾರವೆಂದರೆ.... ಮೈಸೂರಿನ ಜಯನಗರದ ಕೃಷ್ಣದೇವರಾಯ ರಸ್ತೆಯಿಂದ ಇಸ್ಕಾನ್ ದೇವಾಲಯಕ್ಕೆ ತಿರುಗುವ ಜಾಗದಲ್ಲಿರುವ ಆಟೋ ನಿಲ್ದಾಣದ ಬಳಿ ದಿನಾಂಕ 08.08.2023 ರ ಮಂಗಳವಾರ ಮಧ್ಯಾಹ್ನ 12:30 ರ ಸಮಯದಲ್ಲಿ ಆಟೋರಿಕ್ಷಾ ಅಪಾಯಕಾರಿ ವ್ಹೀಲಿಂಗ್ ಮಾಡುತ್ತಾ ಸಾರ್ವಜನಿಕರಲ್ಲಿ ಭೀತಿ ಹುಟ್ಟಿಸುತ್ತಿತ್ತು. ಈ ದೃಶ್ಯವನ್ನು ಉಳಿದ ಆಟೋ ಚಾಲಕರು ಚಿತ್ರೀಕರಿಸುತ್ತಾ ಹೆಮ್ಮೆ ಪಡುತ್ತಿದ್ದರು.

ವ್ಹೀಲಿಂಗ್ ಮಾಡುತ್ತಾ ಸಾರ್ವಜನಿಕರಲ್ಲಿ ಭೀತಿ ಹುಟ್ಟಿಸುವ ದ್ವಿಚಕ್ರ ವಾಹನ ಸವಾರರಿಗೆ ಬುದ್ಧಿ ಕಲಿಸುವ ಜೊತೆಗೆ ಇಂತಹ ತ್ರಿಚಕ್ರ ವಾಹನ ಸವಾರರಿಗೂ ಪೊಲೀಸ್ ಇಲಾಖೆ ಬಿಸಿ ಮುಟ್ಟಿಸಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಬೇಕಾಗಿದೆ.

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ ಮೈಸೂರು

ಹೃದಯಾಘಾತಕ್ಕೆ ಉಸಿರು ಚೆಲ್ಲುತ್ತಿರುವ ಮನುಕುಲ?

ಮಾನ್ಯರೆ,

ಇಂದು ಮಾನವಕುಲ ಹಲವಾರು ಅನಾರೋಗ್ಯಗಳಿಗೆ ತುತ್ತಾಗಿ ಉಸಿರು ಚೆಲ್ಲುತ್ತಿದೆ. ಅದರಲ್ಲೂ ರಕ್ಕಸನಂತೆ ಎಲ್ಲಾ ವಯಸ್ಸಿನವರನ್ನು ಬೆಂಬಿಡದೆ ಕಾಡುತ್ತಿದೆ ಈ ಹೃದಯಘಾತವೆಂಬ ಅಸುರ. ರಕ್ಕಸ ಕಣ್ಣಿಗೆ ಕಾಣದ ವೈರಿ. ಯಾವ ಸಮಯದಲ್ಲಾದರೂ ತಮ್ಮನ್ನು ಆವರಿಸಿಕೊಳ್ಳುವ ಸದ್ದು– ಗದ್ದಲವಿಲ್ಲದೆ ನಿದ್ದೆಯಲ್ಲೇ ನಮ್ಮನ್ನು ಎಳೆಯುವ ಮಾರಕ ರೋಗ. ಈ ಹೃದಯಾಘಾತ ಇನ್ನೆಷ್ಟು ಜನತೆಯನ್ನು ಬಲಿ ತೆಗೆದುಕೊಳ್ಳುತ್ತದೆಂಯೋ ತಿಳಿಯದಾಗಿದೆ. ಪ್ರತಿದಿನ ದಿನಪತ್ರಿಕೆಗಳಲ್ಲಿ, ನ್ಯೂಸ್ ಚಾನೆಲ್‌ಗಳಲ್ಲಿ ಹೃದಯಾಘಾತಕ್ಕೆ ಬಲಿಯಾದವರ ಪ್ರಕಟಣೆಗಳು ನೋಡುತ್ತಿದ್ದರೆ ಕೇಳುತ್ತಿದ್ದರೆ ಹೃದಯ ತುಂಬಿ ಬರುತ್ತದೆ. ಮನ ಮಿಡಿಯುತ್ತದೆ, ಕಣ್ಣು ಒದ್ದೆಯಾಗುತ್ತವೆ. ಇದರ ಜೊತೆಯಲ್ಲೇ ಭಯ ಆತಂಕಗಳು ಎದುರಾಗುತ್ತದೆ. ಯಾಕೆ ಹೀಗೆ, ಇದಕ್ಕೆ ಮೂಲ ಕಾರಣವೇನು ಎಂದು ಒಂದು ರೀತಿಯಲ್ಲೇ ವೈದ್ಯ ಕುಲವೇ ತಲ್ಲಣಗೊಳ್ಳುವಂತಾಗುತ್ತಿದೆ.

ಈ ಹೃದಯಾಘಾತದಿಂದ ನಮ್ಮನ್ನು ಅಗಲಿ ಸಾಕಷ್ಟು ರತ್ನಗಳು ದೂರವಾಗಿವೆ. ಯಾರನ್ನು ಬಿಡದ ಶ್ರೀಮಂತರು, ಬಡವರು, ಚಲನಚಿತ್ರ ನಟರು, ನಟಿಯರು, ಲೇಖಕರು, ಲೇಖಕಿಯರು ಜನಸಾಮಾನ್ಯರನ್ನು ಯಾವಾಗ ಬೇಕೆಂದರೆ ಅವಾಗ ತನ್ನಡೆಗೆ ಸೆಳೆದುಕೊಂಡು ಹೋಗುತ್ತದೆ. ಇದಕ್ಕೆ ಮೂಲ ಕಾರಣವನ್ನು ಹುಡುಕುತ್ತಾ ಹೋದರೆ ವೈದ್ಯರು ಹೇಳುವ ಹಾಗೆ ಅಧಿಕ ಒತ್ತಡದಿಂದ, ಅನಾರೋಗ್ಯದಿಂದ ಅಧಿಕ ಕೊಬ್ಬಿನಂಶ ರಕ್ತದೊತ್ತಡದಿಂದ ಎನ್ನುವುದು ಹೃದಯಾಘಾತದಿಂದ ಮಡಿದವರಿಗೆ ತಾಳೆ ನೋಡಿದರೆ ಸಮಂಜಸವಾದ ಉತ್ತರ ನಮಗೆ ದೊರೆಯುವುದಿಲ್ಲ.

ಪ್ರಸಿದ್ಧ ನಟರನ್ನು ಕಳೆದುಕೊಂಡೆವು. ಇದಕ್ಕೆ ಹೆಚ್ಚಾಗಿ ಯುವಕ ಯುವತಿಯರೇ 40 ವರ್ಷದಿಂದ 50 ವರ್ಷದೊಳಗಿನ ಪುರುಷ, ಮಹಿಳೆಯರು ಅಧಿಕವಾಗಿ ಇದಕ್ಕೆ ತುತ್ತಾಗುತ್ತಿದ್ದಾರೆ. ಪುನೀತ್ ರಾಜಕುಮಾರ್, ಚಿರಂಜೀವಿ ಸರ್ಜಾ ಇತ್ತೀಚೆಗೆ ವಿಜಯರಾಘವೇಂದ್ರರವರ ಪತ್ನಿ ಸ್ಪಂದನಾ ಅವರ ಮರಣವು ನಿಜಕ್ಕೂ ಊಹೆಗೂ ನಿಲುಕದ ದುಃಖಕ್ಕೆ ಕಾರಣವಾಗುತ್ತದೆ. ಇಡೀ ರಾಜ್ಯವೇ ಕಂಬನಿ ಮಿಡಿಯುತ್ತಿದೆ. ವೈದ್ಯ ಕುಲವು ಹೇಗಾದರೂ ಮಾಡಿ ಈ ಮಾರಕ ರೋಗಕ್ಕೆ ಸೂಕ್ತವಾದ ಮದ್ದನ್ನು ಕಂಡುಹಿಡಿಯಬೇಕೆಂಬುದೇ ಜನತೆಯ ಆಶಾಭಾವನೆ. ಇವತ್ತು ಮಲಗಿದವರು ನಾಳೆ ಬೆಳಗ್ಗೆ ನೋಡುತ್ತಾರೋ ಇಲ್ಲವೋ ಎಂಬ ಅಪನಂಬಿಕೆ ಎದುರಾಗಿದೆ. ಅವರ ಮುಂದಿನ ಕನಸುಗಳಿಗೆ ನಿರಾಸೆಯಾಗತೊಡಗುತ್ತಿದೆ. ಗುರಿ ಕಟ್ಟಿಕೊಳ್ಳಬೇಕೋ ಬಿಡಬೇಕೋ ಎಂಬ ಕಳವಳ ಅವರಿಗೆ ಎದುರಾಗುತ್ತದೆ. ಜನತೆಯು ಒತ್ತಡವನ್ನು ಕಡಿಮೆ ಮಾಡಿಕೊಂಡು ಆರೋಗ್ಯ ಕಾಪಾಡಿಕೊಂಡು ಈ ಹೃದಯಾಘಾತದಿಂದ ಮುಕ್ತರಾಗಿ ಎಂಬುದೇ ನನ್ನದೊಂದು ಕಿವಿಮಾತು?!

–ಅನಿಲ್ ರಾಜ, ಸಹ ಶಿಕ್ಷಕರು, ಕುಕ್ಕರಹಳ್ಳಿ ಮೈಸೂರು

ಅಪಾಯಕಾರಿ ಮರದ ಕೊಂಬೆ ತೆರವುಗೊಳಿಸಿ

ಮಾನ್ಯರೆ,

ಮೈಸೂರಿನ ಜೆ.ಪಿ.ನಗರದ ಸ್ಪೋರ್ಟ್ಸ್ ಕ್ಲಬ್ ಎದುರಿನಲ್ಲಿರುವ ಮರದ ಕೊಂಬೆಗಳು ಬಾಗಿದ್ದು, ಇಲ್ಲಿರುವ ಮನೆಗಳ ಕಿಟಕಿಗಳಿಗೆ ತಾಕುತ್ತಿದೆ. ಈ ಸ್ಥಳದಲ್ಲಿ ಅಂಗಡಿ ಮಳಿಗೆಗಳು ಇವೆ. ಇತ್ತೀಚೆಗಷ್ಟೇ ಇದೇ ರಸ್ತೆಯಲ್ಲಿರುವ ಕ್ಯಾಂಟೀನ್‌ನ ಎದುರಿನಲ್ಲಿರುವ ಮರದ ಕೊಂಬೆ ರಾತ್ರಿ ಸಮಯದಲ್ಲಿ ಮುರಿದು ಬಿದ್ದಿತ್ತು. ಈ ರಸ್ತೆ ಸದಾ ಜನನಿಬಿಡವಾಗಿರುತ್ತದೆ. ಆದಕಾರಣ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಅನಾಹುತ ಸಂಭವಿಸುವ ಮುನ್ನ ಆದಷ್ಟು ಶೀಘ್ರ ಅಪಾಯಕಾರಿ ಮರದ ಕೊಂಬೆಗಳನ್ನು ತೆರವುಗೊಳಿಸಬೇಕೆಂದು ಮನವಿ.

–ಪರಶಿವಮೂರ್ತಿ, ಜೆ.ಪಿ.ನಗರ, ಮೈಸೂರು.

ಸರಸ್ವತಿಪುರಂ ಈಜುಕೊಳ ರಸ್ತೆಯಲ್ಲಿ ಬೃಹತ್ ವಾಣಿಜ್ಯ ಸಂಕೀರ್ಣಕ್ಕೆ ಪಾಲಿಕೆ ಅನುಮತಿ ಹೇಗೆ?

ಮಾನ್ಯರೆ,

ಸುಂದರ ಮೈಸೂರಿನ ಅಂದ ಹಾಳು ಮಾಡಲು ಮೈಸೂರು ಮಹಾನಗರ ಪಾಲಿಕೆ ಪಣ ತೊಟ್ಟಂತಿದೆ. ಮೈಸೂರಿನ ಸರಸ್ವತಿಪುರಂನ ಈಜುಕೊಳದ ರಸ್ತೆಯನ್ನು ವಸತಿ ಪ್ರದೇಶವೆಂದು ಪರಿಗಣಿಸಲಾಗಿದೆ. ಆದರೆ ಇಲ್ಲಿ ಒಂದು ಬೃಹತ್ ವಾಣಿಜ್ಯ ಸಂಕೀರ್ಣ ಈಜುಕೊಳದ ರಸ್ತೆಯಲ್ಲಿ ತಲೆ ಎತ್ತಿ ನಿಲ್ಲುತ್ತಿದೆ.

ಪಾಲಿಕೆಯವರು ಇದಕ್ಕೆ ಹೇಗೆ ಅನುಮತಿ ನೀಡಿದರು? ತಾನೇ ನಿರ್ಧರಿಸಿದ, ವಿಧಿಸಿದ ನಿಯಮಗಳನ್ನು ಪಾಲಿಕೆ ಏಕೆ ಮುರಿಯುತ್ತಿದೆ. ಅಕ್ಕಪಕ್ಕ, ಹಿಂದೆ ಮನೆಗಳು ಇರುವಾಗ ಈ ವಾಣಿಜ್ಯ ಸಂಕೀರ್ಣಕ್ಕೆ ಹೇಗೆ ಅನುಮತಿ ನೀಡಿದರು. ಈ ಕಟ್ಟಡಕ್ಕೆ ತೆಗೆದಿರುವ ಕೊಳವೆ ಬಾವಿ ಮತ್ತು ಅಡಿಪಾಯದಿಂದ 40 ಮೀಟರ್ ಸುತ್ತಲಿನ ಕಟ್ಟಡಗಳಿಗೆ ಅಪಾಯ ಆರಂಭವಾಗಿದೆ ಎಂಬುದನ್ನು ಗಮನಿಸಿ ಹಾಗೂ ಈ ಕಟ್ಟಡಕ್ಕೆ ಕಾನೂನು ಪ್ರಕಾರ ನಿಗದಿಪಡಿಸಿರುವ ಸುತ್ತಾ ಬಿಡಬೇಕಾದಷ್ಟು ಸೆಟ್‌ಬ್ಯಾಕ್‌ಗಳನ್ನೂ ಬಿಟ್ಟಿಲ್ಲ. ಕೆಲವು ಬಲ್ಲ ಮೂಲಗಳ ಪ್ರಕಾರ ಈ ಕಟ್ಟಡದ ಮಾಲೀಕರು ಬಾರ್ ಅಂಡ್ ರೆಸ್ಟೋರೆಂಟ್ ತೆರೆಯಲು ಪ್ರಯತ್ನಿಸುತ್ತಿದ್ದಾರೆ ಎಂದು ತಿಳಿದುಬಂದಿದೆ. ಇದು ಸತ್ಯವಾಗಿದ್ದರೆ ಸಂಬಂಧಪಟ್ಟ ಅಬಕಾರಿ ಇಲಾಖೆ ಅಧಿಕಾರಿಗಳು ಇದಕ್ಕೆ ಅನುಮತಿ ನೀಡಬಾರದು ಎಂದು ಕೋರುತ್ತೇವೆ. ಶಾಲಾ–ಕಾಲೇಜುಗಳು, ವಸತಿ ಗೃಹಗಳು ಇರುವ ಈ ಸ್ಥಳದಲ್ಲಿ ವಾಣಿಜ್ಯ ಸಂಕೀರ್ಣಕ್ಕೆ ಅನುಮತಿ ನೀಡುವುದೇ ತಪ್ಪು.

– ನಿವಾಸಿಗಳು, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ತೈತ್ತಿರೀಯೋಪನಿಷತ್ತು

ಉಪನಿಷತ್ತುಗಳು ವೇದಗಳ ಅವಿಭಾಜ್ಯ ಅಂಗಗಳು. ಉಪನಿಷತ್ತುಗಳನ್ನು ಶ್ರುತಿ ಎಂದು ಶಾಸ್ತ್ರಗಳಲ್ಲಿ ಕರೆದಿದ್ದಾರೆ. ಸಾಮಾನ್ಯವಾಗಿ ವೇದಗಳ ಕೊನೆಯಲ್ಲಿ ಉಪನಿಷತ್ತುಗಳು ಕಾಣಿಸುವುದರಿಂದ ಇವನ್ನು ವೇದಾಂತ ಎಂದೂ ಕರೆಯುವುದುಂಟು. ಇವುಗಳಲ್ಲಿ ಆತ್ಮನ, ಪರಮಾತ್ಮನ ಮತ್ತು ಜಗತ್ತಿನ ಸ್ವರೂಪದ ಬಗೆಗೆ ಋಷಿಗಳ ಚಿಂತನೆಗಳೂ ಸಾಕ್ಷಾತ್ಕಾರದ ಉದ್ಗಾರಗಳೂ ಇವೆ. ಇವು ಅಪೌರುಷೇಯ ವಾಕ್ಯಗಳು, ಭಗವಂತನ ವಾಣಿ, ಶಾಶ್ವತವಾದ, ಅಕೃತ್ರಿಮವಾದ ಮಾತುಗಳು ಎಂಬ ಅಭಿಪ್ರಾಯವೂ ಇದೆ. ನಾಲ್ಕು ವೇದಗಳಿಗೆ ಸೇರಿದ ನೂರೆಂಟು ಉಪನಿಷತ್ತುಗಳನ್ನು ಮುಕ್ತಿಕೋಪನಿಷತ್ತಿನಲ್ಲಿ ಹೆಸರಿಸಲಾಗಿದೆ. ಆ ಪಟ್ಟಿಯಲ್ಲಿ ಸೇರದ ಇತರ ಉಪನಿಷತ್ತುಗಳೂ ಮುದ್ರಿತವಾಗಿವೆ. ಉಪನಿಷತ್ತುಗಳಲ್ಲಿ ಅತ್ಯಂತ ಪ್ರಾಚೀನ ಎಂದು ಭಾವಿಸಲಾಗಿರುವ ಹತ್ತು ಉಪನಿಷತ್ತುಗಳಿಗೆ ಆದಿಶಂಕರಾಚಾರ್ಯರು ಭಾಷ್ಯಗಳನ್ನು ಬರೆದಿದ್ದಾರೆ. ಅವು ಈಶಾವಾಸ್ಯ, ಕೇನ, ಕಠ, ಪ್ರಶ್ನೆ, ಮುಂಡುಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕ ಉಪನಿಷತ್ತುಗಳು.

ಉಪನಿಷತ್ ಎಂಬ ಶಬ್ದದ ಒಂದು ಅರ್ಥ ಗುರುವಿನ ಬಳಿ ಕುಳಿತುಕೊಂಡು ಶಿಷ್ಯನು ಕಲಿಯುವ ವಿದ್ಯೆ ಎಂದು ಆಗುತ್ತದೆ. ಹಿಂದೆ ಭಾರತ ದೇಶದಲ್ಲಿ ಜಿಜ್ಞಾಸುಗಳು–ಎಂದರೆ ಆತ್ಮಸ್ವರೂಪವನು ತಿಳಿದುಕೊಳ್ಳಲು ಬಯಸುವವರು ಜ್ಞಾನಿಗಳಾದ ಋಷಿಗಳಿದ್ದ ಗುರುಕುಲಗಳಿಗೆ ಹೋಗಿ ಅವರ ಸೇವೆಯನ್ನು ಮಾಡಿ ಅವರು ಪ್ರಸನ್ನರಾಗಿದ್ದಾಗ ಅವರಿಂದ ಜ್ಞಾನವನ್ನು ಪಡೆಯುತ್ತಿದ್ದರು. ಆ ಗುರುಗಳ ಮಾತುಗಳು, ಅಥವಾ ಗುರು ಶಿಷ್ಯ ಸಂವಾದ ಪರಂಪರೆಯಿಂದ ರಕ್ಷಿಸಲ್ಪಟ್ಟು ಉಪನಿಷತ್ತುಗಳು ಎಂದು ಉಳಿದುಕೊಂಡಿವೆ. ಅನಾದಿ ಕಾಲದಲ್ಲಿ, ಅಥವಾ ಸಾವಿರಾರು ವರ್ಷಗಳ ಹಿಂದೆ ಹೇಳಿದ ಮಾತುಗಳಾದರೂ ಅವು ಎಲ್ಲ ಕಾಲಕ್ಕೂ ಪ್ರಸ್ತುತವಾಗಿವೆ. ಪ್ರತಿಯೊಬ್ಬರೂ ಉಪನಿಷತ್ತುಗಳಲ್ಲಿರುವ ಉನ್ನತ ಚಿಂತನೆ ಗಳನ್ನರಿತು ತಮ್ಮ ಬದುಕನ್ನು ಪಾವನಗೊಳಿಸಿ ಕೊಳ್ಳಬಹುದು. ಉಪನಿಷತ್ತುಗಳ ಮುಖ್ಯ ಉದ್ದೇಶ ಅಜ್ಞಾನವನ್ನು ಕಳೆದು ಜ್ಞಾನವನ್ನು ಕೊಡುವುದು, ನಮ್ಮ ಸ್ವರೂಪದ ಬಗೆಗೆ ನಮಗಿರುವ ಭ್ರಾಂತಿಯನ್ನು ಕಳೆಯುವುದು, ಆತ್ಮ–ಪರಮಾತ್ಮರ ಸಂಬಂಧವನ್ನು ತಿಳಿಸುವುದು ಆಗಿದೆ. ಇದಕ್ಕಾಗಿ ಚಿಂತನಾಶೀಲನಾದ ಪ್ರತಿಯೊಬ್ಬ ಮಾನವನೂ ಉಪನಿಷತ್ತುಗಳ ಅಧ್ಯಯನವನ್ನು ಮಾಡುವುದು ಸೂಕ್ತ. ಇವುಗಳಲ್ಲಿ ಕೆಲವರು ವ್ಯಕ್ತಿಗಳನ್ನು ಹೆಸರಿಸಿರಬಹುದು, ಕೆಲವು ಕಥೆಗಳನ್ನು ಹೇಳಿರಬಹುದು. ಆದರೆ ಅವು ವಿಷಯ ಪ್ರತಿಪಾದನೆಗಾಗಿ ಮಾಡಿರುವ ಅಥವಾ ಅಳವಡಿಸಿಕೊಂಡಿರುವ ತಂತ್ರಗಳಷ್ಟೆ. ಮುಖ್ಯ ತಾತ್ಪರ್ಯ ಇರುವುದು ತತ್ತ್ವಗಳಲ್ಲಿ ಮಾತ್ರ ಎಂಬುದನ್ನು ನಾವು ಮರೆಯಬಾರದು.

ಎಲ್ಲರಿಗೂ ತಿಳಿದಿರುವಂತೆ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವ ವೇದ ಎಂದು ಪ್ರಸಿದ್ಧವಾದ ನಾಲ್ಕು ವೇದಗಳಿವೆ. ಯಜುರ್ವೇದದಲ್ಲಿ ಕೃಷ್ಣ ಯಜುರ್ವೇದ, ಶುಕ್ಲ ಯಜುರ್ವೇದ ಎಂಬ ಎರಡು ಶಾಖೆಗಳಿವೆ. ಕೃಷ್ಣ ಯಜುರ್ವೇದದ ಸಂಹಿತೆಯನ್ನು ತೈತ್ತಿರೀಯ ಸಂಹಿತೆಯೆಂದೂ ಶುಕ್ಲ ಯಜುರ್ವೇದ ಸಂಹಿತೆಯನ್ನು ವಾಜಸನೇಯಿ ಸಂಹಿತೆಯೆಂದೂ ಕರೆಯಲಾಗಿದೆ. ತೈತ್ತಿರೀಯ ಶಾಖೆಗೆ ಸಂಬಂಧಿಸಿದ ಉಪನಿಷತ್ತು ತೈತ್ತಿರೀಯೋಪನಿಷತ್ತು. ಒಂದೊಂದು ಶಾಖೆಯ ಉಪನಿಷತ್ತಿನ ಅಧ್ಯಯನವನ್ನು ಆರಂಭಿಸುವ ಮೊದಲು ನಿಶ್ಚಿತವಾದ ಒಂದು ಶಾಂತಿಮಂತ್ರವನ್ನು ಹೇಳುವ ಸಂಪ್ರದಾಯವಿದೆ.

ಓಂ ಸಹನಾವವತು । ಸಹ ನೌ ಭುನಕ್ತು ।
ಸಹ ವೀರ್ಯಂ ಕರವಾವಹೈ ।
ತೇಜಸ್ವಿ ನಾವಧೀತಮಸ್ತು । ಮಾ
ವಿದಿವಿಷಾವಹೈ।
ಓಂ ಶಾಂತಿಃ ಶಾಂತಿಃ ಶಾಂತಿಃ ॥

ಈ ಶಾಂತಿ ಮಂತ್ರದಲ್ಲಿ ಸಹ ಎಂಬುದು ಮುಖ್ಯಪದ. ಗುರು ಶಿಷ್ಯರಿಗೆ ಒಟ್ಟಿಗೆ ರಕ್ಷಣೆಯು ಸಿಕ್ಕಲಿ. ಇಬ್ಬರಿಗೂ ಒಟ್ಟಿಗೆ ಪೋಷಣೆ ಸಿಕ್ಕಲಿ. ನಾವಿಬ್ಬರೂ ಒಟ್ಟಿಗೆ ಶಕ್ತಿಯುತವಾದ ಕಾರ್ಯವನ್ನು ಮಾಡೋಣ. ನಮ್ಮ ಅಧ್ಯಯನ ತೇಜಸ್ಸಿನಿಂದ ತುಂಬಿರಲಿ. ನಮ್ಮಿಬ್ಬರಲ್ಲಿ ದ್ವೇಷ ಹುಟ್ಟದಿರಲಿ. ಶಾಂತಿ, ಶಾಂತಿ, ಶಾಂತಿ, ಶಾಂತಿ ಶಬ್ಧವನ್ನು ಮೂರು ಸಲ ಉಚ್ಚರಿಸಿರುವುದು ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ಎಂಬ ಮೂರು ವಿಧದ ಬಾಧೆಗಳು ಬಾರದಿರಲಿ ಎಂಬುದಕ್ಕಾಗಿ. ಆಧ್ಯಾತ್ಮಿಕ ಎಂದರೆ ನಮ್ಮ ಶರೀರದಲ್ಲೇ ಉಂಟಾಗುವ ತಲೆನೋವು, ಹೊಟ್ಟೆ ನೋವು ಮುಂತಾದ ಬಾಧೆಗಳು. ಆದಿಭೌತಿಕ ಎಂದರೆ ಬೇರೆ ಜನರಿಂದ, ಪ್ರಾಣಿಗಳಿಂದ ಉಂಟಾಗುವ ಪೀಡೆಗಳು. ಆಧಿದೈವಿಕ ಎಂದರೆ ಮಾನವನ ನಿಯಂತ್ರಣದಲ್ಲಿಲ್ಲದ ದೈವನಿರ್ಮಿತ ಭೂಕಂಪ ಇತ್ಯಾದಿ ತೊಂದರೆಗಳು. ಈ ಮೂರು ವಿಧದ ಬಾಧೆಗಳೂ ಇಲ್ಲದೆ ನಿರ್ವಿಘ್ನವಾಗಿ ಆತ್ಮವಿದ್ಯೆಯ ಅಧ್ಯಯನ ಆಗಬೇಕು ಎಂಬುದು ಶಾಂತಿಮಂತ್ರ ಪಠನದ ಮುಖ್ಯ ಉದ್ದೇಶ.

ತೈತ್ತಿರೀಯೋಪನಿಷತ್ತಿನ ಮೊದಲನೆಯ ಅನುವಾಕ್ಯವೂ ಶಾಂತಿ ಮಂತ್ರವೇ. ಅದು ಇಂತಿದೆ–

ಓಂ ಶಂ ನೋ ಮಿತ್ರಃ ವರುಣಃ ।
ಶಂ ನೋ ಭವತ್ವರ್ಯಮಾ।
ಶಂ ನ ಇಂದ್ರೋ ಬೃಹಸ್ಪತಿಃ ।
ಶಂ ನೋ ವಿಷ್ಣುರುರುಕ್ರಮಃ। ನಮೋ
ಬ್ರಹ್ಮಣೇ। ನಮಸ್ತೇ ವಾಯೋ ।
ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ ।
ತ್ವಾಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ ।
ಋತಂ ವದಿಷ್ಯಾಮಿ ।
ಸತ್ಯಂ ವದಿಷ್ಯಾಮಿ । ತನ್ಮಾಮವತು ।
ತದ್ವಕ್ತಾರಮವತು । ಅವತು
ಮಾಮ್ । ಅವತು ವಕ್ತಾರಮ್ ।
ಓಂ ಶಾಂತಿಃ ಶಾಂತಿಃ ಶಾಂತಿಃ ॥

ಹಗಲಿನ ಮತ್ತು ಪ್ರಾಣವೃತ್ತಿಯ ಅಭಿಮಾನಿ ದೇವತೆ ಮಿತ್ರ. ಅವನು ನಮಗೆ ಸುಖವನ್ನು ತರಲಿ. ಅಪಾನವೃತ್ತಿಯ ಮತ್ತು ರಾತ್ರಿಯ ಅಭಿಮಾನಿ ದೇವತೆ ವರುಣ. ಅವನು ನಮಗೆ ಸುಖವನ್ನು ನೀಡಲಿ. ಕಣ್ಣಿಗೂ ಆದಿತ್ಯನಿಗೂ ಅಭಿಮಾನಿ ದೇವತೆ ಅರ್ಯಮನ್. ಅವನೆಮಗೆ ಸಂತೋಷವನ್ನು ಕೊಡಲಿ. ಬಲದ ದೇವತೆ ಇಂದ್ರ, ಬುದ್ಧಿಯ ದೇವತೆ ಬೃಹಸ್ಪತಿ, ದೀರ್ಘ ಪ್ರಯಾಣವನ್ನು ಮಾಡಿದ, ಪಾದಾಭಿ ಮಾನಿದೇವತೆ ವಿಷ್ಣು ಇವರೆಲ್ಲ ನಮಗೆ ಸುಖವನ್ನು ನೀಡಲಿ. ಬ್ರಹ್ಮಕ್ಕೆ ನಮಸ್ಕಾರ. ವಾಯುದೇವನೆ, ನಿನಗೆ ನಮಸ್ಕಾರ, ನೀನೇ ಪ್ರತ್ಯಕ್ಷ ಬ್ರಹ್ಮವಾಗಿರುವೆ. ನಿನ್ನನ್ನೇ ಪ್ರತ್ಯಕ್ಷ ಬ್ರಹ್ಮ ವೆಂದು ಹೇಳುವೆನು. ಋತವನ್ನು ಹೇಳುವೆನು. ಸತ್ಯವನ್ನು ಹೇಳುವೆನು. ಆ ಸತ್ಯವಚನವು ನನ್ನನ್ನು ಕಾಪಾಡಲಿ. ಸತ್ಯವನ್ನು ಹೇಳುವವನನ್ನೂ ಅದು ಕಾಪಾಡಲಿ. ಅದು ನನ್ನನ್ನೂ ಅದನ್ನು ಹೇಳುವವನನ್ನೂ ಕಾಪಾಡಲಿ. ಓಂ ಶಾಂತಿಃ ಶಾಂತಿಃ ಶಾಂತಿಃ.

ಅನೇಕ ದೇವತೆಗಳಿದ್ದರೂ ವಾಯುವನ್ನು ಪ್ರತ್ಯಕ್ಷ ಬ್ರಹ್ಮ ಎಂದು ಉಪನಿಷತ್ತು ಘೋಷಿಸಿದೆ. ಇಂದು ನಾನಾ ವಿಧವಾಗಿ ವಾಯುಮಾಲಿನ್ಯವನ್ನುಂಟು ಮಾಡುತ್ತಿರುವ ಮಾನವನು ಬ್ರಹ್ಮದ್ರೋಹವನ್ನು ಮಾಡುತ್ತಿದ್ದಾನೆ. ತನ್ನ ವಿನಾಶಕ್ಕೆ ತಾನೇ ಆಹ್ವಾನವನ್ನು ನೀಡುತ್ತಿದ್ದಾನೆ. ಇದಾಗಬಾರದೆಂಬುದು ಉಪನಿಷತ್ತಿನ ಆಶಯ. ಋತವೆಂಬುದು ಸಾರ್ವಕಾಲಿಕ ಸಾರ್ವದೇಶಿಕ ವಸ್ತುಸತ್ಯ. ಇದನ್ನು ಇಂಗ್ಲೀಷಿನಲ್ಲಿ Objective truth ಎನ್ನಬಹುದು. ನಮಗೆ ತಿಳಿದುದನ್ನು ಯಥಾರ್ಥವಾಗಿ ತಿಳಿಸಿದಾಗ ಅದು ಸತ್ಯ. ಅದು ಕೆಲವೊಮ್ಮೆ ವಾಸ್ತವ ಸತ್ಯವೂ ಆಗಿರಬಹುದು. ನನಗೆ ತಿಳಿದುದು ಸದಾ ವಾಸ್ತವಸತ್ಯವೇ ಎಂದು ಹೇಳಲಾಗದು. ಹಾಗಾಗಲಿ, ಸತ್ಯವೂ ಋತವೂ ಒಂದಾಗಲಿ ಎಂಬುದು ಋಷಿಗಳ ಆಶಯ.

ತೈತ್ತಿರೀಯೋಪನಿಷತ್ತಿನಲ್ಲಿ ಶೀಕ್ಷಾವಲ್ಲೀ, ಬ್ರಹ್ಮಾನಂದವಲ್ಲೀ, ಭೃಗುವಲ್ಲೀ ಎಂಬ ಮೂರು ಅಧ್ಯಾಯಗಳಿವೆ. ಶೀಕ್ಷಾ ಎಂಬುದು ಶಿಕ್ಷಾ ಎಂಬ ಶಬ್ದದ ವೈದಿಕರೂಪ. ಶಿಕ್ಷಾ, ವ್ಯಾಕರಣ, ಛಂದಸ್, ನಿರುಕ್ತ, ಜ್ಯೌತಿಷ, ಕಲ್ಪ ಎಂಬ ಆರು ವೇದದ ಅಂಗಗಳು. ಇದರಲ್ಲಿ ಶಿಕ್ಷಾ ಎಂಬ ಶಾಸ್ತ್ರವು ಅಕ್ಷರಗಳ ಉಚ್ಚಾರಣೆಯ ನಿಯಮಗಳನ್ನು ತಿಳಿಸುತ್ತದೆ. ವೇದ ಪಠನದಲ್ಲಿ ಉಚ್ಚಾರಣೆಯ ಸ್ಪಷ್ಟತೆ ಮತ್ತು ನಿಖರತೆ ಅತೀವ ಮುಖ್ಯ. ಪಾಣಿನೀಯ ಶಿಕ್ಷಾ, ವ್ಯಾಸ ಶಿಕ್ಷಾ ಮುಂತಾದ ಅನೇಕ ಶಿಕ್ಷಾ ಗ್ರಂಥಗಳಿವೆ. ಇವುಗಳಲ್ಲಿ ಒಂದೊಂದು ಅಕ್ಷರದ ಉತ್ಪತ್ತಿ ಸ್ಥಾನ, ಆಭ್ಯಂತರ ಪ್ರಯತ್ನ, ಬಾಹ್ಯ ಪ್ರಯತ್ನ ಮುಂತಾದ ವಿಶೇಷಗಳನ್ನು ಹೇಳಿದ್ದಾರೆ. ಉಪನಿಷತ್ತು ಆ ಶಾಸ್ತ್ರದ ಮೂಲತತ್ತ್ವಗಳನ್ನು ಮಾತ್ರ ತಿಳಿಸಿದೆ.

ಉಪನಿಷತ್ತುಗಳು ಕೇವಲ ಪಾರಲೌಕಿಕ ಚಿಂತನೆಯಲ್ಲಿ ಮುಳುಗಿ ಈ ಲೋಕದ ವಿಚಾರಗಳನ್ನು ಮರೆತಿವೆ ಎಂದು ಕೆಲವರು ಆಕ್ಷೇಪಣೆ ಮಾಡಬಹುದು. ಅದರಲ್ಲಿ ಹುರುಳಿಲ್ಲ. ಈ ಲೋಕದಲ್ಲೂ ಚೆನ್ನಾಗಿ ಬದುಕಬೇಕು, ಪರಲೋಕವನ್ನೂ ಮರೆಯಬಾರದು ಎಂಬುದು ಉಪನಿಷತ್ತುಗಳ ನಿಲುವು. ತೈತ್ತಿರೀಯೋಪನಿಷತ್ತಿನ ಶಿಕ್ಷಾವಲ್ಲಿಯ ಈ ಮಾತುಗಳನ್ನು ನೋಡಿರಿ–

ಅಮೃತಸ್ಯದೇವ ಧಾರಣೋ
ಭೂಯಾಸಮ್ । ಶರೀರಂ
ಮೇ ವಿಚರ್ಷಣಮ್ ।
ಜಿಹ್ವಾ ಮೇ ಮಧುಮತ್ತಮಾ ।
ಕರ್ಣಾಭ್ಯಾಂ ಭೂರಿ ವಿಶ್ರುವಮ್ ।

(ಎಲೈ ದೇವನೆ ನಾನು ಅಮೃತವನ್ನು ಧರಿಸಿದವನಾಗಬೇಕು. ನನ್ನ ಶರೀರವು ಕಾರ್ಯದಕ್ಷವಾಗಬೇಕು. ನನ್ನ ನಾಲಗೆ ಜೇನಿನಿಂದ ತುಂಬಿರಬೇಕು. ಎರಡು ಕಿವಿಗಳಿಂದ ನಾನು ಹೆಚ್ಚು ಹೆಚ್ಚು ಕೇಳಬೇಕು)

ವಾಸಾಗ್ಂಸಿ ಮಮ ಗಾವಶ್ಚ,
ಅನ್ನಪಾನೇ ಚ ಸರ್ವದಾ ।
ತತೋ ಮೇ ಶ್ರೀಯಮಾವಹ
ಲೋಮಶಾಂ ಪಶುಭಿಃ ಸಹ ಸ್ವಾಹಾ॥

(ನನಗೆ ನೀನು ಬಟ್ಟೆಗಳನ್ನೂ ಗೋ ಸಂಪತ್ತನ್ನೂ ಕೊಡು. ಸದಾ ನನಗೆ ತಿನ್ನಲು ಮತ್ತು ಕುಡಿಯಲು ಅನ್ನಪಾನಗಳನ್ನು ಕೊಡು. ಅದಕ್ಕೂ ಹೆಚ್ಚಾದ ಸಂಪತ್ತುಗಳನ್ನು ನೀಡು. ಉಣ್ಣೆಯಿಂದ ತುಂಬಿದ ಕುರಿ ಮುಂತಾದ ಪಶುಗಳನ್ನು ಕೊಡುವ ನಿನಗೆ ಈ ಹವಿಸ್ಸಿನ ಅರ್ಪಣೆ).

ಇಷ್ಟೇ ಅಲ್ಲದೆ ಅಂದಿನ ಗುರುಗಳು ಶಿಷ್ಯರ ಆಗಮನವನ್ನು ಅಪೇಕ್ಷಿಸುತ್ತಿದ್ದರು. ಮುಂದಿನ ಪೀಳಿಗೆಗೆ ಜ್ಞಾನವನ್ನು ಹಂಚುವ ಇಚ್ಛೆ ಅವರಲ್ಲಿ ಉತ್ಕಟವಾಗಿತ್ತೆಂಬುದೂ ತೈತ್ತಿರೀಯೋಪನಿಷತ್ತಿನ ಮಂತ್ರಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ –

"ಆ ಮಾ ಯಂತು ಬ್ರಹ್ಮಚಾರಿಣಃ ಸ್ವಾಹಾ।
ವಿ ಮಾಯಂತು ಬ್ರಹ್ಮಚಾರಿಣಃ ಸ್ವಾಹಾ ।
ಪ್ರಮಾಯಂತು ಬ್ರಹ್ಮಚಾರಿಣಃ ಸ್ವಾಹಾ"

ಇತ್ಯಾದಿ ಮಂತ್ರಗಳು ಎಲ್ಲ ದಿಕ್ಕುಗಳಿಂದ ವಿದ್ಯಾರ್ಥಿಗಳು ತಮ್ಮ ಬಳಿಗೆ ಬರಲೆಂದು ಹಾರೈಸುವ ಗುರುಗಳು ಹೋಮ ಮಾಡುತ್ತಾ ಹೇಳುವವುಗಳೇ ಆಗಿವೆ. ಇದು ಇಂದಿನ ನಮ್ಮ ಅಧ್ಯಾಪಕರ ಹಾರೈಕೆಯೂ ಆಗಿದೆ.

ಓಂಕಾರದ ಪ್ರಾಧಾನ್ಯವನ್ನೂ ಶಿಕ್ಷಾವಲ್ಲಿಯಲ್ಲಿ ಒತ್ತಿ ಹೇಳಲಾಗಿದೆ. "ಓಮಿತಿ ಬ್ರಹ್ಮ ಓಮಿತಿದಗ್ಂ ಸರ್ವಮ್" ಎಂದು ಓಂಕಾರವು ಆಧ್ಯಾತ್ಮಿಕವಾಗಿ ಬ್ರಹ್ಮವನ್ನೂ ಭೌತಿಕವಾಗಿ ಸಮಸ್ತ ವಿಶ್ವವನ್ನೂ ಪ್ರತಿನಿಧಿಸುತ್ತದೆ ಎಂಬುದನ್ನು ಪ್ರತಿಪಾದಿಸಲಾಗಿದೆ.

ತೈತ್ತಿರೀಯೋಪನಿಷತ್ತಿನಲ್ಲಿ ನಿರೂಪಕವಾಗಿರುವ ವಿಷಯಗಳು ನೂರಾರು. ಆಳವಾಗಿ ಅಧ್ಯಯನ ಮಾಡುವವರಿಗೆ ಇದೊಂದು ವಜ್ರದ ಗಣಿ. ನಮ್ಮ ಶಕ್ತಿಗೆ ಅನುಗುಣವಾಗಿ ನಾವು ಅಲ್ಲಿರುವ ರತ್ನಗಳನ್ನು ಪಡೆದುಕೊಳ್ಳಬಹುದು.

ಆರೋಗ್ಯಕರ ಮಕ್ಕಳಿಗಾಗಿ ತಾಯಿ ಪೋಷಣೆಗೆ ಆದ್ಯತೆ ನೀಡಬೇಕು

ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಲಹೆ



ಮೈಸೂರು, ಆ.9(ಎಂಕೆ)– ಆರೋಗ್ಯಕರ ಮಕ್ಕಳನ್ನು ಪಡೆಯಲು ತಾಯಿಯ ಪೋಷಣೆಗೆ ಮೊದಲ ಆದ್ಯತೆ ನೀಡಬೇಕು. ಪೌಷ್ಟಿಕಾಂಶಯುಕ್ತ ಆಹಾರ ಸೇವನೆ ಅವಶ್ಯವಾಗಿದೆ ಎಂದು ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಕಿವಿಮಾತು ಹೇಳಿದರು.

ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ವಾರ್ಷಿಕೋತ್ಸವದ ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳ ಆರೋಗ್ಯಕರ ಬೆಳವಣಿಗೆಗೆ ಪೌಷ್ಟಿಕಾಂಶಯುಕ್ತ ಆಹಾರ ಸೇವನೆ ಮುಖ್ಯವಾಗಿದೆ. ಅದರಲ್ಲೂ ಆರೋಗ್ಯಕರ ಮಕ್ಕಳ ಜನನಕ್ಕೆ ತಾಯಿಯ ಪೋಷಣೆ ಅತೀ ಮುಖ್ಯವಾಗಿದ್ದು, ಮಕ್ಕಳ ಮೆದುಳು ಬೆಳವಣಿಗೆ ಒಮೆಗಾ–3 ಫ್ಯಾಟ್ ಸೇರಿದಂತೆ ಹಲವು ಬಗೆಯ ಪೋಷಕಾಂಶಗಳ ಬೇಕಾಗಿರುತ್ತದೆ ಎಂದು ತಿಳಿಸಿದರು.

ಚಿಕ್ಕ ವಯಸ್ಸಿನಲ್ಲಿ ಆರೋಗ್ಯವಾಗಿದ್ದರೂ ಬೆಳೆಯುತ್ತ ಹಲವು ಕಾಯಿಲೆಗಳಿಗೆ ತುತ್ತಾಗಲು ಆಹಾರ ಸೇವನಾ ಕ್ರಮ ಕಾರಣವಾಗುತ್ತದೆ. ವಯಸ್ಸಿಗೆ ಅನುಗುಣವಾಗಿ ಯಾವ ಬಗೆಯ ಆಹಾರ ಸೇವನೆ ಮಾಡಬೇಕು ಎಂಬುದನ್ನು ತಿಳಿದುಕೊಳ್ಳಬೇಕು. ಇಲ್ಲವಾದರೆ ಚಿಕ್ಕ ವಯಸ್ಸಿನಲ್ಲೇ ಸಕ್ಕರೆ ಕಾಯಿಲೆ, ಅಸ್ತಮಾ, ಹೃದಯ ಸಂಬಂಧಿ ಖಾಯಿಲೆಗಳಿಗೆ ತುತ್ತಾಗಬೇಕಾಗುತ್ತದೆ ಎಂದು ಎಚ್ಚರಿಸಿದಲ್ಲದೆ ಆರೋಗ್ಯಕರ ಆಹಾರ ಸೇವನೆ ಮತ್ತು ಕಾಯಿಲೆಗಳ ಬಗ್ಗೆ ಪ್ರತಿಯೊಬ್ಬರು ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರಪಂಚದಲ್ಲಿಯೇ ಇಂದು ದೈಹಿಕ ಹಾಗೂ ಮಾನಸಿಕ ಆರೋಗ್ಯದ ಬಗ್ಗೆ ಹೆಚ್ಚೆಚ್ಚು ಚರ್ಚೆ, ಸಂಶೋಧನೆಗಳಾಗುತ್ತಿವೆ. ಜೀರ್ಣಕ್ರಿಯೆಗೆ ಅನುಕೂಲಕರವಾದ ಆಹಾರ ಪದಾರ್ಥಗಳಿಗೆ ಬೇಡಿಕೆಯೂ ಹೆಚ್ಚಾಗಿದ್ದು, ಹೆಚ್ಚಿನ ಪ್ರಮಾಣದಲ್ಲಿ ಸ್ಥಳೀಯ ಸಾಂಪ್ರದಾಯಿಕ ಆಹಾರ ಬಳಕೆ ಅನುಕೂಲಕರವಾಗಿರುತ್ತದೆ ಎಂದು ತಿಳಿಸಿದರು.

ಇದೇ ವೇಳೆ ಸೇವೆಯಿಂದ ನಿವೃತ್ತರಾದ ಕೆ.ದಾಕ್ಷಾಯಿಣಿ, ಕೆ.ಜೆ.ರಮಾದೇವಿ ಶ್ರೀನಿವಾಸ್ ಅವರನ್ನು ಆತ್ಮೀಯವಾಗಿ ಅಭಿನಂದಿಸಿ ಬೀಳ್ಕೊಡಲಾಯಿತು. ನಂತರ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು.

ವಿನ್ಯಾಸ್ ಇನ್ನೋವೇಟಿವ್ ಟೆಕ್ನಾಲಜೀಸ್ ಸಂಸ್ಥಾಪಕ ನರೇಂದ್ರ ನಾರಾಯಣ್, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕಿ ಡಾ.ಎಂ.ಪುಷ್ಪಾವತಿ, ಇಎನ್‌ಟಿ ವಿಭಾಗದ ಪ್ರಾಧ್ಯಾಪಕ ಪ್ರೊ.ಟಿ.ಕೆ.ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ಕೃಷಿ ಸಚಿವರ ವಿರುದ್ಧದ ಲಂಚ ವಿವಾದ
ಮೈಸೂರಲ್ಲಿ ಸಿಐಡಿ ತಂಡ ಪರಿಶೀಲನೆ



ಮೈಸೂರು, ಆ.9 (ಎಂಕೆ)– ಕೃಷಿ ಸಚಿವ ಚಲುವರಾಯಸ್ವಾಮಿ ವಿರುದ್ಧ ಲಂಚ ಬೇಡಿಕೆ ಸಂಬಂಧ ಕೃಷಿ ಇಲಾಖೆಯ ಅಧಿಕಾರಿಗಳು ರಾಜ್ಯಪಾಲರಿಗೆ ಪತ್ರ ಬರೆದ ವಿಚಾರಕ್ಕೆ ಸಂಬಂಧಿಸಿದಂತೆ ಮೈಸೂರಿನ ಸರಸ್ವತಿಪುರಂನಲ್ಲಿರುವ ಅಂಚೆ ಕಚೇರಿಗೆ ಭೇಟಿ ನೀಡಿದ ಸಿಐಡಿ ತಂಡ ಮಾಹಿತಿ ಕಲೆಹಾಕಿ, ದಾಖಲೆಗಳನ್ನು ಪಡೆದುಕೊಂಡಿದೆ.

ಸಿಐಡಿ ಐಜಿ ಪ್ರವೀಣ್ ಪವಾರ್ ಮಧುಕರ್ ನೇತೃತ್ವದ ಸಿಐಡಿ ತಂಡ ತನಿಖೆ ನಡೆಸುತ್ತಿದ್ದು, ಸಿಐಡಿ ತಂಡದ ಜೊತೆ ಮಂಡ್ಯ ಎಸ್ಪಿ ಯತೀಶ್, ಮೈಸೂರಿನ ಸರಸ್ವತಿಪುರಂ ಪ್ರಧಾನ ಅಂಚೆ ಕಚೇರಿಗೆ ಆಗಮಿಸಿ ಹಲವಾರು ಮಾಹಿತಿ ಕಲೆಹಾಕಿದ್ದಾರೆ. ಜು.14 ರಂದು ಸರಸ್ವತಿಪುರಂ ಅಂಚೆ ಕಚೇರಿಯಿಂದ ರಾಜಭವನಕ್ಕೆ ಪತ್ರ ಹೋಗಿದ್ದು, ಈ ಹಿನ್ನೆಲೆಯಲ್ಲಿ ಸಿಐಡಿ ತಂಡದ ಅಧಿಕಾರಿಗಳು, ಅಂಚೆ ಕಚೇರಿಯಲ್ಲಿ ಕೆಲ ದಾಖಲೆಗಳನ್ನು ತೆಗೆದುಕೊಂಡಿದ್ದು, ಮತ್ತಷ್ಟು ದಾಖಲೆಗಳನ್ನ ಒದಗಿಸುವಂತೆ ಕಚೇರಿ ಸಿಬ್ಬಂದಿಗೆ ಸೂಚನೆ ನೀಡಿದ್ದಾರೆ.

ವೃದ್ಧೆ ಮೇಲೆ ಗೂಳಿ ದಾಳಿ



ಮೈಸೂರು, ಆ.9(ಎಂಕೆ)– ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ವೃದ್ಧೆ ಮೇಲೆ ಬಿಡಾಡಿ ಗೂಳಿ ದಾಳಿ ನಡೆಸಿರುವ ಘಟನೆ ಮೈಸೂರಿನ ಸರಸ್ವತಿಪುರಂನಲ್ಲಿ ನಡೆದಿದೆ.

ಇಲ್ಲಿನ ಪಾರ್ಕ್ ಎದುರು ರಸ್ತೆ ಮಧ್ಯದಲ್ಲಿ ನಿಂತಿದ್ದ ಗೂಳಿ ನಡೆದುಕೊಂಡು ಹೋಗುತ್ತಿದ್ದ ವೃದ್ಧೆಯ ಮೇಲೆ ಏಕಾಏಕಿ ದಾಳಿ ನಡೆಸಿದೆ. ತಕ್ಷಣ ವೃದ್ಧೆ ಕೆಳಗೆ ಬಿದ್ದಿದ್ದಾರೆ. ಈ ದೃಶ್ಯ ಪಾರ್ಕ್ ಎದುರಿನ ಸಿಸಿಟಿವಿಯೊಂದರಲ್ಲಿ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ವೈರಲ್ ಆಗಿದೆ. ಸದ್ಯ ಗಾಯಾಳುವಿಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

ನಗರದಲ್ಲೆಡೆ ಬಿಡಾಡಿ ದನಗಳ ಹಾವಳಿ ಹೆಚ್ಚಾಗಿದ್ದು, ರಸ್ತೆಯಲ್ಲಿ ಮಹಿಳೆಯರು, ಮಕ್ಕಳು, ವಯೋವೃದ್ಧರು ತಿರುಗಾಡುವುದೇ ಕಷ್ಟವಾಗಿದೆ. ಪ್ರತಿನಿತ್ಯ ಒಂದಲ್ಲಾ ಒಂದು ಕಡೆಗೆ ನಾಯಿಗಳು, ಬೀಡಾಡಿ ದನಗಳು, ಇತರೆ ಪ್ರಾಣಿಗಳಿಂದ ಅನಾಹುತಗಳಾಗುತ್ತಿದ್ದರೂ ನಗರಪಾಲಿಕೆ ಅಧಿಕಾರಿ, ಸಿಬ್ಬಂದಿ ಮಾತ್ರ ಕ್ರಮಕೈಗೊಳ್ಳದಿರುವುದಕ್ಕೆ ನಾಗರಿಕರು ಅತೀವ ಬೇಸರ ವ್ಯಕ್ತಪಡಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವರ ಮಹಾಲಕ್ಷ್ಮಿ ಹಬ್ಬ ಅಂಗವಾಗಿ ವಸ್ತ್ರ ಉತ್ಸವ



ಮೈಸೂರು,ಆ.9(ಎಂಟಿವೈ)– ವರ ಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಆ.11ರಿಂದ 20ರವರೆಗೆ ನಗರದ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ವಸ್ತ್ರ ಉತ್ಸವ ಶೀರ್ಷಿಕೆಯಲ್ಲಿ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ ಏರ್ಪಡಿಸಲಾಗಿದೆ ಎಂದು ಜೆಎಸ್‌ಎಸ್ ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೇಕಾರರ ಸಹಕಾರ ಸಂಘಗಳಲ್ಲಿ ತಯಾರಾದ ಕೈಮಗ್ಗ ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆ ಒದಗಿಸುವ ದೃಷ್ಟಿಯಿಂದ ಹಾಗೂ ಕೈಮಗ್ಗ ಉತ್ಪನ್ನಗಳ ಬಳಕೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಈ ಮೇಳವನ್ನು ಆಯೋಜಿಸಲಾಗಿದೆ. ಕೈಮಗ್ಗ ನೇಕಾರರು ಮತ್ತು ಕರಕುಶಲಕರ್ಮಿಗಳು ಸಿದ್ಧಪಡಿಸಿರುವ ಉತ್ಪನ್ನಗಳನ್ನು ಒಂದೇ ಸೂರಿನಡಿ ಮಾರಾಟ ಮಾಡಲು ಅವಕಾಶವನ್ನು ಕಲ್ಪಿಸಿಕೊಡಲಾಗುತ್ತಿದೆ. ವಿವಿಧ ರಾಜ್ಯಗಳಿಂದ ಸುಮಾರು 75ಕ್ಕೂ ಹೆಚ್ಚು ಕೈಮಗ್ಗ ನೇಕಾರರು ಮತ್ತು ಕುಶಲಕರ್ಮಿಗಳು ಉತ್ಪಾದಿಸಿರುವ ಉತ್ಪನ್ನಗಳು ಪ್ರದರ್ಶನ ಮತ್ತು ಮಾರಾಟ ಮಾಡಲಿದ್ದಾರೆ ಎಂದರು. ಮೇಳದಲ್ಲಿ ನಮ್ಮ ರಾಜ್ಯದ ರೇಷ್ಮೆ ಸೀರೆ, ಮೊಳಕಾಲ್ಮೂರು ಸೀರೆ, ಇಳಕಲ್ ಸೀರೆ, ಕಸೂತಿ ಸೀರೆ, ತಮಿಳುನಾಡಿನ ಕಾಂಜೀವರಂ ಸೀರೆ, ಕೇರಳದ ಕೈಮಗ್ಗ ಉತ್ಪನ್ನಗಳು, ಬಿಹಾರ್ ತಸ್ಸರ್ ಸೀರೆ, ಪಶ್ಚಿಮ ಬಂಗಾಳದ ಕಾಂತಾ ಸೀರೆ, ಬಲಚುರಿ ಸೀರೆ, ಭುಟಿಕ್ ಸೀರೆ, ಕಾಟನ್ ಸೀರೆ ಸೇರಿದಂತೆ ಇನ್ನಿತರ ವಿವಿಧ ಸೀರೆಗಳು ದೊರೆಯುತ್ತವೆ. ಆ.11ರಂದು ಸಂಜೆ 4ಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಮೇಳಕ್ಕೆ ಚಾಲನೆ ನೀಡಲಿದ್ದಾರೆ. ಪ್ರತಿದಿನ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ಮೇಳ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ಅರ್ಬನ್ ಹಾತ್‌ನ ಯೋಜನಾ ನಿರ್ದೇಶಕ ಎಂ.ಶಿವನಂಜಸ್ವಾಮಿ, ರಾಕೇಶ್ ರೈ ಇದ್ದರು.

ಆ.12, ಬೆಳವಾಡಿ ಎಂಐಟಿಎಂಎಸ್ ಕಾಲೇಜಲ್ಲಿ ಉದ್ಯೋಗ ಮೇಳ



ಮೈಸೂರು,ಆ.9(ಎಂಟಿವೈ)– ಶ್ರೀರಂಗಪಟ್ಟಣ ತಾಲೂಕಿನ ಬೆಳವಾಡಿಯಲ್ಲಿರುವ ಎಂಐಟಿಎಂಎಸ್ ಕಾಲೇಜಿನಲ್ಲಿ ಆ.12ರಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ನರೇಶ್‌ಕುಮಾರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಉದ್ಯೋಗ ಮೇಳ ನಡೆಸಲಾಗುತ್ತಿದೆ. ಈ ಬಾರಿ ನಡೆಯುವ ಮೇಳದಲ್ಲಿ 100ಕ್ಕೂ ಹೆಚ್ಚು ಕಂಪನಿಗಳು ಪಾಲ್ಗೊಂಡು 9400 ಉದ್ಯೋಗ ನೀಡುವ ನಿರೀಕ್ಷೆ ಇದೆ. ಎಂದರು.

ಕೊರೊನಾ ಬಳಿಕ ಆಯೋಜಿಸಿರುವ ಮೊದಲ ಉದ್ಯೋಗ ಮೇಳವಾಗಿದ್ದು, ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಪ್ಲೊಮಾ, ಯಾವುದೇ ಪದವಿ ಪಡೆದಿರುವವರು ಪಾಲ್ಗೊಳ್ಳಬಹುದಾಗಿದೆ. ಯಾವುದೇ ನೋಂದಣಿ ಶುಲ್ಕ ನೀಡದೆ ಸಂದರ್ಶನ ಎದುರಿಸಬಹುದಾಗಿದೆ. ಉದ್ಯೋಗದಾತರು ಹಾಗೂ ಉದ್ಯೋಗಾಕಾಂಕ್ಷಿಗಳ ನಡುವೆ ತಮ್ಮ ಶಿಕ್ಷಣ ಸಂಸ್ಥೆ ಸಂಪರ್ಕ ಸೇತುವೆಯಾಗಿ ಕೆಲಸ ಮಾಡಲಿದೆ. ಈಗಾಗಲೇ ಸಾವಿರಕ್ಕೂ ಹೆಚ್ಚು ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ.ಸ. 9480884443 ಅನ್ನು ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಎಂಐಟಿಎಂಎಸ್ ಕಾಲೇಜಿನ ಆಡಳಿತಾಧಿಕಾರಿ ಅನಿರುದ್ಧ, ವೈ.ಎಚ್.ಶರತ್‌ಕುಮಾರ್, ಶಿವಸಾಗರ್ ಇದ್ದರು.

ಸರ್ಪಸಂಸ್ಕಾರ, ಆಶ್ಲೇಷಾ ಬಲಿ ಕಾಲ ಸರ್ಪಶಾಂತಿ

ಮೈಸೂರು,ಆ.9(ಪಿಎಂ)– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಆ.13ರಂದು ಬೆಳಗ್ಗೆ 7.30ಕ್ಕೆ ಸರ್ಪಸಂಸ್ಕಾರ, ಕಾಲಸರ್ಪ ನಿವೃತ್ತಿ ಶಾಂತಿ ಹಾಗೂ ಆ.14ರಂದು ಬೆಳಗ್ಗೆ 7.30ಕ್ಕೆ ಸರ್ಪ ಸಂಸ್ಕಾರಾಂಗ ಹೋಮ, ಆಶ್ಲೇಷಾ ಬಲಿ, ಕಾಲ ಸರ್ಪಶಾಂತಿ ಮತ್ತು ಕುಜದೋಷ ನಿವೃತ್ತಿ ಹೋಮ ನೆರವೇರಿಸಲಾಗುವುದು. ಹೆಚ್ಚಿನ ವಿವರಗಳಿಗೆ ಮೊ.ಸಂ. 98451 83392, 98451 83399 ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ನಿಧನ

ಪುಟ್ಟಸ್ವಾಮಿಗೌಡ



ನಂಜನಗೂಡು.ಆ.9– ತಾಲೂಕಿನ ಅಹಲ್ಯ ಗ್ರಾಮದ ಪುಟ್ಟಸ್ವಾಮಿಗೌಡ (75) ಮಂಗಳವಾರ ರಾತ್ರಿ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಮೂವರು ಪುತ್ರರು, ಮೂವರು ಸೊಸೆಯಂದಿರು, ಮೊಮ್ಮಕ್ಕಳು, ಮರಿ ಮೊಮ್ಮಗ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರು ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ನಿರ್ದೇಶಕ ಚಂದ್ರೇಗೌಡ ಅವರ ದೊಡ್ಡಪ್ಪ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ಬುಧವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸತೀಶ್



ಮೈಸೂರಿನ ಹೆಬ್ಬಾಳ ನಿವಾಸಿ ಸತೀಶ್(37) ಬುಧವಾರ ನಿಧನರಾದರು. ಮೃತರು ಪತ್ನಿ, ಹೆಣ್ಣು ಮಗು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ ಹೆಬ್ಬಾಳಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಕ್ಕಳಲ್ಲಿ ಶೈಕ್ಷಣಿಕ ಒತ್ತಡ ತಪ್ಪಿಸಲು ಶಾಲೆಯ ಅವಧಿ ಕಡಿತ ಅವಶ್ಯ

ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಮಂಜುನಾಥ್ ಅಭಿಮತ

- ಶಾಲೆಯ ಸಮಯ ಬೆಳಗ್ಗೆ 10ರಿಂದ 12.30 ಗಂಟೆವರೆಗೆ ಸಾಕು
- ಮಕ್ಕಳಿಗೆ ಅವಶ್ಯವಿರುವ ನಿದ್ರೆ, ಆಟದ ಅನುಭವ ಬಹಳ ಮುಖ್ಯ
- ಶೇಕಡ 5 ರಿಂದ 15ರಷ್ಟು ಮಕ್ಕಳಲ್ಲಿ ವಾಕ್–ಶ್ರವಣ ದೋಷವಿದೆ
- ಇತ್ತೀಚಿನ ದಿನಗಳಲ್ಲಿ ಕೊಳಚೆ ಪ್ರದೇಶಗಳಲ್ಲಿ ಸಂಧಿವಾತ ಜ್ವರ ಹೆಚ್ಚಾಗುತ್ತಿದೆ



ಮೈಸೂರು,ಆ.9(ಬಿಎಲ್‌ಯು)– ಮಕ್ಕಳ ಮೇಲಿನ ಶೈಕ್ಷಣಿಕ ಒತ್ತಡವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಶಾಲೆಯ ಅವಧಿ ಕಡಿತ ಮಾಡುವುದು ಅವಶ್ಯ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ. ಸಿ.ಎನ್.ಮಂಜುನಾಥ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ನಡೆದ ಸಂಸ್ಥೆಯ 58ನೇ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳ ಮೇಲೆ ಅನಗತ್ಯ ಒತ್ತಡ ಹೇರಲಾಗುತ್ತಿದೆ. ಇದರಿಂದ ಮಕ್ಕಳ ಬಾಲ್ಯದ ಸುಂದರ ಜಗತ್ತನ್ನು ಬಲವಂತವಾಗಿ ಕಿತ್ತುಕೊಳ್ಳಲಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. ಶೈಕ್ಷಣಿಕವಾಗಿ ಮಕ್ಕಳ ಮೇಲೆ ಅನಗತ್ಯ ಒತ್ತಡ ಹೇರುತ್ತಿರುವ ಕಾರಣ ಅವರ ಕಲಿಕೆ ಶಿಕ್ಷಣಕ್ಕೆ ಮಾತ್ರ ಸೀಮಿತವಾಗಿದ್ದು, ಅವರ ಬಾಲ್ಯದ ಸುಂದರ ಅನುಭವ ದೂರವಾಗಿದೆ. ಈ ಕಾರಣದಿಂದ ಬೆಳಗ್ಗೆ 10ರಿಂದ ಶಾಲೆ ಆರಂಭವಾಗಿ ಮಧ್ಯಾಹ್ನ 12.30 ಗಂಟೆಗೆ ಮುಗಿಯಬೇಕು. ಈ ಮೂಲಕ ಮಕ್ಕಳಿಗೆ ಅವಶ್ಯ ನಿದ್ರೆ ಹಾಗೂ ಆಟದ ಅನುಭವ ದೊರೆಯುವಂತಾಗಬೇಕು. ಉಳಿದ ಸಮಯದಲ್ಲಿ ಪೋಷಕರು ಮಕ್ಕಳ ಕಲಿಕೆಗೆ ನೆರವಾಗಬೇಕು ಎಂದು ಡಾ.ಮಂಜುನಾಥ್ ಸಲಹೆ ನೀಡಿದರು.

ಪೋಷಕರು ತಮ್ಮ ಕನಸನ್ನು ಸಾಕಾರಗೊಳಿಸಿಕೊಳ್ಳುವ ಸಲುವಾಗಿ ಮಕ್ಕಳ ಮೇಲೆ ಒತ್ತಡ ಹೇರುತ್ತಿದ್ದಾರೆ. ಈ ಕಾರಣದಿಂದಾಗಿ ಮಕ್ಕಳು ಒತ್ತಡದಲ್ಲೇ ದಿನದ ಅಧಿಕ ಸಮಯ ಕಳೆಯುತ್ತಾರೆ. ಇದರಿಂದ ಮಕ್ಕಳನ್ನು ಮುಕ್ತ ಮಾಡಿ, ಪೋಷಕರು ಹೆಚ್ಚಿನ ಸಮಯವನ್ನು ಮಕ್ಕಳ ಜೊತೆ ಕಳೆಯಬೇಕು. ಈ ವಾತಾವರಣದಿಂದ ಮಕ್ಕಳು ಉತ್ತಮ ನಡವಳಿಕೆ ಹಾಗೂ ಬದುಕುವ ಕಲೆ ಕಲಿಯುತ್ತಾರೆ ಎಂದರು.

ಈ ಹಿಂದೆ ಅವಿಭಕ್ತ ಕುಟುಂಬಗಳು ಹೆಚ್ಚಾಗಿದ್ದವು. ಮನೆ ತುಂಬ ಜನರಿರುವ ಆ ವಾತಾವರಣದಲ್ಲಿ ಮನೆಯೇ ಶಾಲೆಯಾಗಿತ್ತು. ಮನೆಯಲ್ಲಿರುವ ಹಿರಿಯರು ಹಾಗೂ ಕಿರಿಯರು ತಮ್ಮ ಅನುಭವ ಹಾಗೂ ಭಾವನೆಗಳನ್ನು ಹಂಚಿಕೊಳ್ಳುತ್ತಿದ್ದರು. ಮನೆ ಮಂದಿ ಜೊತೆ ಮಕ್ಕಳು ಆಟವಾಡುತ್ತಿದ್ದರು. ಆದರೆ ಈಗ ಅವಿಭಕ್ತ ಕುಟುಂಬ ಪರಿಕಲ್ಪನೆಯೇ ಇಲ್ಲದಂತಾಗಿದೆ. ದಂಪತಿ ಜೊತೆಯಾಗಿದ್ದರೆ ಸಾಕು ಅದೇ ಅವಿಭಕ್ತ ಕುಟುಂಬ ಎಂದು ಅರ್ಥೈಸಲಾಗಿದೆ. ಇದರಿಂದ ಮಕ್ಕಳ ಕಲಿಕೆಯಲ್ಲಿ ಹಿನ್ನಡೆಯಾಗುತ್ತಿದೆ ಎಂದು ಹೇಳಿದರು.

ವಾಕ್–ಶ್ರವಣ ಸಮಸ್ಯೆ: ಇಂದು ಶೇಕಡ 5ರಿಂದ 15ರಷ್ಟು ಮಕ್ಕಳು ವಾಕ್ ಮತ್ತು ಶ್ರವಣ ಸಮಸ್ಯೆ ಎದುರಿಸುತ್ತಿವೆ. ಜನ್ಮ ತಾಳುತ್ತಲೆ ಕೆಲವು ಅಂಗಗಳು ಸರಿಯಾಗಿ ಕೆಲಸ ಮಾಡುವುದಿಲ್ಲ. ಮಕ್ಕಳಲ್ಲಿ ಎದುರಾಗುವ ಈ ಸಮಸ್ಯೆಯನ್ನು ಆರಂಭದಲ್ಲೆ ಗುರುತಿಸಿ ವೈದ್ಯರು ನೀಡುವ ಚಿಕಿತ್ಸೆ ಮೂಲಕ ಸರಿಪಡಿಸಬೇಕು. ವಾಕ್ ಮತ್ತು ಶ್ರವಣ ಸಂಸ್ಥೆಯ ತಜ್ಞ ವೈದ್ಯರಿಂದ ಉತ್ತಮ ಚಿಕಿತ್ಸೆ ಕೊಡಿಸಿದರೆ ಮಕ್ಕಳ ಕಲಿಕೆ ಉತ್ತಮವಾಗುತ್ತದೆ ಎಂದು ತಿಳಿಸಿದರು.

ಶ್ರವಣದೋಷವುಳ್ಳ ಮಕ್ಕಳು ಹಾಗೂ ಸಮಾಜದ ನಡುವೆ ಅಂತರ ಉಂಟಾಗುತ್ತದೆ. ಈ ಕಾರಣದಿಂದ ಸಮುದಾಯದ ಸಂಪರ್ಕ ದೊರೆಯದೆ ಭಾಷೆ ಹಾಗೂ ಕಲಿಕೆಯಲ್ಲಿ ಮಕ್ಕಳು ಹಿನ್ನಡೆ ಅನುಭವಿಸುತ್ತವೆ ಎಂದು ಬೇಸರ ವ್ಯಕ್ತಪಡಿಸಿದರು.

ವಾಕ್ ಮತ್ತು ಶ್ರವಣ ದೋಷವುಳ್ಳ ಮಕ್ಕಳಿಗೆ ಉತ್ತಮ ಚಿಕಿತ್ಸೆ ನೀಡುತ್ತಿರುವ ಆಯಿಷ್ ಭಾರತದ ಪ್ರತಿಷ್ಠಿತ ಸಂಸ್ಥೆಯಾಗಿದೆ. ಇಲ್ಲಿ ಮಾನಸಿಕ ಸಮಸ್ಯೆಗಳಿಗೆ ಕೂಡ ಪರಿಹಾರ ದೊರೆಯುತ್ತದೆ. ಈ ಸಂಸ್ಥೆಯು ಎಲ್ಲಾ ಕಡೆ ಸ್ಥಾಪನೆಯಾಗಿ ಎಲ್ಲರಿಗೂ ಉತ್ತಮ ಚಿಕಿತ್ಸೆ ದೊರೆಯುವಂತಾಗಬೇಕು ಎಂದು ಆಶಿಸಿದರು.

ಕೊಳಚೆ ಪ್ರದೇಶದ ಮಕ್ಕಳಲ್ಲಿ ಅಕ್ಯೂಟ್ ಟ್ರಮಾಟಿಕ್ ಫೀವರ್ ಅಂದರೆ ತೀವ್ರ ಸಂಧಿವಾತ ಜ್ವರ ಕಾಣಿಸಿಕೊಳ್ಳುತ್ತಿದೆ. ಪೋಷಕರು ಇದರ ಬಗ್ಗೆ ಗಂಭೀರತೆ ವಹಿಸಿ ತಮ್ಮ ಸುತ್ತ ಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಇಲ್ಲದಿದ್ದರೆ ಮಕ್ಕಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಎಂದು ಎಚ್ಚರಿಸಿದರು. ಸಂಸ್ಥೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳನ್ನು ಡಾ.ಮಂಜುನಾಥ್ ಭೇಟಿ ಮಾಡಿ, ಸಿಬ್ಬಂದಿ ಜೊತೆ ಸಮಾಲೋಚನೆ ನಡೆಸಿದರು. ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕಿ ಡಾ.ಎಂ.ಪುಷ್ಪಾವತಿ, ಇಎನ್‌ಟಿ ಸರ್ಜನ್ ಡಾ.ಟಿ.ಕೆ.ಪ್ರಕಾಶ್, ಗಾಯಕ ಹರ್ಷ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾವೇರಿ ಆಸ್ಪತ್ರೆಯಲ್ಲಿ ಸ್ತನ್ಯಪಾನ ಸಪ್ತಾಹ ಕುರಿತು ಜಾಗೃತಿ ಕಾರ್ಯಕ್ರಮ



ಸ್ತನ್ಯಪಾನ ಸಪ್ತಾಹ ಜಾಗೃತಿ ಕಾರ್ಯಕ್ರಮದಲ್ಲಿ (ಎಡದಿಂದ) ಕಾವೇರಿ ಹೃದಯ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕಿ ಡಾ.ಸರಳಾ ಚಂದ್ರಶೇಖರ್, ಅಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್, ಆಯಪ್ ಮೈಸೂರು ಶಾಖೆ ಅಧ್ಯಕ್ಷ ಡಾ.ಎಸ್.ಆರ್.ರವೀಶ್, ಕಾವೇರಿ ಹೃದಯ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಬಿ.ಎನ್.ರಾಜೀವ, ಆಯಪ್ ಮೈಸೂರು ಶಾಖೆಯ ಕಾರ್ಯದರ್ಶಿ ಡಾ.ಎಚ್.ಆರ್.ನಂದೀಶ್ ಮತ್ತು ಮಕ್ಕಳ ತಜ್ಞ ಡಾ.ಅಜಯ್ ರಾಘವ ಜೋಶಿ ಪಾಲ್ಗೊಂಡಿದ್ದರು.

ಮೈಸೂರು,ಆ.9–ಸ್ತನ್ಯಪಾನ ಜಾಗೃತಿ ಸಪ್ತಾಹದ (ಆ.1ರಿಂದ 7) ಅಂಗವಾಗಿ ಕಾವೇರಿ ಹೃದಯ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಗರ್ಭಿಣಿಯರು ಮತ್ತು ಬಾಣಂತಿಯರಿಗೆ ಸ್ತನ್ಯ ಪಾನದ ಮಹತ್ವದ ಕುರಿತು ಅರಿವು ಮೂಡಿಸುವ ಮೂಲಕ ಜಾಗೃತಿ ಮೂಡಿಸಲಾಯಿತು. ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ (ಐಎಪಿ) ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಐಎಪಿ ಮೈಸೂರು ಶಾಖೆಯ ಕಾರ್ಯದರ್ಶಿ ಡಾ.ಎಚ್.ಆರ್.ನಂದೀಶ್ ಸ್ತನ್ಯಪಾನದ ಮಹತ್ವದ ಕುರಿತು ತಿಳಿಸಿಕೊಟ್ಟರು. ಇದೇ ವೇಳೆ ಕಾವೇರಿ ಹೃದಯ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಸಿಬ್ಬಂದಿ ಚುಟುಕು ನಾಟಕದ ಮೂಲಕ ನಿರೀಕ್ಷಿತ ತಾಯಂದಿರು ಮತ್ತು ಹೊಸ ಪೋಷಕರಿಗೆ ಸ್ತನ್ಯಪಾನದ ಕುರಿತು ಅರಿವು ಮೂಡಿಸಿದರು. ಈ ಕುರಿತು ಅರಿವು, ಜಾಗೃತಿ ಮೂಡಿಸಲು ನಗರದ ವಿವಿಧ ಸ್ಥಳಗಳಲ್ಲಿ ತಿಂಗಳು ಪೂರ್ತಿ ಬೀದಿ ನಾಟಕಗಳನ್ನು ಪ್ರದರ್ಶಿಸಲಾಗುತ್ತದೆ ಎಂದು ತಿಳಿಸಿದರು.

ರಾಜ್ಯಮಟ್ಟದ ಉತ್ತಮ ಗ್ರಂಥಪಾಲಕ



ಮೈಸೂರು,ಆ.9(ಎಂಕೆ)–ರಾಜ್ಯಮಟ್ಟದ 'ಉತ್ತಮ ಗ್ರಂಥಪಾಲಕ' ಪುರಸ್ಕಾರಕ್ಕೆ ಮೈಸೂರಿನ ವಿದ್ಯಾವಿಕಾಸ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆಯ ಮುಖ್ಯ ಗ್ರಂಥಪಾಲಕ ಡಾ.ಜೆ.ಚಂದ್ರಶೇಖರ್ ಆಯ್ಕೆಯಾಗಿದ್ದಾರೆ. ಬೆಂಗಳೂರಿನ ಪಶ್ಚಿಮ ವಲಯ ಹಂಪಿನಗರದಲ್ಲಿರುವ ನಗರ ಕೇಂದ್ರ ಗ್ರಂಥಾಲಯದ 'ಗ್ರಂಥಾಂಗಣ'ದಲ್ಲಿ ಆ.12ರಂದು ನಡೆಯುವ 'ಗಂಥಪಾಲಕರ ದಿನಾಚರಣೆ'ಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಎಂ.ಜಿ.ಮಾನಸಗೆ ಪಿಹೆಚ್.ಡಿ



ಮೈಸೂರು,ಆ.9(ಪಿಎಂ)–ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯವು ಎಂ.ಜಿ.ಮಾನಸ ಅವರಿಗೆ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಜ್ಞಾನದಲ್ಲಿ ಪಿಹೆಚ್.ಡಿ ಪದವಿ ನೀಡಿದೆ. ಡಾ.ಎಸ್.ಗಾಯತ್ರಿ ಅವರ ಮಾರ್ಗದರ್ಶನದಲ್ಲಿ 'ಆ್ಯನ್ ಎಫಿಸಿಯೆಂಟ್ ಫಾರ್ ಮಲ್ಟಿಮೋಡಲ್ ಬಯೋಮೆಟ್ರಿಕ್ ಸಿಸ್ಟಮ್' ವಿಷಯ ಕುರಿತು ಮಂಡಿಸಿದ ಮಹಾಪ್ರಬಂಧಕ್ಕೆ ವಿಟಿಯು ಅವರಿಗೆ ಪಿಹೆಚ್.ಡಿ ನೀಡಿದೆ ಎಂದು ಪ್ರಕಟಣೆ ತಿಳಿಸಿದೆ.

ಮುಕ್ತ ವಿವಿ ವ್ಯವಸ್ಥಾಪನಾ ಮಂಡಳಿಗೆ ಶಾಸಕರಿಬ್ಬರ ನೇಮಕ



ಕೆ.ಹರೀಶ್‌ಗೌಡ



ಡಿ.ರವಿಶಂಕರ್

ಮೈಸೂರು, ಆ. 9(ಎಸ್‌ಪಿಎನ್)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಗೆ ಚಾಮರಾಜ ಕ್ಷೇತ್ರದ ಶಾಸಕ ಕೆ. ಹರೀಶ್‌ಗೌಡ, ಕೆ.ಆರ್.ನಗರ ಕ್ಷೇತ್ರದ ಶಾಸಕ ಡಿ.ರವಿಶಂಕರ್ ಅವರನ್ನು ನೇಮಿಸಿ ರಾಜ್ಯ ಸರ್ಕಾರ ಆದೇಶಿಸಿದೆ. ಈ ಇಬ್ಬರು ಶಾಸಕರು ತಮ್ಮ ವಿಧಾನಸಭಾ ಸದಸ್ಯತ್ವ ಹೊಂದಿರುವವರೆಗೆ ಮುಕ್ತ ವಿವಿ ವ್ಯವಸ್ಥಾಪನಾ ಮಂಡಳಿಯ ಸದಸ್ಯತ್ವವನ್ನು ಹೊಂದಿರುತ್ತಾರೆ ಎಂದು ಮುಕ್ತ ವಿವಿ ಕುಲಸಚಿವರು ಆದೇಶದಲ್ಲಿ ತಿಳಿಸಿದ್ದಾರೆ.

ಪತ್ರ ವಿವಾದ: ಸುಳ್ಳು ಆರೋಪ, ಅರ್ಜಿಗಳಿಗೆ ಬಲಿಯಾಗಬೇಡಿ

ರಾಜ್ಯಪಾಲರಿಗೆ ಸಚಿವ ಎನ್.ಚಲುವರಾಯಸ್ವಾಮಿ ಮನವಿ



ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಮಂಡ್ಯ ಜಿಲ್ಲೆಯ ಕಾಂಗ್ರೆಸ್ ಶಾಸಕರೊಡಗೂಡಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿದರು.

ಬೆಂಗಳೂರು, ಆ.9– ಸುಳ್ಳು ಆರೋಪಗಳು, ನಕಲಿ ಅರ್ಜಿಗಳಿಗೆ ಬಲಿಯಾಗಬೇಡಿ ಎಂದು ಕೃಷಿ ಸಚಿವ ಎನ್ ಚಲುವರಾಯಸ್ವಾಮಿ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ಮನವಿ ಮಾಡಿದ್ದಾರೆ.

ಆರರಿಂದ ಎಂಟು ಲಕ್ಷದವರೆಗೆ ಲಂಚ ನೀಡುವಂತೆ ಸಚಿವರು ಕೃಷಿ ಇಲಾಖೆ ಜಂಟಿ ನಿರ್ದೇಶಕರ ಮೂಲಕ ಒತ್ತಡ ಹೇರುತ್ತಿದ್ದಾರೆ ಎಂದು ಆರೋಪಿಸಿ ಮಂಡ್ಯ ಜಿಲ್ಲೆಯ ಏಳು ಸಹಾಯಕ ಕೃಷಿ ನಿರ್ದೇಶಕರು(ಎಡಿಎ) ಲಂಚ ಕೇಳುವ ಇಂತಹ ಸಂಪ್ರದಾಯವನ್ನು ನಿಯಂತ್ರಿಸದಿದ್ದರೆ ಕುಟುಂಬ ಸಮೇತ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕಿ ಇತ್ತೀಚೆಗೆ ಗೆಹ್ಲೋಟ್‌ಗೆ ಪತ್ರ ಬರೆದ ಹಿನ್ನೆಲೆಯಲ್ಲಿ ಚಲುವರಾಯಸ್ವಾಮಿ ಮನವಿ ಮಾಡಿದ್ದಾರೆ.

ಈ ಪತ್ರ ಬಂದ ನಂತರ ರಾಜ್ಯಪಾಲರ ಕಚೇರಿಯು ತನಿಖೆಗಾಗಿ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ಪತ್ರವನ್ನು ಹಸ್ತಾಂತರಿಸಿತ್ತು. ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ನಕಲಿ ಎಂದಿದ್ದರೂ ಸಿಐಡಿ ತನಿಖೆಗೆ ಆದೇಶಿಸಿದ್ದಾರೆ.

ರಾಜ್ಯಪಾಲರಿಗೆ ಬರೆದಿರುವ ಪತ್ರದಲ್ಲಿ ಚಲುವರಾಯಸ್ವಾಮಿ, ಇಂತಹ ಹೊಣೆಗಾರಿಕೆಯಿಲ್ಲದ ನಕಲಿ ಆರೋಪಗಳು ಮತ್ತು ನಕಲಿ ಅರ್ಜಿಗಳಿಗೆ ಬಲಿಯಾಗದಂತೆ ಪ್ರಾರ್ಥಿಸುತ್ತೇನೆ. ಮುಂದೆ ಇಂತಹ ಘಟನೆಗಳು ನಡೆದರೆ ಪ್ರಾಥಮಿಕ ತನಿಖೆಗೆ ಆದೇಶಿಸುವಂತೆ ರಾಜ್ಯಪಾಲರಿಗೆ ಸಚಿವರು ಮನವಿ ಮಾಡಿದರು. ಪ್ರಾಥಮಿಕ ತನಿಖೆಯಲ್ಲಿ ಪತ್ರ ಅಸಲಿ ಎಂದು ಕಂಡುಬಂದರೆ ತನಿಖೆಗೆ ಆದೇಶಿಸಬೇಕು ಎಂದರು.

ಇದು ನಿಜವೆಂದು ಕಂಡುಬಂದರೆ ಮತ್ತು ಪುರಾವೆಗಳ ಬೆಂಬಲದೊಂದಿಗೆ ಆ ಪ್ರಕರಣವನ್ನು ವಿಚಾರಣೆಗೆ ಒಳಪಡಿಸಬೇಕು. ಇಲ್ಲದಿದ್ದರೆ ಸಾಂವಿಧಾನಿಕ ಸಂಸ್ಥೆಗಳನ್ನು ಸಮಾಜ ವಿರೋಧಿಗಳು ಮತ್ತು ಪಟ್ಟಭದ್ರ ಹಿತಾಸಕ್ತಿಗಳಿಂದ ಸುಲಭವಾಗಿ ಸರ್ಕಾರ, ಇಲಾಖೆ ಮತ್ತು ನನಗೆ ಕೆಟ್ಟ ಹೆಸರು ತರಲು ದುರುಪಯೋಗಪಡಿಸಿಕೊಳ್ಳಬಹುದು ಎಂದು ಚಲುವರಾಯಸ್ವಾಮಿ ಹೇಳಿದರು.

ಪತ್ರವು 'ಸಂಪೂರ್ಣವಾಗಿ ನಕಲಿ' ಎಂದು ಪ್ರತಿಪಾದಿಸಿದ ಸಚಿವರು, ಅದರ ಬಗ್ಗೆ ತಿಳಿದ ನಂತರ ನಾನು ಆಘಾತಕ್ಕೊಳಗಾಗಿದ್ದೇನೆ ಎಂದು ಹೇಳಿದರು. ಸಹಾಯಕ ನಿರ್ದೇಶಕರು ಇಂತಹ ಪತ್ರ ಬರೆದಿಲ್ಲ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದರು. ಅವರ ಪ್ರಕಾರ, ಪತ್ರ ಬರೆದಿದ್ದಾರೆ ಎನ್ನಲಾದ ಏಳು ಮಂದಿ ಸಹಾಯಕ ನಿರ್ದೇಶಕರ ಪೈಕಿ ರಮೇಶ್ ಅವರು ಮಂಡ್ಯದಲ್ಲಿ ಕೆಲಸ ಮಾಡುತ್ತಿಲ್ಲ. ಇನ್ನುಳಿದ ಅಧಿಕಾರಿಗಳು ಕೂಡ ರಾಜ್ಯಪಾಲರಿಗೆ ಪತ್ರ ಬರೆದಿಲ್ಲ ಎಂದಿದ್ದಾರೆ.

ಇದು ಸಂಪೂರ್ಣವಾಗಿ ನನ್ನ ವಿರುದ್ಧ ಇರುವ ಪಟ್ಟಭದ್ರ ಹಿತಾಸಕ್ತಿಗಳ ಕೆಲಸವಾಗಿದೆ. ಅವರು ನನ್ನ ಪ್ರತಿಷ್ಠೆಯನ್ನು ಹಾಳು ಮಾಡಲು ಮತ್ತು ಸಾಂವಿಧಾನಿಕ ಸಂಸ್ಥೆಯನ್ನು (ರಾಜ್ಯಪಾಲರ ಕಚೇರಿ) ದುರುಪಯೋಗಪಡಿಸಿಕೊಳ್ಳಲು ಎಲ್ಲಾ ವಿಧಾನಗಳನ್ನು ಸುಳ್ಳು ಮಾಡಿದ್ದಾರೆ. ರಾಜಭವನದ ಅಧೀನ ಕಾರ್ಯದರ್ಶಿ ಸಹಿ ಇರುವ ಕವರ್ ಲೆಟರ್‌ನೊಂದಿಗೆ ಮುಖ್ಯ ಕಾರ್ಯದರ್ಶಿಗೆ ನಕಲಿ ಪತ್ರವನ್ನು ರವಾನಿಸಿರುವುದು ದುರದೃಷ್ಟಕರ ಎಂದು ಅವರು ಹೇಳಿದ್ದಾರೆ.

ಹಲ್ಲೆಗೆರೆ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ವೇಳೆ ದಾಂಧಲೆ

● ಕಾಂಗ್ರೆಸ್–ಜೆಡಿಎಸ್ ಬೆಂಬಲಿಗರ ಮಾರಾಮಾರಿ ● ಚುನಾವಣೆ ಮುಂದೂಡಿದ ಚುನಾವಣಾಧಿಕಾರಿ ● ಜೆಡಿಎಸ್ ಬೆಂಬಲಿತರಿಂದ ಜಿಲ್ಲಾಧಿಕಾರಿಗೆ ದೂರು

ಮಂಡ್ಯ,ಆ.9– ಹಲ್ಲಗೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ವೇಳೆ ದಾಂಧಲೆ ನಡೆದಿದ್ದು, ಜೆಡಿಎಸ್ ಮತ್ತು ಕಾಂಗ್ರೆಸ್ ಸದಸ್ಯರು ಹಾಗೂ ಬೆಂಬಲಿಗರು ಮಾರಾಮಾರಿ ನಡೆಸಿದ್ದಾರೆ. ಇದರ ಪರಿಣಾಮವಾಗಿ ಚುನಾವಣಾಧಿಕಾರಿಗಳು ಚುನಾವಣೆಯನ್ನು ಮುಂದೂಡಿದ್ದಾರೆ.

ಹಲ್ಲೆಗೆರೆ ಗ್ರಾಪಂ.ನ ಎರಡನೇ ಅವಧಿಯ ಅಧ್ಯಕ್ಷ ಸ್ಥಾನವನ್ನು ಸಾಮಾನ್ಯ ಮಹಿಳೆ ಹಾಗೂ ಉಪಾಧ್ಯಕ್ಷ ಸ್ಥಾನವನ್ನು ಪರಿಶಿಷ್ಟ ಜಾತಿಗೆ ಮೀಸಲಿಡಲಾಗಿತ್ತು. ಒಟ್ಟು 19 ಸದಸ್ಯರ ಬಲ ಹೊಂದಿರುವ ಈ ಗ್ರಾಪಂನಲ್ಲಿ ಗೆಲುವು ಸಾಧಿಸಲು ಕನಿಷ್ಠ 10 ಮಂದಿಯ ಬೆಂಬಲ ಬೇಕಾಗುತ್ತದೆ. ಚುನಾವಣೆ ಹಿನ್ನೆಲೆಯಲ್ಲಿ ಜೆಡಿಎಸ್ ಬೆಂಬಲಿತ 10 ಸದಸ್ಯರು ಪ್ರವಾಸ ಹೋಗಿದ್ದು, ಚುನಾವಣೆಯ ದಿನವಾದ ಇಂದು ಬೆಳಗ್ಗೆ ಹಿಂತಿರುಗಿದರು. ಬೆಳಗ್ಗೆ ಚುನಾವಣಾ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾದಾಗ ಜೆಡಿಎಸ್ ಬೆಂಬಲಿತರಾದ ಮಾಲಾಶ್ರೀ ಅಧ್ಯಕ್ಷ ಸ್ಥಾನಕ್ಕೆ ಹಾಗೂ ಭಾಗ್ಯಮ್ಮ ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು.

ಈ ನಡುವೆ ಇದ್ದಕ್ಕಿದ್ದಂತೆ ಕಚೇರಿ ಒಳಗೆ ಕಾಂಗ್ರೆಸ್ ಬೆಂಬಲಿತ ಸದಸ್ಯರೊಂದಿಗೆ ಅವರ ಬೆಂಬಲಿಗರು ಒಳನುಗ್ಗಿ, ನಮ್ಮ ಇಬ್ಬರು ಸದಸ್ಯರು ನಾಪತ್ತೆಯಾಗಿದ್ದಾರೆ. ಅವರನ್ನು ಅಪಹರಿಸಲಾಗಿದೆ. ಹೀಗಾಗಿ ಚುನಾವಣೆ ನಡೆಸಬಾರದು ಎಂದು ತಗಾದೆ ತೆಗೆದಿದ್ದಾರೆ ಎನ್ನಲಾಗಿದೆ. ಆಗ ಜೆಡಿಎಸ್ ಬೆಂಬಲಿಗರು ನೀವೇ ಬಚ್ಚಿಟ್ಟು ನಮ್ಮ ಮೇಲೆ ಆರೋಪ ಮಾಡುತ್ತಿದ್ದೀರಿ ಎಂದಾಗ ಕ್ಷಣಾರ್ಧದಲ್ಲಿ ಪಂಚಾಯ್ತಿ ಕಚೇರಿ ರಣರಂಗವಾಗಿ ಮಾರ್ಪಟ್ಟಿತು. ಚುನಾವಣೆ ನಡೆಯುವ ವೇಳೆ ಸದಸ್ಯರು ಮತ್ತು ಅಧಿಕಾರಿಗಳನ್ನು ಹೊರತುಪಡಿಸಿ ಬೇರೆ ಯಾರಿಗೂ ಪ್ರವೇಶಕ್ಕೆ ಅವಕಾಶವಿಲ್ಲದಿದ್ದರೂ ಈ ಕಚೇರಿ ಒಳಗೆ ಕಾಂಗ್ರೆಸ್ ಮತ್ತು ಜೆಡಿಎಸ್ ಬೆಂಬಲಿತ ಸದಸ್ಯರು ಮಾತ್ರವಲ್ಲದೇ ಇತರರು ಕೂಡ ಇದ್ದು ದಾಂಧಲೆಯಲ್ಲಿ ತೊಡಗಿದರು.

ವಾಗ್ವಾದ ತಳ್ಳಾಟ–ನೂಕಾಟ, ಕೊನೆಗೆ ಮಾರಾಮಾರಿ ನಡೆಯಿತು. ಈ ವೇಳೆ ಕೇವಲ ಓರ್ವ ಮಹಿಳಾ ಪೇದೆ ಮಾತ್ರ ಇದ್ದರೆಂದು ಹೇಳಲಾಗಿದ್ದು, ಅವರ ಮೇಲೂ ಹಲ್ಲೆ ನಡೆಸಲಾಗಿದೆ ಎಂಬುದು ಜೆಡಿಎಸ್ ಬೆಂಬಲಿತರ ಆರೋಪ. ಗ್ರಾಪಂ ಸದಸ್ಯರಲ್ಲದೇ ಇತರರು ಕೂಡ ಕಚೇರಿಯೊಳಗೆ ನುಗ್ಗಿ ಪೀಠೋಪಕರಣಗಳನ್ನು ಧ್ವಂಸ ಮಾಡಿ, ಕೆಲ ದಾಖಲಾತಿಗಳನ್ನು ಹರಿದು ಹಾಕಿದ್ದಾರೆ ಎಂದು ಜೆಡಿಎಸ್ ಬೆಂಬಲಿಗರು ಆರೋಪಿಸಿದ್ದಾರೆ. ಪರಿಸ್ಥಿತಿ ಕೈಮೀರಿದ್ದರಿಂದ ಚುನಾವಣಾಧಿಕಾರಿಗಳು ಚುನಾವಣೆಯನ್ನು ಮುಂದೂಡಿರುವುದಾಗಿ ಘೋಷಿಸಿದರು.

ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿಗೆ ಆಗಮಿಸಿದ ಜೆಡಿಎಸ್ ಬೆಂಬಲಿತ ಸದಸ್ಯರು ಈ ಸಂಬಂಧ ಜಿಲ್ಲಾಧಿಕಾರಿ ಡಾ.ಕುಮಾರ್ ಅವರಿಗೆ ಲಿಖಿತ ದೂರು ಸಲ್ಲಿಸಿದರು. ಚುನಾವಣೆ ವೇಳೆ ಹೊರಗಡೆಯಿಂದ ಬಂದ ಒಂದು ಗುಂಪು ಚುನಾವಣೆ ನಡೆಸಬಾರದು ಎಂದು ಅಧಿಕಾರಿಗಳು ಹಾಗೂ ನಮ್ಮ ಮೇಲೆ ಹಲ್ಲೆ ನಡೆಸಿದೆ. ಈ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿ ಮೂಕಪ್ರೇಕ್ಷಕರಾಗಿ ನಿಂತಿದ್ದರು. ಚುನಾವಣೆ ಭದ್ರತೆಗಾಗಿ ಕೇವಲ ಓರ್ವ ಮಹಿಳಾ ಪೊಲೀಸ್ ಅನ್ನು ಮಾತ್ರ ನಿಯೋಜನೆ ಮಾಡಲಾಗಿತ್ತು. ಕಚೇರಿಯಲ್ಲಿ ನಡೆದ ಗಲಾಟೆಯನ್ನು ಚುನಾವಣಾಧಿಕಾರಿಗಳು ವಿಡಿಯೋ ಚಿತ್ರೀಕರಣ ಮಾಡಿದ್ದು, ಅದನ್ನು ನೋಡಿದರೆ ನೈಜ ಸ್ಥಿತಿ ತಿಳಿಯುತ್ತದೆ. ಹೀಗಾಗಿ ಇದರ ಬಗ್ಗೆ ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡು ತಕ್ಷಣವೇ ಚುನಾವಣಾ ದಿನಾಂಕವನ್ನು ಘೋಷಿಸಬೇಕೆಂದು ಮನವಿ ಮಾಡಿದ್ದಾರೆ.

ಚಲುವರಾಯಸ್ವಾಮಿ ವಿರುದ್ಧ ದೂರು ಪ್ರಕರಣ: ಮಂಡ್ಯದಲ್ಲಿ ಸಿಐಡಿ ತನಿಖೆ ಆರಂಭ

ಮಂಡ್ಯ, ಆ.9– ಲಂಚಕ್ಕಾಗಿ ಸಚಿವ ಎನ್. ಚಲುವರಾಯಸ್ವಾಮಿ ಬೇಡಿಕೆ ಇಟ್ಟಿದ್ದಾರೆ ಎಂದು ಕೃಷಿ ಅಧಿಕಾರಿಗಳು ರಾಜ್ಯಪಾಲರಿಗೆ ಪತ್ರ ಬರೆದಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಬುಧವಾರ ಸಿಐಡಿ ಅಧಿಕಾರಿಗಳು ಮಂಡ್ಯ ನಗರಕ್ಕೆ ಆಗಮಿಸಿ ತನಿಖೆ ಆರಂಭಿಸಿದ್ದಾರೆ.

ಸಿಐಡಿ ಐಜಿ ಪ್ರವೀಣ್ ಮಧುಕರ್ ಪವಾರ್ ನೇತೃತ್ವದಲ್ಲಿ ತನಿಖೆ ಆರಂಭವಾಗಿದ್ದು, ಮಂಡ್ಯದ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಭೇಟಿ ನೀಡಿದ ಸಿಐಡಿ ಅಧಿಕಾರಿಗಳು ಜೆಡಿ ಕಚೇರಿಯಲ್ಲಿಯೇ ವಿಚಾರಣೆ ನಡೆಸಿದರು. ಜೆಡಿ ಅಶೋಕ್ ಅವರನ್ನು ಕೆಲವು ನಿಮಿಷಗಳ ಕಾಲ ವಿಚಾರಣೆ ನಡೆಸಿದ ಅಧಿಕಾರಿಗಳು, ಪತ್ರ ಬರೆದಿರುವ ಬಗ್ಗೆ ಹಾಗೂ ಜಿಲ್ಲೆಯಲ್ಲಿರುವ ಕೃಷಿ ಇಲಾಖೆಯ ಅಧಿಕಾರಿಗಳ ಬಗ್ಗೆ ಸಮಗ್ರ ಮಾಹಿತಿ ಪಡೆದರು. ಬಳಿಕ ಜೆಡಿ ಜೊತೆಗೆ ಸಹಾಯಕ ಕೃಷಿ ನಿರ್ದೇಶಕರಿಗೆ ಬುಲಾವ್ ನೀಡಿ ಅವರ ಜೊತೆಗೂ ಸಹ ಮಾತುಕತೆ ನಡೆಸಿದರು. ಸಿಐಡಿ ಐಜಿ ನೇತೃತ್ವದ ಐವರು ಅಧಿಕಾರಗಳ ತಂಡವು ಜಂಟಿ ಕೃಷಿ ನಿರ್ದೇಶಕರು, ಸಹಾಯಕ ಕೃಷಿ ನಿರ್ದೇಶಕರ ಬಳಿ ಹೇಳಿಕೆ ಪಡೆಯಿತು. ನಂತರ ಮೈಸೂರಿನತ್ತ ಸಿಐಡಿ ಐಜಿ ನೇತೃತ್ವದ ತಂಡ ತೆರಳಿತು. ಮೈಸೂರಿನಿಂದ ದೂರು ಪ್ರತಿ ಪೋಸ್ಟ್ ಆಗಿರುವ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಎಲ್ಲಿ ಪೋಸ್ಟ್ ಮಾಡಲಾಯಿತು. ಜೊತೆಗೆ ಯಾರು ಅದನ್ನು ಪೋಸ್ಟ್ ಮಾಡಿದರು ಎಂಬ ಬಗ್ಗೆ ಸಮಗ್ರ ಮಾಹಿತಿ ಕಲೆ ಹಾಕಲು ಸಿಐಡಿ ತಂಡ ಮೈಸೂರಿಗೆ ಪ್ರಯಾಣ ಬೆಳೆಸಿತು.

ಆ.13, ಗಾಳಿಪಟ ಉತ್ಸವ

ಮಂಡ್ಯ, ಆ.9– ಕರ್ನಾಟಕ ಜಾನಪದ ಪರಿಷತ್, ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್‌ನ ನೇತೃತ್ವದಲ್ಲಿ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆಗಳ ಸಹಯೋಗದೊಂದಿಗೆ ಆ.13 ರಂದು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಬಿ.ಜಿ.ಎಸ್ ಕ್ರೀಡಾಂಗಣದಲ್ಲಿ "33ನೇ ವರ್ಷದ ರಾಜ್ಯಮಟ್ಟದ ಗಾಳಿಪಟ ಉತ್ಸವ"ವನ್ನು ಆಯೋಜಿಸಲಾಗಿದೆ.



ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ವಿಮಲಾ, ಉಪಾಧ್ಯಕ್ಷರಾಗಿ ಅಕ್ಷತಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಜೆಡಿಎಸ್ ತಾಲೂಕು ಅಧ್ಯಕ್ಷ ಪೈ. ಮುಕುಂದ, ಮುಖಂಡರಾದ ಪಿ.ಎಸ್.ರಮೇಶ್ ಬಾಬು, ಸರಸ್ವತಿ, ಪಿ.ಡಿ. ದಾಸೆಂದ್ರ ಸುನೀಲ್, ಜಯಕುಮಾರ್, ಪ್ರಶಾಂತ್, ಪಿಡಿಓ ರವಿ ಹಾಗೂ ಚುನಾವಣಾಧಿಕಾರಿ ವೀಣಾ, ಗ್ರಾಪಂ ಸದಸ್ಯರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಚಂದಗಾಲು ಗ್ರಾಪಂ ಅಧ್ಯಕ್ಷ–ಉಪಾಧ್ಯಕ್ಷ ಚುನಾವಣೆ ದಿಢೀರ್ ಮುಂದೂಡಿಕೆ

ಡಿಸಿ ಕಚೇರಿ ಮುಂದೆ ಜೆಡಿಎಸ್, ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ



ಮಂಡ್ಯ,ಆ.9– ಚಂದಗಾಲು ಗ್ರಾಪಂ ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆಯನ್ನು ದಿಢೀರನೇ ಮುಂದೂಡಿದ ಚುನಾವಣಾಧಿಕಾರಿಯ ಕ್ರಮವನ್ನು ಖಂಡಿಸಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪಂಚಾಯತಿಯ ಜೆಡಿಎಸ್ ಮತ್ತು ಬಿಜೆಪಿ ಬೆಂಬಲಿತ ಸದಸ್ಯರು ಹಾಗೂ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಚಂದಗಾಲು ಗ್ರಾಪಂನಲ್ಲಿ ಏಕಾಏಕಿ ಚುನಾವಣೆ ಮುಂದೂಡಲಾಗಿದೆ. ಸಚಿವರು, ಶಾಸಕರ ಒತ್ತಡಕ್ಕೆ ಮಣಿದು, ಚುನಾವಣಾಧಿಕಾರಿಯಾಗಿದ್ದ ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ವೇಣು ಚುನಾವಣೆ ಮುಂದೂಡಿರುವುದು ಸಂವಿಧಾನಕ್ಕೆ ಮಾಡಿದಂತಹ ಅಪಮಾನ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಕಾನೂನುಬಾಹಿರವಾಗಿ ಚುನಾವಣೆ ಮುಂದೂಡಿರುವ ಅಧಿಕಾರಿಯನ್ನು ಸೇವೆಯಿಂದ ಅಮಾನತುಗೊಳಿಸಬೇಕು. ಒಂದೆರಡು ದಿನದಲ್ಲಿ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ನಿಗದಿ ಮಾಡಬೇಕು ಎಂದು ಒತ್ತಾಯಿಸಿದರು. ಜಿಪಂ ಮಾಜಿ ಸದಸ್ಯ ಚಂದಗಾಲು ಶಿವಣ್ಣ, ಪಂಚಾಯತಿ ಸದಸ್ಯರಾದ ಮಂಜುಳಾ, ಲಕ್ಷ್ಮಿ, ಶಾಂಭವಿ, ಇಂದ್ರಮ್ಮ,ಕೃಷ್ಣೇಗೌಡ, ಚಿಕ್ಕಬೋರಯ್ಯ ಇತರರಿದ್ದರು.

ಚುನಾವಣೆ ಮುಂದೂಡಿಕೆ: ಚಂದಗಾಲು ಗ್ರಾಪಂ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಬುಧವಾರ ಚುನಾವಣೆ ನಿಗದಿಯಾಗಿತ್ತು. ಈ ನಿಟ್ಟಿನಲ್ಲಿ ಕಳೆದ ಏಳು ದಿನಗಳ ಹಿಂದೆಯೇ ಚುನಾವಣೆ ಕುರಿತಂತೆ ಸದಸ್ಯರಿಗೆ ನೋಟೀಸ್ ಸಹ ಕಳುಹಿಸಲಾಗಿತ್ತು.

ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ವೇಣು ಇಂದು ಬೆಳಗ್ಗೆ ಕಚೇರಿಗೆ ಆಗಮಿಸಿ, ಚುನಾವಣೆ ಪ್ರಕ್ರಿಯೆ ಆರಂಭಿಸಿದರು. ಆದರೆ ಮಧ್ಯಾಹ್ನ 12ಗಂಟೆ ವೇಳೆಗೆ ಚುನಾವಣೆಯನ್ನು ಕೋರಂ ಅಭಾವದಿಂದ ಮುಂದೂಡಿದ್ದು, ಮತ್ತೊಂದು ದಿನಾಂಕವನ್ನು ಘೋಷಣೆ ಮಾಡುವುದಾಗಿ ಹೇಳಿದರು.

ಮಣಿಪುರ ಮೂಲಕ ನೀವು ಭಾರತವನ್ನು ಕೊಂದಿದ್ದೀರಿ

ನೀವು ದೇಶಭಕ್ತರಲ್ಲ, ದೇಶದ್ರೋಹಿ: ಲೋಕಸಭೆಯಲ್ಲಿ ರಾಹುಲ್ ಗಾಂಧಿ ವಾಗ್ದಾಳಿ



ನವದೆಹಲಿ, ಆ.9– ನೀವು ಮಣಿಪುರದಲ್ಲಿ ಭಾರತಮಾತೆಯನ್ನು ಕೊಂದಿದ್ದೀರಿ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಇಂದು ಸಂಸತ್‌ನಲ್ಲಿ ವಾಗ್ದಾಳಿ ನಡೆಸಿದರು.

ಕೆಲವು ದಿನಗಳ ಹಿಂದೆ, ನಾನು ಮಣಿಪುರಕ್ಕೆ ಹೋಗಿದ್ದೆ, ನಮ್ಮ ಪ್ರಧಾನಿ ಇಂದಿಗೂ ಹೋಗಿಲ್ಲ, ಏಕೆಂದರೆ ಅವರಿಗೆ ಮಣಿಪುರ ಭಾರತವಲ್ಲ, ನಾನು ಮಣಿಪುರ ಎಂಬ ಪದವನ್ನು ಬಳಸಿದ್ದೇನೆ ಆದರೆ ಮಣಿಪುರ ಇನ್ನು ಉಳಿಯುವುದಿಲ್ಲ ಎನ್ನುವುದು ಸತ್ಯ, ನೀವು ಮಣಿಪುರವನ್ನು ಎರಡು ಭಾಗ ಮಾಡಿದ್ದೀರಿ, ನೀವು ಮಣಿಪುರವನ್ನು ವಿಭಜಿಸಿದ್ದೀರಿ, ನೀವು ಮಣಿಪುರದಲ್ಲಿ ಭಾರತ ಮಾತೆಯನ್ನು ಕೊಂದಿದ್ದೀರಿ ಎಂದು ಪ್ರಧಾನಿ ಮೋದಿಯನ್ನು ರಾಹುಲ್ ಗಾಂಧಿ ಟೀಕಿಸಿದರು. ಅವರು ಕೇವಲ ಮಣಿಪುರವಲ್ಲ ಭಾರತವನ್ನು ಕೊಂದರು ಎಂದು ರಾಹುಲ್‌ಗಾಂಧಿ ಹೇಳಿದರು.

ನೀವು ದೇಶದ್ರೋಹಿ, ದೇಶಪ್ರೇಮಿಯಲ್ಲ: ಭಾರತ ಒಂದು ಧ್ವನಿ, ಭಾರತ ನಮ್ಮ ಜನರ ಧ್ವನಿ, ಇದು ಹೃದಯದ ಧ್ವನಿ. ಮಣಿಪುರದಲ್ಲಿ ನೀವು ಆ ಧ್ವನಿಯನ್ನು ಕೊಂದಿದ್ದೀರಿ. ನೀವು ಮಣಿಪುರದಲ್ಲಿ ಭಾರತ ಮಾತೆಯನ್ನು ಕೊಂದಿದ್ದೀರಿ ಎಂದರ್ಥ. ನೀವು ಮಣಿಪುರದ ಜನರನ್ನು ಕೊಂದು ಭಾರತವನ್ನು ಕೊಂದಿದ್ದೀರಿ. ನೀವು ದೇಶದ್ರೋಹಿ, ದೇಶಭಕ್ತನಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ಬಾರಿ ನಾನು ಲೋಕಸಭೆ ಅಧಿವೇಶನದಲ್ಲಿ ಮಾತನಾಡಿದ್ದಾಗ ನನ್ನ ಮಾತುಗಳನ್ನು ಅದಾನಿ ಮೇಲೆ ಕೇಂದ್ರೀಕರಿಸಿದ್ದೆ. ಇದರಿಂದ ನಿಮ್ಮ ಹಿರಿಯ ನಾಯಕನಿಗೆ ನೋವಾಗಿರಬಹುದು. ಆ ನೋವು ನಿಮ್ಮ ಮೇಲೆ ಕೂಡ ಪರಿಣಾಮ ಬೀರಿರಬಹುದು ಎಂದು ಭಾವಿಸುತ್ತೇನೆ. ಅದಕ್ಕೆ ನಿಮ್ಮ ಬಳಿ ಇಂದು ಕ್ಷಮೆ ಕೋರುತ್ತೇನೆ. ಆದರೆ ಅಂದು ನಾನು ಆಡಿರುವ ಮಾತು ಸತ್ಯ. ಇವತ್ತು ಬಿಜೆಪಿಯಲ್ಲಿರುವ ನನ್ನ ಸ್ನೇಹಿತರು ಭಯಪಡಬೇಕಾಗಿಲ್ಲ, ಏಕೆಂದರೆ ನನ್ನ ಇಂದಿನ ಭಾಷಣವನ್ನು ಅದಾನಿ ಮೇಲೆ ಕೇಂದ್ರೀಕರಿಸಿಲ್ಲ. ಹೀಗೆ ಹೇಳುತ್ತಲೇ ಪ್ರಧಾನಿ ಮೋದಿ ಮತ್ತು ಬಿಜೆಪಿ ನಾಯಕರ ವಿರುದ್ಧ ವ್ಯಂಗ್ಯವಾದ ಮಾತುಗಳೊಂದಿಗೆ ಲೋಕಸಭೆಯಲ್ಲಿ ತಮ್ಮ ಮಾತುಗಳನ್ನು ಆರಂಭಿಸಿದರು.

ಪ್ರಧಾನಿ ಮೋದಿ ವಿರುದ್ಧ ಇತ್ತೀಚೆಗೆ ರಚನೆಯಾದ INDIA ಮೈತ್ರಿಕೂಟ ಅವಿಶ್ವಾಸ ನಿರ್ಣಯ ಮಂಡಿಸಿ ಅದರ ಮೇಲೆ ನಿನ್ನೆ ಮತ್ತು ಇಂದು ಲೋಕಸಭೆಯಲ್ಲಿ ಚರ್ಚೆ ನಡೆಯುತ್ತಿದೆ. ಅವಿಶ್ವಾಸ ಗೊತ್ತುವಳಿ ಮೇಲಿನ ಚರ್ಚೆಯಲ್ಲಿ ಇಂದು ಮಾತನಾಡಿದ ರಾಹುಲ್ ಗಾಂಧಿ, ಮೊದಲಿಗೆ ನನ್ನನ್ನು ಮತ್ತೆ ಸಂಸತ್ ಸದಸ್ಯ ಸ್ಥಾನ ನೀಡಿದ್ದಕ್ಕೆ ಧನ್ಯವಾದಗಳು ಎಂದರು. ಸರ್ಕಾರದ ಮೇಲೆ ವಾಗ್ದಾಳಿ ನಡೆಸಿಕೊಂಡು ಮಾತು ಆರಂಭಿಸುವ ಬದಲು ಮಣಿಪುರ ಹಿಂಸಾಚಾರದ ವಿಷಯವನ್ನು ಬಿಂಬಿಸುವ ಬದಲು, ಇತ್ತೀಚೆಗೆ ಮುಕ್ತಾಯಗೊಂಡ ಭಾರತ್ ಜೋಡೋ ಯಾತ್ರಾ ಎಂಬ ದೇಶಾದ್ಯಂತದ ಮೆರವಣಿಗೆ ಬಗ್ಗೆ ಮಾತನಾಡಿದರು.

ಭಾರತ್ ಜೋಡೋ ಯಾತ್ರೆ: ಕಳೆದ 10 ವರ್ಷಗಳಿಂದ ಪ್ರತಿದಿನ ನನ್ನ ಮೇಲೆ ಏಕೆ ನಿಂದನೆ ಮಾಡುತ್ತಿದ್ದರು ಎಂದು ನಾನು ಅರ್ಥಮಾಡಿಕೊಳ್ಳಬೇಕಾಗಿತ್ತು ನಾನು ಭಾರತ್ ಜೋಡೋ ಯಾತ್ರೆಯನ್ನು ಪ್ರಾರಂಭಿಸಿದಾಗ, ಅದನ್ನು ಏಕೆ ಮಾಡುತ್ತಿದ್ದೇನೆ ಎಂದು ತಿಳಿದಿರಲಿಲ್ಲ, ಜನರು ನನ್ನನ್ನು ಕೇಳಿದರು – ನೀವು ಯಾಕೆ ಈ ಯಾತ್ರೆಗೆ ಹೋಗುತ್ತಿದ್ದೀರಿ, ಎಂದಾಗ ಅವರಿಗೆ ಏನು ಹೇಳಬೇಕೆಂದು ನನಗೆ ನಿಜವಾಗಿಯೂ ತಿಳಿದಿರಲಿಲ್ಲ. ದಿನಗಳೆದಂತೆ ಉದ್ದೇಶ ಅರ್ಥವಾಗುತ್ತಾ ಹೋಯಿತು.

ಯಾತ್ರೆ ಆರಂಭಿಸಿದ ಎರಡು ದಿನಗಳ ನಂತರ ನನ್ನ ಮೊಣಕಾಲು ನೋವು ಪ್ರಾರಂಭವಾಯಿತು, ಬೆಳಗ್ಗೆ ಎದ್ದರೆ ಕಾಲು ನೋವು ಬರುತ್ತಿತ್ತು. ಆದರೆ ಅದೆಲ್ಲಿಂದ ಶಕ್ತಿ ಬರುತ್ತಿತ್ತೋ ಗೊತ್ತಿಲ್ಲ. ಬೆಳಗಿನ ಜಾವ ಸರಿದಂತೆ ಕಾಲು ನೋವು ಮಾಯವಾಗಿ ಯಾತ್ರೆಯಲ್ಲಿ ಹೆಜ್ಜೆ ಹಾಕುತ್ತಿದ್ದೆ.

ಒಂದು ದಿನ, ಒಬ್ಬ ಹುಡುಗಿ ಚೀಟಿ ಹಿಡಿದುಕೊಂಡು ನನ್ನ ಬಳಿಗೆ ಬಂದಳು, ಅದರಲ್ಲಿ 'ರಾಹುಲ್, ನಾನು ನಿಮ್ಮೊಂದಿಗೆ ನಡೆಯುತ್ತಿದ್ದೇನೆ' ಎಂದು ಬರೆದಿದ್ದಳು, ನೋಡಿದರೆ ಅವಳ ಕಾಲಿಗೆ ಗಾಯವಾಗಿತ್ತು. ಅಂತವರ ಮಾತುಗಳು ನನ್ನ ನೋವನ್ನು ಮರೆಸುತ್ತಿದ್ದವು.

ನಮ್ಮ ಸಂದೇಶವನ್ನು ಜನಸಾಮಾನ್ಯರಿಗೆ ತಲುಪಿಸುವ ಉದ್ದೇಶದಿಂದ ಪ್ರಯಾಣ ಪ್ರಾರಂಭಿಸಿದೆವು. ಆರಂಭ ದಿನಗಳಲ್ಲಿ ಸ್ಥಳಗಳಲ್ಲಿ ಸೇರಿ ಭಾಷಣ ಮಾಡುತ್ತಿದ್ದೆವು. ಯುವಕರು, ರೈತರು, ವಿದ್ಯಾರ್ಥಿಗಳು ಸೇರುತ್ತಿದ್ದರು. ದಿನಕಳೆದಂತೆ ಯಾತ್ರೆಯ ಉದ್ದೇಶ ಅರ್ಥವಾಗುತ್ತಾ ಹೋಯಿತು.

ಒಂದು ದಿನ, ಒಬ್ಬ ರೈತ ಬಂದು ನನಗೆ ಒಂದು ಸಣ್ಣ ಹತ್ತಿ ಕಟ್ಟು ಕೊಟ್ಟು ಹೇಳಿದನು: ನನ್ನ ಬೆಳೆಯಲ್ಲಿ ಉಳಿದಿರುವುದು ಇಷ್ಟೇ ... ನಾನು ಅವನ ಹೃದಯದ ದುಃಖವನ್ನು ನನ್ನ ಹೃದಯದಲ್ಲಿ, ಅವನ ಕಣ್ಣುಗಳಲ್ಲಿ ಅವಮಾನವನ್ನು ನನ್ನಲ್ಲಿ ಅನುಭವಿಸಿದೆ. ಅವನ ಕಣ್ಣುಗಳಲ್ಲಿ ಹಸಿವು ಎದ್ದುಕಾಣುತ್ತಿತ್ತು.

ಯಾತ್ರೆ ಆರಂಭಿಸಿದ ಕೆಲವೇ ದಿನಗಳಲ್ಲಿ ತೋಳನಾಗಿದ್ದವನು ಇರುವೆಯಾದೆ. ಸಾಕಷ್ಟು ವಿಷಯಗಳು ಕಣ್ಣು ತೆರೆಸಿತು ಎಂಬರ್ಥದಲ್ಲಿ ಮಾತನಾಡಿರುವ ರಾಹುಲ್ ಗಾಂಧಿ, ಅಹಂಕಾರದಿಂದ ಭಾರತವನ್ನು ನೋಡಲು ಹೊರಬಂದವನು, ಯಾತ್ರೆ ಮುಗಿಯುವ ಹೊತ್ತಿಗೆ ಅಹಂಕಾರ ಕಣ್ಮರೆಯಾಯಿತು ಎಂದರು.

ರಾಹುಲ್ ಗಾಂಧಿ 'ಫ್ಲೈಯಿಂಗ್ ಕಿಸ್'ಗೆ ಸ್ಮೃತಿ ಇರಾನಿ ಆಕ್ಷೇಪ



ನವದೆಹಲಿ, ಆ.9– ಲೋಕಸಭೆಯಲ್ಲಿ ಕಾಂಗ್ರೆಸ್ ರಾಹುಲ್ ಗಾಂಧಿ ಅವರ 'ಫ್ಲೈಯಿಂಗ್ ಕಿಸ್'ಗೆ ಕೇಂದ್ರ ಸಚಿವೆ ಹಾಗೂ ಬಿಜೆಪಿ ಸಂಸದೆ ಸ್ಮೃತಿ ಇರಾನಿ ಅವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಇಂತಹ ಅಸಭ್ಯತೆಯನ್ನು ಸಂಸತ್ತು ಹಿಂದೆಂದೂ ಕಂಡಿರಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅವಿಶ್ವಾಸ ನಿರ್ಣಯದ ಕುರಿತು ರಾಹುಲ್ ಗಾಂಧಿ ಭಾಷಣ ಮುಕ್ತಾಯಗೊಳಿಸಿದ ನಂತರ ಮಾತನಾಡಿದ ಸ್ಮೃತಿ ಇರಾನಿ ಅವರು, ಕೆಲವರ ವರ್ತನೆಯನ್ನು ನಾನು ಆಕ್ಷೇಪಿಸುತ್ತೇನೆ. ನನಗಿಂತ ಮುಂಚೆ ಮಾತನಾಡಿದ ವ್ಯಕ್ತಿ, ಹೊರಡುವ ಮುನ್ನ ಅಸಭ್ಯತೆಯನ್ನು ಪ್ರದರ್ಶಿಸಿದರು. ಸ್ತ್ರೀದ್ವೇಷಿ ಪುರುಷನೊಬ್ಬನಿಂದ ಮಾತ್ರ ಮಹಿಳೆಯರು ಹಾಜರಿರುವ ಸದನಕ್ಕೆ ಫ್ಲೈಯಿಂಗ್ ಕಿಸ್ ಮಾಡಲು ಸಾಧ್ಯ ಎಂದು ಸ್ಮೃತಿ ಇರಾನಿ ಹೇಳಿದ್ದಾರೆ.

ಲೋಕಸಭೆಯಲ್ಲಿ ಮಹಿಳಾ ಸಂಸದೆಯೊಬ್ಬರ ಕಡೆಗೆ ನೋಡುತ್ತಾ 'ಫ್ಲೈಯಿಂಗ್ ಕಿಸ್' ಮಾಡುವ ಈ ವರ್ತನೆಗೆ ಏನು ಹೇಳಬೇಕು ಎಂದು ಸ್ಮೃತಿ ಇರಾನಿ ಅವರು ಪ್ರಶ್ನಿಸಿದರು. ಅವರ ಈ ವರ್ತನೆಯನ್ನು ಗಮನಿಸಿದರೆ ಅವರು ಯಾವ ವಂಶದಿಂದ ಬಂದವರು ಅನ್ನೋದು ಗೊತ್ತಾಗುತ್ತದೆ. ಅವರ ಕುಟುಂಬ ಹಾಗೂ ಅವರ ಪಕ್ಷ ಮಹಿಳೆಯರನ್ನು ಯಾವ ರೀತಿ ನೋಡುತ್ತದೆ ಅನ್ನೋದು ರಾಹುಲ್ ಗಾಂಧಿ ಅವರ ವರ್ತನೆಯಿಂದಲೇ ಸಾಬೀತಾಗುತ್ತದೆ ಎಂದು ಸ್ಮೃತಿ ಇರಾನಿ ವಾಗ್ದಾಳಿ ನಡೆಸಿದರು.

ಇನ್ನು, ಮಣಿಪುರ ವಿಚಾರಕ್ಕೆ ಸಂಬಂಧಿಸಿದಂತೆ ಮಣಿಪುರದಲ್ಲಿ ಭಾರತ ಮಾತೆಯ ಕೊಲೆಯಾಗಿದೆ ಎಂಬ ರಾಹುಲ್ ಗಾಂಧಿ ಹೇಳಿಕೆಯನ್ನು ನಾನು ಖಂಡಿಸುತ್ತೇನೆ ಎಂದ ಸ್ಮೃತಿ ಇರಾನಿ, ಸಂಸತ್ತಿನಲ್ಲಿ ಭಾರತ ಮಾತೆಯ ಹತ್ಯೆ ಯಾಗಿದೆ ಎಂದು ಸಂಸದರೊಬ್ಬರು ಮಾತನಾಡಿದ್ದು ಇದೇ ಮೊದಲು. ಈ ರೀತಿಯ ಹೇಳಿಕೆ ನೀಡುವಾಗ ಕಾಂಗ್ರೆಸ್ ಸದಸ್ಯರು ಮೇಜು ಕುಟ್ಟುತ್ತಿದ್ದರು ಎಂದು ಸ್ಮೃತಿ ಇರಾನಿ ಕಿಡಿ ಕಾರಿದರು.

ರಾಹುಲ್ ಗಾಂಧಿ ಅವರ ಭಾಷಣದ ಬಳಿಕ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರ ಭಾಷಣ ನಿಗದಿಯಾಗಿತ್ತು. ತಮ್ಮ ಭಾಷಣ ಮುಗಿಸಿ ಲೋಕಸಭೆಯಿಂದ ಹೊರ ನಡೆಯುವ ಮುನ್ನ ರಾಹುಲ್ ಗಾಂಧಿ ಅವರು ಸ್ಮೃತಿ ಇರಾನಿ ಅವರ ಕಡೆಗೆ ನೋಡುತ್ತಾ 'ಫ್ಲೈಯಿಂಗ್ ಕಿಸ್' ಕೊಟ್ಟರು ಎನ್ನಲಾಗಿದೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಬುಧವಾರ	113.26 ಅಡಿ
ಒಳಹರಿವು	5024 ಕ್ಯುಸೆಕ್
ಹೊರಹರಿವು	5352 ಕ್ಯುಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಮಂಗಳವಾರ	2282.17 ಅಡಿ
ಒಳ ಹರಿವು	4250 ಕ್ಯುಸೆಕ್
ಹೊರ ಹರಿವು	5857 ಕ್ಯುಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಬುಧವಾರ	2858.71 ಅಡಿ
ಒಳ ಹರಿವು	2617 ಕ್ಯುಸೆಕ್
ಹೊರ ಹರಿವು	1412 ಕ್ಯುಸೆಕ್

ಕೇರಳ ಇನ್ನು 'ಕೇರಳಂ': ವಿಧಾನಸಭೆ ನಿರ್ಣಯ

ತಿರುವನಂತಪುರಂ, ಆ.9– ರಾಜ್ಯದ ಹೆಸರನ್ನು ಅಧಿಕೃತವಾಗಿ 'ಕೇರಳಂ' ಎಂದು ಬದಲಾಯಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಕೇರಳ ವಿಧಾನಸಭೆ ಬುಧವಾರ ಸರ್ವಾನುಮತದಿಂದ ನಿರ್ಣಯ ಅಂಗೀಕರಿಸಿದೆ.

ನಿರ್ಣಯವನ್ನು ಮಂಡಿಸಿದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಸಂವಿಧಾನದ ಎಂಟನೇ ಅನುಸೂಚಿಯಲ್ಲಿ ಸೇರಿಸಲಾದ ಎಲ್ಲಾ ಭಾಷೆಗಳಲ್ಲೂ ರಾಜ್ಯದ ಹೆಸರನ್ನು 'ಕೇರಳಂ' ಎಂದು ಬದಲಾಯಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ರಾಜ್ಯವನ್ನು ಮಲಯಾಳಂನಲ್ಲಿ 'ಕೇರಳಂ' ಎಂದು ಕರೆಯುತ್ತಾರೆ. ಆದರೆ ಇತರ ಭಾಷೆಗಳಲ್ಲಿ ಅದು ಇನ್ನೂ ಕೇರಳ ಎಂದು ಇದೆ ಎಂದು ಪಿಣರಾಯಿ ಹೇಳಿದರು. ಸಂವಿಧಾನದ ಮೊದಲ ಶೆಡ್ಯೂಲ್‌ನಲ್ಲಿ ರಾಜ್ಯದ ಹೆಸರನ್ನು 'ಕೇರಳ' ಎಂದು ಪಟ್ಟಿ ಮಾಡಲಾಗಿದೆ.

ಈ ಸದನವು ಸಂವಿಧಾನದ 3ನೇ ಪರಿಚ್ಛೇದದ ಅಡಿಯಲ್ಲಿ 'ಕೇರಳಂ' ಎಂದು ತಿದ್ದುಪಡಿ ಮಾಡಲು ಮತ್ತು ಸಂವಿಧಾನದ ಎಂಟನೇ ಅನುಸೂಚಿಯಲ್ಲಿ ಉಲ್ಲೇಖಿಸಲಾದ ಎಲ್ಲಾ ಭಾಷೆಗಳಲ್ಲಿ 'ಕೇರಳಂ' ಎಂದು ಮರುನಾಮಕರಣ ಮಾಡಲು ತಕ್ಷಣದ ಕ್ರಮಗಳನ್ನು ತೆಗೆದುಕೊಳ್ಳುವಂತೆ ಕೇಂದ್ರ ಸರ್ಕಾರವನ್ನು ಸರ್ವಾನುಮತದಿಂದ ವಿನಂತಿಸುತ್ತದೆ ಎಂದು ವಿಜಯನ್ ಹೇಳಿದರು. ಸ್ಪೀಕರ್ ಎಎನ್ ಶಂಸೀರ್ ಅವರು, ಸದಸ್ಯರು ಕೈ ಎತ್ತುವ ಮೂಲಕ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿದ್ದಾರೆ ಎಂದು ಘೋಷಿಸಿದರು.

ಅರ್ಜಿ ಆಹ್ವಾನ

ಮಂಡ್ಯ, ಆ.9– ಆಯುಷ್ಮಾನ್ ಭಾರತ್ ಯೋಜನೆಯಡಿ ಅಭಿವೃದ್ಧಿಪಡಿಸಲಾದ ಜಿಲ್ಲೆಯ ಆಯುಷ್ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಲ್ಲಿ ಅರೆಕಾಲಿಕ ಆಧಾರದ ಮೇಲೆ (ಪಾರ್ಟ್ ಟೈಮ್) ಯೋಗ ತರಬೇತಿದಾರರು 1&2 ಸೇವೆಗಳನ್ನು 11 ತಿಂಗಳ ಕಾಲಾವಧಿಗೆ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಅರ್ಜಿಯನ್ನು ಆ.25ರವರೆಗೆ ಜಿಲ್ಲಾ ಆಯುಷ್ ಕಛೇರಿಯಲ್ಲಿ ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಆ.25ರೊಳಗೆ ಸಲ್ಲಿಸಲು ಪ್ರಕಟಣೆ ತಿಳಿಸಿದೆ.

ಮೂರನೇ ಪುಟದಿಂದ

ಸಹಕಾರ ಕೃಷಿ ಪದ್ಧತಿ ಜಾರಿ

ಅದರಲ್ಲೂ ದೀನ ದಲಿತರಿಗೆ ಎಸ್‌ಸಿಎಪಿ/ಟಿಎಸ್ಪಿ ಯೋಜನೆಯಡಿ ಪ್ರತ್ಯೇಕ ಸೌಲಭ್ಯ ಕಲ್ಪಿಸಲು ನಿರ್ಧರಿಸಲಾಗಿದೆ. ಉದ್ಯೋಗ ಅರಸಿ ನಗರಕ್ಕೆ ವಲಸೆ ಬರುವುದನ್ನು ತಪ್ಪಿಸಿ ಸ್ಥಳೀಯವಾಗಿ ಉದ್ಯೋಗ ಕಲ್ಪಿಸುವುದು. ಜತೆಗೆ ಆಹಾರ ಉತ್ಪಾದನೆಯನ್ನು ದ್ವಿಗುಣಗೊಳಿಸಲಾಗುವುದು ಎಂದರು. ಈ ಕೃಷಿ ಪದ್ಧತಿ ಅಳವಡಿಸುವ ಸಂಘಗಳಲ್ಲಿ ಎಲ್ಲಾ ರೀತಿಯ ಸೌಲಭ್ಯ ನೀಡುವುದಲ್ಲದೆ, ಸಾಲ ಮತ್ತು ಸಹಾಯಧನವನ್ನು ವಿವಿಧ ಮೂಲಗಳಿಂದ ಕಲ್ಪಿಸಲಾಗುವುದು ಎಂದು ಹೇಳಿದರು. ಇಂತಹ ಸಹಕಾರ ಕೃಷಿ ಸಮೂಹಗಳನ್ನು ಯಾರು ಬೇಕಾದರೂ ರಚಿಸಿಕೊಳ್ಳಬಹುದು. ಪ್ರತಿ ಹಳ್ಳಿಯಲ್ಲಿ ನಿರ್ದಿಷ್ಟ ಪ್ರಮಾಣದ ಜನ ಒಗ್ಗೂಡಿ ಇಂತಹ ಗುಂಪುಗಳನ್ನು ರಚಿಸಿಕೊಂಡರೆ ಲಭ್ಯವಾಗುವ ಭೂಮಿಯ ಪ್ರಮಾಣವೂ ಹೆಚ್ಚಿರುತ್ತದೆ. ಕೃಷಿ ಕೆಲಸವೂ ಸುಲಭವಾಗುತ್ತದೆ.

ರಾಜ್ಯದಲ್ಲಿ ಸಣ್ಣ ಹಿಡುವಳಿದಾರರ ಪ್ರಮಾಣ ಹೆಚ್ಚಿದ್ದು ಲಭ್ಯವಿರುವ ಭೂಮಿಯಲ್ಲಿ ನಿರೀಕ್ಷಿತ ಮಟ್ಟದ ಕೃಷಿ ಮಾಡಲು ಜನರಿಗೆ ಸಾಧ್ಯವಾಗುತ್ತಿಲ್ಲ. ಹಲವರು ಒಗ್ಗೂಡಿ ಕೃಷಿ ಸಹಕಾರ ಗುಂಪುಗಳನ್ನು ರಚಿಸಿಕೊಂಡರೆ ಕೃಷಿಗೆ ಬಲ ಬರುತ್ತದೆ.ಆ ಮೂಲಕ ಅವರ ಆರ್ಥಿಕ ಶಕ್ತಿಯೂ ಹೆಚ್ಚುತ್ತದೆ. ಹಲವರು ಒಗ್ಗೂಡಿ ಕೃಷಿ ಕೆಲಸಕ್ಕೆ ತೊಡಗುವುದರಿಂದ ಗ್ರಾಮೀಣ ಭಾಗದಲ್ಲಿ ಉದ್ಯೋಗಾವಕಾಶಗಳೂ ಹೆಚ್ಚುತ್ತವೆ. ರಚನೆಯಾಗುವ ಕೃಷಿ ಗುಂಪುಗಳಿಗೆ ರಾಜ್ಯ ಮತ್ತು ಕೇಂದ್ರ ಸರಕಾರದ ವಿವಿಧ ಯೋಜನೆಗಳಡಿ ನೆರವು ನೀಡಲಾಗುವುದು ಎಂದರು. ಸಹಕಾರ ಪದ್ಧತಿಯಡಿ ಕೃಷಿ ಮಾಡಲು ಇಂತಹ ಗುಂಪುಗಳನ್ನು ರಚಿಸಿಕೊಳ್ಳುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗೆ ಎಸ್‌ಸಿಎಸ್‌ಟಿ–ಟಿಎಸ್‌ಪಿ ಅಡಿ ಮೀಸಲಾಗಿಟ್ಟಿರುವ ಹಣದಿಂದ ನೆರವು ನೀಡಲಾಗುವುದು. ಉಳಿದವರಿಗೆ ಸರ್ಕಾರದ ವಿವಿಧ ಇಲಾಖೆಗಳ ಮೂಲಕ ನೆರವು ನೀಡಲಾಗುವುದು ಎಂದು ಇದೇ ಸಂದರ್ಭದಲ್ಲಿ ಅವರು ವಿವರಿಸಿದರು.

ಕೇಂದ್ರ ಸರ್ಕಾರದ ಮಾರ್ಗಸೂಚಿಯ ಪ್ರಕಾರ 1.67 ಎಕರೆ ಭೂಮಿ ಇದ್ದರೆ ಐದು ಮಂದಿಯ ಕುಟುಂಬ ಜೀವನ ನಿರ್ವಹಣೆ ಮಾಡಬಹುದು. ಸ್ವಂತ ಭೂಮಿ ಇರುವವರು ಒಗ್ಗೂಡಿ ಗುಂಪುಗಳನ್ನು ರಚಿಸುವುದು ಒಂದು ಭಾಗವಾದರೆ, ಸ್ವಂತ ಭೂಮಿ ಇಲ್ಲದವರಿಗೆ ಸರ್ಕಾರವೇ ಭೂಮಿ ಒದಗಿಸಿ ಸಹಕಾರಿ ಪದ್ಧತಿಯಡಿ ಕೃಷಿ ಮಾಡಲು ಅನುಕೂಲ ಮಾಡಿಕೊಡಲಿದೆ ಎಂದರು. ನಕಲಿ ಜಾತಿ ಪ್ರಮಾಣ ಪತ್ರ ಸೇರಿದಂತೆ ಹಲವು ವಿಷಯಗಳ ಕುರಿತು ದೂರುಗಳನ್ನು ಸ್ವೀಕರಿಸಿ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ಕ್ರಮ ಕೈಗೊಳ್ಳುತ್ತದೆ. ದೂರುಗಳ ಆಧಾರದ ಮೇಲೆ ಕರ್ನಾಟಕದಲ್ಲಿ ಶೇಕಡಾ ಎರಡರಷ್ಟು ಮಂದಿಗೆ ಮಾತ್ರ ಶಿಕ್ಷೆಯಾಗುತ್ತಿದೆ.

ಉತ್ತರ ಪ್ರದೇಶ, ಬಿಹಾರದಂತಹ ರಾಜ್ಯಗಳಲ್ಲಿ ಶಿಕ್ಷೆಯ ಪ್ರಮಾಣ ಶೇಕಡಾ ಅರವತ್ತರಷ್ಟಿದೆ ಎಂದ ಅವರು, ಕರ್ನಾಟಕದಲ್ಲಿ ಇದು ಸಾಧ್ಯವಾಗದಿರುವುದಕ್ಕೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ಬಲಗುಂದಿರುವುದೇ ಕಾರಣ. ಸದರಿ ನಿರ್ದೇಶನಾಲಯಕ್ಕೆ ಅಗತ್ಯದ ಸಿಬ್ಬಂದಿಗಳು ಸೇರಿದಂತೆ ಹಲವು ಅನುಕೂಲಗಳನ್ನು ಒದಗಿಸಿ ಬಲಿಷ್ಠಗೊಳಿಸುವುದು ಸರ್ಕಾರದ ಯೋಚನೆ ಎಂದು ಅವರು ಸಂದರ್ಭದಲ್ಲಿ ಹೇಳಿದರು.

ನಿಮಗೆ ಜಾತಿ, ಧರ್ಮದ ಗೊಡವೆ ಬೇಡ...

ಜಾತ್ಯಾತೀತ ಹಾಗೂ ಸಮಾನ ಸಮಾಜವನ್ನು ನಿರ್ಮಿಸಬಹುದಾಗಿದೆ. ಸರ್ಕಾರದ ನಿರೀಕ್ಷೆಗೆ ತಕ್ಕಂತೆ ಕಾರ್ಯನಿರ್ವಹಿಸುವ ಶಪಥವನ್ನು ಅಧಿಕಾರಿಗಳು ಕೈಗೊಳ್ಳಬೇಕು ಎಂದು ಕರೆ ನೀಡಿದರು. ಸಂವಿಧಾನವನ್ನು ರಕ್ಷಿಸಿದರೆ, ಸಂವಿಧಾನ ದೇಶವನ್ನು ರಕ್ಷಿಸುತ್ತದೆ. ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಒಬ್ಬ ವ್ಯಕ್ತಿ ಒಬ್ಬ ಮತ ಎಂದಿದೆ ಆದರೆ ಆರ್ಥಿಕವಾಗಿ, ಸಾಮಾಜಿಕವಾಗಿ ಈ ಸಮಾನತೆ ಇಲ್ಲ.

ಹೀಗೆ ಮುಂದುವರೆದರೆ, ಅಸಮಾನತೆಗೆ ಒಳಗಾದ ಜನರು ಸ್ವಾತಂತ್ರ್ಯ ಸೌಧವನ್ನು ಧ್ವಂಸಗೊಳಿಸುವ ಸಾಧ್ಯತೆ ಇದೆ ಎಂದು ಅಂಬೇಡ್ಕರ್ ಅವರು ಹೇಳಿದ್ದಾರೆ.

ಇದು ಎಲ್ಲಾ ನಾಗರಿಕರ ಕರ್ತವ್ಯ. ಇದನ್ನು ಅರ್ಥಮಾಡಿಕೊಳ್ಳುವ ಮೂಲಕ ಸಮಾಜದಲ್ಲಿ ಸುಧಾರಣೆ ತರಬಹುದಾಗಿದೆ. ಈಗ ಶಿಕ್ಷಣ ಅಭಿವೃದ್ಧಿಗೊಳ್ಳುತ್ತಿದೆ. ನಮ್ಮ ಸರ್ಕಾರ ಐದು ಗ್ಯಾರಂಟಿಗಳ ಜಾರಿಗೊಳಿಸುವ ಭರವಸೆಯನ್ನು ನೀಡಿದೆ. ಈಗಾಗಲೇ 3 ಗ್ಯಾರಂಟಿ ಜಾರಿಯಾಗಿವೆ. ಆಗಸ್ಟ್ 24 ರಂದು 4 ನೇ ಗ್ಯಾರಂಟಿ ಹಾಗೂ 5ನೇ ಗ್ಯಾರಂಟಿ ಡಿಸೆಂಬರ್ ಅಥವಾ ಜನವರಿ 2024 ರಲ್ಲಿ ಜಾರಿಯಾಗುವ ಸಾಧ್ಯತೆ ಇದೆ. ಗ್ಯಾರಂಟಿ ಯೋಜನೆಗಳ ಯಶಸ್ಸು ಅಧಿಕಾರಿಗಳ ಮೇಲೆ ಅವಲಂಬಿತವಾಗಿದೆ. ಸ್ವಾತಂತ್ರ್ಯ ಭಾರತದ ಫಲವನ್ನು ಜನರಿಗೆ ತಲುಪಿಸುವ ಮೂಲಕ ಸಾಮಾಜಿಕ ಸುಧಾರಣೆಯನ್ನು ತರಬಹುದಾಗಿದೆ ಎಂದರು. ಇದೇ ದಿನ ಮಹಾತ್ಮ ಗಾಂಧಿಯವರು ಬ್ರಿಟಿಷರಿಗೆ ಅಂತಿಮ ಕರೆ ನೀಡಿದ ಕ್ವಿಟ್ ಇಂಡಿಯಾ ದಿನವನ್ನು ಇಂದು ಆಚರಣೆ ಮಾಡಲಾಗುತ್ತಿದೆ. ಪ್ರತಿಯೊಬ್ಬರೂ ಸಮಾಜಕ್ಕೆ ತಮ್ಮನ್ನು ತಾವು ಅರ್ಪಿಸಿಕೊಳ್ಳಬೇಕೆಂದು ಸಂಕಲ್ಪ ಮಾಡಬೇಕಾದ ದಿನ. ಅಧಿಕಾರಿಗಳಾಗಲೀ, ಜನರಾಗಲೀ, ಸಮಾಜ ನನಗೇನು ಮಾಡಿತು ಎನ್ನುವ ಬದಲು ಸಮಾಜಕ್ಕೆ ನನ್ನ ಕೊಡುಗೆ ಏನು ಎಂಬುದನ್ನು ಅರಿತುಕೊಳ್ಳಬೇಕು. ಸಮಾಜವನ್ನು ಬದಲಾವಣೆ, ಸುಧಾರಣೆ, ಸಮಾನತೆಯ ಸಮಾಜ ನಿರ್ಮಾಣದ ಜವಾಬ್ದಾರಿ ನಮ್ಮ ಮೇಲಿದೆ. ಇದೇ ತತ್ವವನ್ನು ಬಸವ, ಬುದ್ಧ, ಗಾಂಧೀಜಿ, ಅಂಬೇಡ್ಕರ್, ಕುವೆಂಪು, ನಾರಾಯಣಗುರು ಸೇರಿದಂತೆ ಹಲವು ದಾರ್ಶನಿಕರು ಬೋಧಿಸಿದ್ದಾರೆ ಎಂದರು.

ಮೈಸೂರು ಮಿತ್ರ ಗುರುವಾರ 10 ಆಗಸ್ಟ್ 2023

ವಿದ್ಯುತ್ ಬಿಲ್ ಪಾವತಿಸುವಂತೆ ಮೆಸೇಜ್ ಕಳಿಸಿ ವ್ಯಕ್ತಿಯ ಖಾತೆಗೆ ಕನ್ನ; 5.48 ಲಕ್ಷ ರೂ. ವರ್ಗಾವಣೆ

ಕ್ರೈಂ ಬಾಕ್ಸ್

ಮೈಸೂರು, ಆ.9–ವಿದ್ಯುತ್ ಬಿಲ್ ಪಾವತಿಸುವಂತೆ ಮೆಸೇಜ್ ಕಳುಹಿಸಿ ವ್ಯಕ್ತಿಯೊಬ್ಬರ ಖಾತೆಯಿಂದ 5.48 ಲಕ್ಷ ರೂ.ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಳ್ಳಲಾಗಿದೆ.

ಯಾದವಗಿರಿಯ 2ನೇ ಮುಖ್ಯರಸ್ತೆಯಲ್ಲಿರುವ ಮಾನಸ ಮಯೂರ ಅಪಾರ್ಟ್‌ಮೆಂಟ್ ನಿವಾಸಿ ಕಣ್ಣನ್(52) ವಂಚನೆಗೊಳಗಾದವರಾಗಿದ್ದು, ವಿದ್ಯುತ್ ಬಿಲ್ ಪೆಂಡಿಂಗ್ ಇರುವುದಾಗಿಯೂ ತಕ್ಷಣ ಕಟ್ಟದಿದ್ದರೆ ಡಿಸ್‌ಕನೆಕ್ಟ್ ಮಾಡುವುದಾಗಿಯೂ ಇವರ ಮೊಬೈಲ್‌ಗೆ 9173 439164 ಸಂಖ್ಯೆಯಿಂದ ಮೆಸೇಜ್ ಬಂದಿದೆ ಮೆಸೇಜ್‌ನಲ್ಲಿದ್ದ 7667807512 ಸಂಖ್ಯೆಯನ್ನು ಕಣ್ಣನ್ ಅವರು ಸಂಪರ್ಕಿಸಿದಾಗ ವಿದ್ಯುತ್ ಬಿಲ್ ಕಟ್ಟಲು ಅವರ ವಾಟ್ಸಾಪ್‌ಗೆ ಒಂದು ಲಿಂಕ್ ಅನ್ನು ಕಳುಹಿಸಲಾಗಿದೆ ನಂತರ ಸಂಪೂರ್ಣ ಮಾಹಿತಿ ಪಡೆದು ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ 5,48,149 ರೂ.ಗಳನ್ನು ವರ್ಗಾವಣೆ ಮಾಡಿಕೊಳ್ಳಲಾಗಿದೆ.

ನಂದಿನಿ ಲೇಔಟ್‌ನ ಬ್ಯಾಂಕ್ ಉದ್ಯೋಗಿ ಎಂ.ವರುಣ್(35) ಎಂಬುವರನ್ನು ವಾಟ್ಸಾಪ್ ಮೂಲಕ 7605848116 ಸಂಖ್ಯೆಯಿಂದ ನಿಧಿಷಾ ಶೆಟ್ಟಿ ಎಂಬ ಹೆಸರಿನಲ್ಲಿ ಸಂಪರ್ಕಿಸಿದ ವಂಚಕಿ, ತಾನು ಮೀಡಿಯಾ ಗ್ರೂಪ್ ಕಂಪನಿ ಹೆಚ್.ಆರ್. ಎಂದು ಪರಿಚಯಿಸಿಕೊಂಡು ದಿನಕ್ಕೆ 1ರಿಂದ 2 ಗಂಟೆ ಕಾಲ ಯೂ-ಟ್ಯೂಬ್ ಚಾನಲ್ ಸಬ್‌ಸ್ಕ್ರೈಬ್ ಮಾಡಿದರೆ ದಿನಕ್ಕೆ 1500ರಿಂದ 5,000 ರೂ. ಗಳಿಸಬಹುದು ಎಂದು ತಿಳಿಸಿದ್ದಾಳೆ. ನಂತರ ಅವರಿಂದ 2.66 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವರುಣ್ ಅವರು ತಮ್ಮ ಹಣ ವಾಪಸ್ ಕೇಳಿದಾಗ ಮತ್ತೆ 1.50 ಲಕ್ಷ ರೂ. ವರ್ಗಾವಣೆ ಮಾಡಿದರೆ ಮಾತ್ರ ಹಣ ವಾಪಸ್ ನೀಡುವುದಾಗಿ ತಿಳಿಸುವ ಮೂಲಕ ವಂಚಿಸಲಾಗಿದೆ.

ಗೋಕುಲಂ 3ನೇ ಹಂತದ 2ನೇ ಅಡ್ಡ ರಸ್ತೆಯಲ್ಲಿರುವ ಪ್ರಥಮ ಛಾಯಾ ಅಪಾರ್ಟ್‌ಮೆಂಟ್ ನಿವಾಸಿ ಎಸ್.ಅಭಿದನ್ ಪಾಲ್(22) ಎಂಬುವರ ವಾಟ್ಸಾಪ್‌ಗೆ ಪಾರ್ಟ್‌ಟೈಮ್ ಜಾಬ್ ಬಗ್ಗೆ ಸಂದೇಶ ಬಂದಿದ್ದು, ನಂತರ ಅವರಿಗೆ ಟೆಲಿಗ್ರಾಂ ಲಿಂಕ್‌ವೊಂದನ್ನು ರವಾನಿಸಲಾಗಿದೆ. ಲಿಂಕ್ ಕ್ಲಿಕ್ ಮಾಡಿದಾಗ 1.96 ಲಕ್ಷ ರೂ.ಗಳನ್ನು ಇನ್ವೆಸ್ಟ್ ಮಾಡಿಸಿಕೊಂಡು ವಂಚಿಸಲಾಗಿದೆ. ಈ ಎಲ್ಲಾ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ

ಆಭರಣ ಕೊಳ್ಳುವ ಸೋಗಿನಲ್ಲಿ ಸರ ಕದ್ದು ಪರಾರಿಯಾದ ಖದೀಮ

ಮೈಸೂರು, ಆ.9–ಆಭರಣ ಖರೀದಿಸುವ ನೆಪದಲ್ಲಿ ಚಿನ್ನದ ಅಂಗಡಿಗೆ ಬಂದ ಖದೀಮ 40 ಗ್ರಾಂ ತೂಕದ ಎರಡು ಚಿನ್ನದ ಸರಗಳನ್ನು ಕದ್ದು, ಓಡಿ ಹೋದ ಘಟನೆ ಮೈಸೂರಿನ ಅಶೋಕ ರಸ್ತೆಯಲ್ಲಿ ನಡೆದಿದೆ.

ಇಲ್ಲಿನ ಶ್ರೀಹರಿ ಜ್ಯೂವೆಲರ್ಸ್‌ಗೆ ಆ.7 ರಂದು ಸಂಜೆ 7.15ರ ವೇಳೆಯಲ್ಲಿ ವ್ಯಕ್ತಿಯೋರ್ವ ಬಂದು ತನ್ನ ಮೊಬೈಲ್‌ನಲ್ಲಿ ಕೆಲವು ಉಂಗುರ ಹಾಗೂ ಚೈನ್‌ಗಳ ಫೋಟೋಗಳನ್ನು ತೋರಿಸಿ ಇಂತಹ ಡಿಸೈನ್ ಇರುವ ಆಭರಣ ತೋರಿಸುವಂತೆ ಕೇಳಿದ್ದಾನೆ ಆಗ ಅಂಗಡಿ ಮಾಲೀಕ ಅನಿಲ್‌ಕುಮಾರ್ ಜೈನ್ ಮತ್ತು ನೌಕರ ರಮೇಶ್ ಅವರು ಆತನಿಗೆ ಚಿನ್ನದ ಸರ ಮತ್ತು ಉಂಗುರಗಳನ್ನು ತೋರಿಸಿದಾಗ ಅದರಲ್ಲಿ ಸರ ಮತ್ತು ಉಂಗುರ ಆಯ್ಕೆ ಮಾಡಿ ಅದಕ್ಕೆ ಬೆಲೆ ಎಷ್ಟು ಎಂದು ಕೇಳಿದ ನಂತರ ಹಣ ತರುವುದಾಗಿ ಹೊರಟು ಹೋಗಿದ್ದಾನೆ. ಮತ್ತೆ ಸಂಜೆ 7.40ರ ಸುಮಾರಿನಲ್ಲಿ ಅಂಗಡಿಯಲ್ಲಿ ಮಾಲೀಕ ಅನಿಲ್‌ಕುಮಾರ್ ಜೈನ್ ಇದ್ದ ವೇಳೆ ಆಗಮಿಸಿದ ಅದೇ ವ್ಯಕ್ತಿ, ಮೊದಲಿಗೆ ಚಿನ್ನದ ಸರ ತೋರಿಸುವಂತೆ ಕೇಳಿದ್ದಾನೆ. ಜೈನ್ ಚಿನ್ನದ ಸರಗಳಿರುವ ಟ್ರೇಯನ್ನು ಟೇಬಲ್ ಮೇಲೆ ಇಟ್ಟು ತೋರಿಸುತ್ತಿದ್ದಾಗ ಅದರಲ್ಲಿದ್ದ 40 ಗ್ರಾಂ ತೂಕದ 2 ಸರಗಳನ್ನು ಆತ ಕೈನಲ್ಲಿ ಹಿಡಿದುಕೊಂಡು ಉಂಗುರಗಳನ್ನು ತೋರಿಸುವಂತೆ ಹೇಳಿದ್ದಾನೆ. ಆಗ ಉಂಗುರಗಳಿರುವ ಟ್ರೇ ತೆಗೆಯಲು ಜೈನ್ ಅವರು ತಿರುಗಿದ್ದು, ಅದೇ ವೇಳೆ ಅವರಿಗೆ ಫೋನ್ ಕರೆ ಬಂದಿದೆ. ಅವರು ಕರೆ ಸ್ವೀಕರಿಸಿ ಮಾತನಾಡುತ್ತಿದ್ದ ವೇಳೆ ಖದೀಮ ತಾನು ಕೈಯ್ಯಲ್ಲಿ ಹಿಡಿದಿದ್ದ ಚಿನ್ನದ ಸರಗಳೊಂದಿಗೆ ಓಡಿ ಹೋಗಿದ್ದಾನೆ. ಈ ಸಂಬಂಧ ಲಷ್ಕರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಓರ್ವನ ಬಂಧನ; 9.350 ಕೆಜಿ ಗಾಂಜಾ ವಶ

ಮೈಸೂರು,ಆ.9–ದೇವರಾಜ ಠಾಣೆ ಪೊಲೀಸರು 4.50 ರೂ. ಮೌಲ್ಯದ 9.350 ಕೆ.ಜಿ. ಗಾಂಜಾ ವಶಪಡಿಸಿಕೊಂಡು ಓರ್ವನನ್ನು ಬಂಧಿಸಿದ್ದಾರೆ.

ರಾಜೀವ್‌ನಗರ ನಿವಾಸಿ ಸಯ್ಯದ್ ಜುಬೇರ್(21) ಬಂಧಿತನಾಗಿದ್ದು, ದೇವರಾಜ ಠಾಣೆ ಇನ್ಸ್‌ಪೆಕ್ಟರ್ ಟಿ.ಬಿ. ಶಿವಕುಮಾರ್ ಅವರಿಗೆ ಆ.7ರಂದು ಮಧ್ಯಾಹ್ನ ದೊರೆತ ಖಚಿತ ಮಾಹಿತಿ ಮೇರೆಗೆ ಅವರು ಕೆಆರ್‌ಎಸ್ ರಸ್ತೆಯ ರೈಲ್ವೆ ಬ್ರಿಡ್ಜ್ ಬಳಿ ಟಿವಿಎಸ್ ಸ್ಕೂಟಿ (ಕೆಎ 10 ಜೆ 7973)ಯಲ್ಲಿ ಬಂದ ಇಬ್ಬರನ್ನು ತಡೆದು ನಿಲ್ಲಿಸಿದಾಗ ಅವರು ಸ್ಕೂಟರ್ ಅಲ್ಲೇ ಬಿಟ್ಟು ಓಡಿದ್ದಾರೆ. ಅವರಲ್ಲಿ ಪೊಲೀಸ್ ಸಿಬ್ಬಂದಿ, ಸಯ್ಯದ್ ಜುಬೇರ್ ಎಂಬಾತನನ್ನು ಹಿಡಿದುಕೊಂಡು, ಆತನ ಬಳಿ ಇದ್ದ ಕ್ಯಾರಿಬ್ಯಾಗ್ ಪರಿಶೀಲಿಸಿದಾಗ 9.350 ಕೆ.ಜಿ. ಗಾಂಜಾ ಪತ್ತೆಯಾಗಿದೆ. ಓಡಿ ಹೋದವನನ್ನು ಬಡೇಮಕಾನ್ ನಿವಾಸಿ ಆಸಿಫ್ ಎಂದು ಗುರುತಿಸಲಾಗಿದೆ. ಈ ಸಂಬಂಧ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತೆಲಂಗಾಣ ಪ್ರವಾಸಿ ಮಹಿಳೆ ಸರ ಕಳವು




ಮೈಸೂರು, ಆ.9–ತೆಲಂಗಾಣದಿಂದ ಕುಟುಂಬದೊಂದಿಗೆ ಮೈಸೂರಿಗೆ ಪ್ರವಾಸ ಬಂದಿದ್ದ ಗೃಹಿಣಿಯೋರ್ವರ ಚಿನ್ನದ ಸರವನ್ನು ಜಗನ್ಮೋಹನ ಪ್ಯಾಲೇಸ್‌ನಲ್ಲಿ ಕಳವು ಮಾಡಲಾಗಿದೆ. ತೆಲಂಗಾಣದ ಮಹಬೂದ್‌ಬಾದ್‌ನ ಶ್ರೀಲತಾ (33) ಸರ ಕಳೆದುಕೊಂಡವರಾಗಿದ್ದು, ಇವರು ಪತಿ ಶ್ರೀಶೈಲಂ, ಪುತ್ರ ಗಣೇಶ್ ಬಂಡರೂಪ, ಸಂಬಂಧಿಕರಾದ ಕಲಾವತಿ ಎಂಬುವರೊಂದಿಗೆ ಮೈಸೂರು ಪ್ರವಾಸಕ್ಕಾಗಿ ಬಂದಿದ್ದಾರೆ. ಆ.8ರಂದು ಬೆಳಗ್ಗೆ ಚಾಮುಂಡಿಬೆಟ್ಟಕ್ಕೆ ಹೋಗಿದ್ದು, ಮಧ್ಯಾಹ್ನ 2.30ರ ಸುಮಾರಿನಲ್ಲಿ ಜಗನ್ಮೋಹನ ಪ್ಯಾಲೇಸ್‌ಗೆ ಹೋದಾಗ ನೂಕು-ನುಗ್ಗಲಿನಲ್ಲಿ ಇವರ ಹ್ಯಾಂಡ್‌ಬ್ಯಾಗ್‌ನಲ್ಲಿದ್ದ 13 ಗ್ರಾಂ ತೂಕದ ಚಿನ್ನದ ಸರವನ್ನು ಕಳವು ಮಾಡಲಾಗಿದೆ. ಈ ಸಂಬಂಧ ದೇವರಾಜ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಬೈಕ್‌ಗೆ ಲಾರಿ ಡಿಕ್ಕಿ: ಸವಾರ ಸಾವು

ಕೆಆರ್.ಪೇಟೆ,ಆ.9–ಲಾರಿ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸಾವನ್ನಪ್ಪಿದ ಘಟನೆ ಕೆ.ಆರ್.ಪೇಟೆಯ ಟಿ.ಬಿ. ಸರ್ಕಲ್‌ನಲ್ಲಿ ಸಂಭವಿಸಿದೆ.

ಕೆ.ಆರ್.ಪೇಟೆ ತಾಲೂಕು ಲಕ್ಷ್ಮೀಪುರ ಗ್ರಾಮದ ರೈತ ರಾಮಕೃಷ್ಣೇಗೌಡ ಅಲಿಯಾಸ್ ರಾಮಕೃಷ್ಣ(58) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಆ.8ರಂದು ಬೆಳಗ್ಗೆ 11.15ರ ಸಮಯದಲ್ಲಿ ಕೆ.ಆರ್.ಪೇಟೆಯ ಟಿ.ಬಿ.ಸರ್ಕಲ್ ಬಳಿ ಪ್ಯಾಷನ್ ಪ್ರೋ ಬೈಕ್‌ನಲ್ಲಿ (ಕೆಎ 54 ಕೆ 0017) ತೆರಳುತ್ತಿದ್ದಾಗ ಅತೀ ವೇಗವಾಗಿ ಮೈಸೂರು ಕಡೆಯಿಂದ ಬಂದ ಲಾರಿ (ಕೆಎ 23 ಟಿಆರ್ 5007) ಇವರ ಬೈಕ್‌ಗೆ ಡಿಕ್ಕಿ ಹೊಡೆದು ಅವರ ಹೊಟ್ಟೆಯ ಮೇಲೆ ಹರಿದಿದೆ. ಇದರ ಪರಿಣಾಮ ರಾಮಕೃಷ್ಣೇಗೌಡ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಕೆ.ಆರ್.ಪೇಟೆ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ಬೀಗ ಮುರಿದು ಚಿನ್ನಾಭರಣ ಕಳವು



ಮೈಸೂರು, ಆ. 9(ಆರ್‌ಕೆ)– ಮನೆ ಬೀಗ ಮುರಿದು ಚಿನ್ನಾಭರಣ, ಬೆಳ್ಳಿ ಪದಾರ್ಥ ಹಾಗೂ ಎಟಿಎಂ ಕಾರ್ಡ್ ಕಳವು ಮಾಡಿರುವ ಘಟನೆ ಮೈಸೂರಿನ ಹಳೇ ಕೆಸರೆಯ ಶಿಕ್ಷಕರ ಬಡಾವಣೆಯಲ್ಲಿ ಸಂಭವಿಸಿದೆ.

ಟೀಚರ್ಸ್ ಲೇಔಟ್ ಬಿ ಬ್ಲಾಕ್ ನಿವಾಸಿಯಾದ ನಿವೃತ್ತ ಶಿಕ್ಷಕಿ ಬಿ.ಪ್ರೇಮಾವತಿ ಎಂಬುವರ ಮನೆಯಲ್ಲಿ ಖದೀಮರು ಕೈಚಳಕ ತೋರಿದ್ದಾರೆ. ಕಳೆದ ಬುಧವಾರ ಬೆಳಗ್ಗೆ ಮನೆಗೆ ಬೀಗ ಹಾಕಿಕೊಂಡು ತಮಿಳುನಾಡಿನ ಶ್ರೀರಂಗಂ ಕ್ಷೇತ್ರಕ್ಕೆ ತೆರಳಿದ್ದ ಅವರು, ಶನಿವಾರ ಬೆಳಗ್ಗೆ ವಾಪಸ್ಸಾದರು. ಆ ವೇಳೆ ಮನೆಯ ಮುಂದಿನ ಬಾಗಿಲಿನ ಬೀಗ ಮುರಿದಿರುವುದು ತಿಳಿಯಿತು. ಒಳಗೆ ಹೋಗಿ ನೋಡಿದಾಗ ಕೊಠಡಿಯಲ್ಲಿ ಬಟ್ಟೆಗಳನ್ನೆಲ್ಲಾ ಚೆಲ್ಲಾಪಿಲ್ಲಿ ಮಾಡಿ, ಅಲ್ಮೇರಾ, ಬೀರುವಿನ ಬೀಗ ಮುರಿದು 1 ನೆಕ್ಲೇಸ್, 1 ಜೊತೆ ಓಲೆ, 1 ಡಾಲರ್, 1 ಚೈನ್ ಸೇರಿ 33 ಗ್ರಾಂ ಚಿನ್ನಾಭರಣ, 200 ಗ್ರಾಂ ಬೆಳ್ಳಿ ಪದಾರ್ಥ ಹಾಗೂ ಬ್ಯಾಂಕ್ ಎಟಿಎಂ ಕಾರ್ಡ್ ಅನ್ನು ಕಳವು ಮಾಡಿರುವುದು ತಿಳಿಯಿತು.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಎನ್.ಆರ್. ಠಾಣೆ ಪೊಲೀಸರು ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಂಡೀಪುರಕ್ಕೆ ಮತ್ತೊಂದು ಮುಕುಟ: ಹುಲಿ ಆಯ್ತು ಈಗ ಗಜ ಗಣತಿಯಲ್ಲೂ ನಂ.1

- ರಾಜ್ಯಮಟ್ಟದ ಆನೆ ಗಣತಿ ವರದಿ ಪ್ರಕಟ; ರಾಜ್ಯದಲ್ಲಿ 6395 ಆನೆಗಳು ಪತ್ತೆ
- ಬಂಡೀಪುರದಲ್ಲಿ ಸರಾಸರಿ 1116 ಆನೆ ಇರುವಿಕೆ ಖಚಿತ ಪಡಿಸಿದ ವರದಿ
- ನಾಗರಹೊಳೆಯಲ್ಲಿ 831, ಮಹದೇಶ್ವರ ಬೆಟ್ಟ ವನ್ಯಧಾಮದಲ್ಲಿ 706,
- ಬಿಳಿಗಿರಿ ರಂಗನಾಥ ಹುಲಿ ಸಂರಕ್ಷಿತ ಪ್ರದೇಶದಲ್ಲಿ 619,
- ಭದ್ರಾ ಅರಣ್ಯದಲ್ಲಿ 445 ಆನೆಗಳು

■ ಎಂ.ಟಿ.ಯೋಗೇಶ್‌ಕುಮಾರ್



/ಚಿತ್ರ: ಲಕ್ಷ್ಮಿನಾರಾಯಣ ಯಾದವ್

ಮೈಸೂರು, ಆ.9–ವನ್ಯಜೀವಿ ಸಂರಕ್ಷಣೆಯಲ್ಲಿ ದೇಶದ ಎರಡನೇ ಹುಲಿ ಸಂರಕ್ಷಿತ ಪ್ರದೇಶ ಎಂಬ ಕೀರ್ತಿಗೆ ಪಾತ್ರವಾಗಿದ್ದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಮತ್ತೊಂದು ಹಿರಿಮೆ ಪ್ರಾಪ್ತಿಯಾಗಿದೆ. ಹುಲಿಗಳ ಸಂಖ್ಯೆಯಲ್ಲಿ ನಂಬರ್ ಒನ್ ಸ್ಥಾನ ಪಡೆದಿದ್ದ ಬಂಡೀಪುರ ಈಗ ರಾಜ್ಯದಲ್ಲಿ ಅತಿ ಹೆಚ್ಚು ಆನೆ ಹೊಂದಿರುವ ಅರಣ್ಯ ಎಂಬ ಕೀರ್ತಿಗೆ ಪಾತ್ರವಾಗಿದೆ.

ವಿಶ್ವ ಆನೆ ದಿನ (ಆ.12) ಆಚರಣೆಗೆ ಮೂರು ದಿನವಿರುವಾಗಲೇ ರಾಜ್ಯ ಮಟ್ಟದ ಆನೆ ಗಣತಿ ವರದಿ ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ ರಾಜ್ಯದ ಎಲ್ಲಾ ಅರಣ್ಯಗಳಿಗಿಂತ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಅಗ್ರಸ್ಥಾನ ಕಾಪಾಡಿಕೊಂಡಿದೆ.

ರಾಜ್ಯದಲ್ಲಿ 2023ರ ಮೇ 17ರಿಂದ 19ರವರೆಗೆ 23 ವಿಭಾಗದಲ್ಲಿ ನಡೆದ ಆನೆ ಗಣತಿಯಲ್ಲಿ 5914ರಿಂದ 6877 ಆನೆಗಳು ಕಂಡುಬಂದಿದ್ದು, ಅದರಲ್ಲಿ ರಾಜ್ಯದ ಆನೆಗಳ ಸಂಖ್ಯೆಯಲ್ಲಿ 6,395 ಎಂದು ಗುರುತಿಸಲಾಗಿದೆ. ರಾಜ್ಯದ 5 ಹುಲಿ ಸಂರಕ್ಷಿತ ಪ್ರದೇಶ, ವನ್ಯಧಾಮ ಸೇರಿದಂತೆ 23 ವಲಯಗಳಲ್ಲಿ ನಡೆಸಿದ ಗಣತಿಯಲ್ಲಿ ಮೊದಲ ನಾಲ್ಕು ಸ್ಥಾನಗಳು ಮೈಸೂರು-ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿರುವ ಮೂರು ಹುಲಿ ಸಂರಕ್ಷಿತ ಪ್ರದೇಶ ಹಾಗೂ ಒಂದು ವನ್ಯಧಾಮ ತನ್ನದಾಗಿಸಿಕೊಂಡಿದೆ.


ಭಾರತೀಯ ವಿಜ್ಞಾನ ಸಂಸ್ಥೆ(ಐಐಎಸ್‌ಸಿ) ತಾಂತ್ರಿಕ ನೆರವಿನೊಂದಿಗೆ ಅರಣ್ಯ ಇಲಾಖೆ ಮೂರು ವಿಧಾನದಲ್ಲಿ ಗಜಗಣತಿ ನಡೆಸಿತು. ಮೇ 17ರಂದು 5.0 ಚ.ಕಿ.ಮೀ ವ್ಯಾಪ್ತಿಯ ಬ್ಲಾಕ್‌ಗಳಲ್ಲಿ ಹಾಗೂ ಬೀಟ್ ಸಂಖ್ಯೆಯಲ್ಲಿ ಶೇ.30ರಿಂದ 50ರಷ್ಟು ಪ್ರದೇಶದಲ್ಲಿ ನೇರ ಎಣಿಕೆ ಕಾರ್ಯ ನಡೆಸಲಾಗಿತ್ತು. ಮೇ 18 ರಂದು 2 ಕಿ.ಮೀ ಉದ್ದದ ಟ್ರಾನ್ಸೆಕ್ಟ್ ರೇಖೆಗಳಲ್ಲಿ ಸಮೀಕ್ಷೆ ನಡೆಸಿ, ಲದ್ದಿ ಸಮೀಕ್ಷೆ ನಡೆಸಲಾಗಿತ್ತು. ಮೇ 19ರಂದು ಕೆರೆ, ಕಟ್ಟೆ (ವಾಟರ್ ಹೋಲ್) ಬಳಿ ಸಮೀಕ್ಷೆ ನಡೆಸಿ, ಆನೆಗಳ ಗಣತಿ, ಅವುಗಳ ಚಲನ ವಲನ, ಲಿಂಗದ ಬಗ್ಗೆ ಮಾಹಿತಿ ಕಲೆ ಹಾಕಲಾಗಿತ್ತು. ಗಣತಿ ವೇಳೆ ಒಟ್ಟು ಗುರುತಿಸಲ್ಪಟ್ಟ 32 ವಿಭಾಗದಲ್ಲಿ ಆನೆ ಗಣತಿ ನಡೆಸಲಾಗಿತ್ತಾದರೂ, 23 ವಿಭಾಗದಲ್ಲಿ ಮಾತ್ರ ಆನೆಗಳ ಇರುವಿಕೆ ದೃಢಪಟ್ಟಿತ್ತು. ಈ 23 ವಿಭಾಗದಲ್ಲಿ 18,975 ಚದರ ಕಿ.ಮೀ ವ್ಯಾಪ್ತಿಯ ಅರಣ್ಯ ಪ್ರದೇಶವಿದ್ದು, ಅವುಗಳಲ್ಲಿ 6,104 ಚದರ ಕಿ.ಮೀ ವ್ಯಾಪ್ತಿಯಲ್ಲಿ ಮಾತ್ರ ಸಮೀಕ್ಷೆ ನಡೆಸಲಾಗಿತ್ತು. ತರಬೇತಿ ಪಡೆದ ಅರಣ್ಯ ಸಿಬ್ಬಂದಿ ನಡೆಸಿದ ಈ ಆನೆ ಗಣತಿಯಲ್ಲಿ ನೇರ ಸಮೀಕ್ಷೆಯಲ್ಲಿ 2219 ಆನೆಗಳು ಗೋಚರಿಸಿದ್ದವು. ಅಂತಿಮವಾಗಿ ಮೂರು ಹಂತದ ಗಣತಿಯಲ್ಲಿ ರಾಜ್ಯದಲ್ಲಿ 5914 ರಿಂದ 6877 ಆನೆಗಳಿರಬಹುದು ಎಂದು ಅಂದಾಜಿಸಲಾಗಿತ್ತು. ಈ ಅಂಕಿ ಅಂಶವನ್ನು ಪರಿಶೀಲಿಸಿದ ತಜ್ಞರು 0.34 ಸಾಂದ್ರತೆಯಂತೆ ರಾಜ್ಯದಲ್ಲಿ ಸರಾಸರಿ 6395 ಆನೆಗಳಿವೆ ಎಂದು ಘೋಷಿಸಿದ್ದಾರೆ.

ಎಲ್ಲೆಲ್ಲಿ, ಎಷ್ಟು ಆನೆಗಳು: ಬಿಡುಗಡೆಯಾಗಿರುವ ರಾಜ್ಯಮಟ್ಟದ ಆನೆ ಗಣತಿ ವರದಿಯಲ್ಲಿ ಬಂಡೀಪುರದಲ್ಲಿ 1116 (943–1289) ಆನೆ, ನಾಗರಹೊಳೆಯಲ್ಲಿ 831 (701–961), ಮಲೆ ಮಹದೇಶ್ವರ ಬೆಟ್ಟ ವನ್ಯಧಾಮದಲ್ಲಿ 706 (557–854), ಬಿಳಿಗಿರಿರಂಗನಾಥ ಹುಲಿ ಸಂರಕ್ಷಿತ ಪ್ರದೇಶದಲ್ಲಿ 619(484–759), ಭದ್ರಾ ಹುಲಿ ಸಂರಕ್ಷಿತ ಪ್ರದೇಶದಲ್ಲಿ 445 (328–563), ಕಾವೇರಿ ವನ್ಯಧಾಮದಲ್ಲಿ 236 (192–280), ಮಡಿಕೇರಿ ಪ್ರಾದೇಶಿಕ ವಿಭಾಗದಲ್ಲಿ 214 (154–274), ಬನ್ನೇರುಘಟ್ಟ ಪ್ರದೇಶದಲ್ಲಿ 127(79–174), ಶಿವಮೊಗ್ಗ ವನ್ಯಜೀವಿ ವಿಭಾಗದಲ್ಲಿ 127(72–181), ಮಡಿಕೇರಿ ವನ್ಯಜೀವಿ ವಿಭಾಗದಲ್ಲಿ 113(77–150), ಹಾಸನ ವಿಭಾಗದಲ್ಲಿ 66 (46–86), ವಿರಾಜಪೇಟೆ ವಿಭಾಗದಲ್ಲಿ 58 (36–80), ರಾಮನಗರ ವಿಭಾಗದಲ್ಲಿ 33 (20–46), ಮೈಸೂರು ಪ್ರಾದೇಶಿಕ ವಿಭಾಗದಲ್ಲಿ 59 (14–103), ಕೊಪ್ಪ ವಿಭಾಗದಲ್ಲಿ 128 (85–172), ಕಾಳಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ 38 (26–49), ಮಂಗಳೂರು ವಿಭಾಗದಲ್ಲಿ 47 (35–60), ಚಿಕ್ಕಮಗಳೂರು ವಿಭಾಗದಲ್ಲಿ 33 (23–43), ಕುದುರೆಮುಖ ವಿಭಾಗದಲ್ಲಿ 5 (3–7), ಹಳಿಯಾಲ ವಿಭಾಗದಲ್ಲಿ 3(2–4), ಯಲ್ಲಾಪುರ ವಿಭಾಗದಲ್ಲಿ 2 (1–3) ಹಾಗೂ ಭದ್ರಾವತಿ ವಿಭಾಗದಲ್ಲಿ 8 (6–11) ಆನೆಗಳ ಇರುವಿಕೆಯು ಗಣತಿ ವೇಳೆ ದೃಢಪಟ್ಟಿದೆ.

ಕರುನಾಡು ಆನೆಗಳ ಬೀಡು: ಸಂಪದ್ಭರಿತ ಅರಣ್ಯ ಹೊಂದಿರುವ ಕರ್ನಾಟಕದಲ್ಲಿ ಆನೆಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡು ಬಂದಿದೆ. ಕಾಡಂಚಿನ ಗ್ರಾಮ ಸೇರಿದಂತೆ ವಿವಿಧೆಡೆ ವಿದ್ಯುತ್ ಸ್ಪರ್ಶಕ್ಕೆ ಒಳಗಾಗಿ ಆನೆಗಳ ಸಾವಿನ ಸರಣಿಯ ನಡುವೆಯೂ ಆನೆಗಳ ಸಂಖ್ಯೆ ಹೆಚ್ಚಾಗುತ್ತಿದೆ. 2010ರಲ್ಲಿ ನಡೆದ ಗಣತಿಯಲ್ಲಿ ಕರ್ನಾಟಕದಲ್ಲಿ 5740 ಆನೆ, 2012ರ ಗಣತಿಯಲ್ಲಿ 6072, 2017ರ ಗಣತಿಯಲ್ಲಿ 6049 ಆನೆಗಳು ಕಂಡು ಬಂದಿದ್ದವು. ಈ ಸಾಲಿನ ಗಣತಿಯಲ್ಲಿ 6395 ಆನೆಗಳು ಕಂಡು ಬಂದಿವೆ.

ಬಂಡೀಪುರ ಹುಲಿಯೊಂದಿಗೆ ಆನೆಗಳ ನೆಲೆ ಬೀಡಾಗಿದೆ

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಹಲವು ಹಿರಿಮೆ ಪ್ರಾಪ್ತಿಯಾಗಿದ್ದು, ಈ ಎಲ್ಲವೂ ನಮ್ಮ ಸಿಬ್ಬಂದಿಗಳು ಹಾಗೂ ಅರಣ್ಯದಂಚಿನ ಗ್ರಾಮದ ಜನರ ಸಹಕಾರದಿಂದ ಸಾಧ್ಯವಾಗಿದೆ. ಹುಲಿಗಳ ಸಂಖ್ಯೆಯಲ್ಲಿ ದೇಶದಲ್ಲಿ ಎರಡನೇ ಹುಲಿ ಸಂರಕ್ಷಿತ ಪ್ರದೇಶ ಎಂಬ ಹೆಗ್ಗಳಿಕೆ ಹಾಗೂ ನಿರ್ವಹಣೆಯಲ್ಲೂ ಎರಡನೇ ಸ್ಥಾನ ಬಂದಿತ್ತು. ಈಗ ಆನೆಗಳ ಸಂಖ್ಯೆಯಲ್ಲಿ ರಾಜ್ಯದಲ್ಲೇ ಮೊದಲ ಸ್ಥಾನ ಪಡೆದಿದೆ.



ಅರಣ್ಯ ಸಂಪತ್ತಿನ ಸುರಕ್ಷಣೆಗೆ ಕೈಗೊಂಡ ಕ್ರಮದಿಂದಾಗಿ ಹುಲಿ, ಆನೆಗಳ ಸಂಖ್ಯೆ ಹೆಚ್ಚಳಕ್ಕೆ ಕಾರಣವಾಗಿದೆ.

–ಡಾ.ಪಿ.ರಮೇಶ್‌ಕುಮಾರ್, ನಿರ್ದೇಶಕ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

ಗುಣಾತ್ಮಕ ಫಲಿತಾಂಶ ಬರುವಲ್ಲಿ ಶಿಕ್ಷಕರ ಪಾತ್ರ ಬಹು ಮುಖ್ಯ: ಶಾಸಕ ಜಿಟಿಡಿ



ಹೂಟಗಳ್ಳಿ ಸರ್ಕಾರಿ ಪ್ರೌಢಶಾಲೆಯ ಸಭಾಂಗಣದಲ್ಲಿ ನಡೆದ ಕನ್ನಡ ಭಾಷಾ ಶಿಕ್ಷಕರ ಕಾರ್ಯಾಗಾರವನ್ನು ಶಾಸಕ ಜಿ.ಟಿ. ದೇವೇಗೌಡರು ಉದ್ಘಾಟಿಸಿದರು.

ಮೈಸೂರು, ಆ. 9– ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯವಾದುದು ಎಂದು ಶಾಸಕ ಜಿ.ಟಿ. ದೇವೇಗೌಡರು ತಿಳಿಸಿದರು.

ಮೈಸೂರು ತಾಲೂಕು ಹೂಟಗಳ್ಳಿ ಸರ್ಕಾರಿ ಪ್ರೌಢಶಾಲೆಯ ಸಭಾಂಗಣದಲ್ಲಿ ನಡೆದ ಕನ್ನಡ ಭಾಷಾ ಶಿಕ್ಷಕರ ಕಾರ್ಯಾಗಾರವನ್ನು ಬುಧವಾರ ಉದ್ಘಾಟಿಸಿ, ಮಾತನಾಡಿದರು. ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು ಉತ್ತಮಪಡಿಸುವ ಸಲುವಾಗಿ ಈ ಕಾರ್ಯಾಗಾರವನ್ನು ಏರ್ಪಡಿಸಿರುವುದು ಅತ್ಯಂತ ಶ್ಲಾಘನೀಯ ಎಂದರು.

ಮಕ್ಕಳಲ್ಲಿ ಆತ್ಮಸ್ಥೈರ್ಯ ಹೆಚ್ಚಿಸುವ ಕೆಲಸವನ್ನು ಶಿಕ್ಷಕರು ಮಾಡಬೇಕಿದೆ ಎಂದು ತಿಳಿಸಿದರು. ಮಕ್ಕಳೊಂದಿಗೆ ಶಿಕ್ಷಕರು ಸಂವಾದ ಮಾಡುವುದು, ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ, ಪ್ರತಿ ಶಾಲೆಯಲ್ಲಿ ವಿಶೇಷ ತರಗತಿಗಳನ್ನು ನಡೆಸಿ, ಉತ್ತಮ ಫಲಿತಾಂಶ ಬರುವಂತೆ ಕ್ರಮ ಕೈಗೊಳ್ಳುವಂತೆ ಶಿಕ್ಷಕರಿಗೆ ತಿಳಿಸಿದರು. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಗುರುತಿಸಿ, ಅವರ ಮನೆಗಳಿಗೆ ಭೇಟಿ ನೀಡಿ, ವಿದ್ಯಾರ್ಥಿಗಳು ಮತ್ತು ಪೋಷಕರ ಮನವೊಲಿಸಿ, ವಿದ್ಯಾರ್ಥಿಗಳು ಹೆಚ್ಚಿನ ಅವಧಿ ಕಲಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಬೇಕು ಎಂದರು. ಸಮಾರಂಭದಲ್ಲಿ ಡಿಡಿಪಿಐ ಹೆಚ್.ಕೆ.ಪಾಂಡು, ಜಿ.ಪಂ ಮಾಜಿ ಸದಸ್ಯರಾದ ಚಂದ್ರಿಕಾ ಸುರೇಶ್, ಬಿಇಓ ವಿವೇಕಾನಂದ, ದೇವರಾಜು, ಕುಮಾರ್, ಮುರುಳೀಧರ್, ಹೂಟಗಳ್ಳಿ ಸುರೇಶ್, ಮು.ಶಿ. ಸಂಗೀತ, ಬಿಆರ್‌ಸಿ ಮಹದೇವು, ಕೂರ್ಗಳ್ಳಿ ಚನ್ನೇಗೌಡ ಹಾಜರಿದ್ದರು.

ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ರಿಯಾಯಿತಿ ದರದಲ್ಲಿ ಮಾರಾಟ



ಮೈಸೂರು,ಆ.9–ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್‌ನಲ್ಲಿ ಬ್ರಾಂಡೆಡ್ ಫುಟ್ ವೇರ್, ಪುರುಷರ ಮತ್ತು ಮಹಿಳೆಯರ ಸ್ಪೋರ್ಟ್ಸ್ ಶೂಸ್, ಪುರುಷರ ಬ್ರಾಂಡೆಡ್ ಶರ್ಟ್ಸ್, ಪ್ಯಾಂಟ್ಸ್, ಟೀ–ಶರ್ಟ್ಸ್, ಜಾಕೆಟ್ಸ್, ಟ್ರ್ಯಾಕ್ ಪ್ಯಾಂಟ್, ಲೋವರ್ ಶರ್ಟ್ಸ್‌ಗಳು, ಮಹಿಳೆಯರ ಬ್ರಾಂಡೆಡ್ ಕುರ್ತಿಗಳು, ಲೇಡಿಸ್ ಟಾಪ್ಸ್, ಜಾಕೆಟ್ಸ್, ಸ್ವೆಟರ್ಸ್, ಟ್ರ್ಯಾಕ್ ಪ್ಯಾಂಟ್ಸ್, ಟೀ–ಶರ್ಟ್ಸ್, ಟೈಟ್ಸ್, ಪ್ಲಾಜೋ, ಲೆಗ್ಗಿನ್ಸ್ ಸಹಿತ ಅನೇಕ ಬ್ರಾಂಡೆಡ್ ಉತ್ಪನ್ನಗಳು ರಿಯಾಯಿತಿ ದರದಲ್ಲಿ ಲಭ್ಯವಿದೆ. ಬ್ರಾಂಡೆಡ್ ಪೂಮಾ, ರೋಡ್ ಸ್ಟಾರ್, ರೀಬಾಕ್, ಎಚ್‌ಆರ್‌ಎಕ್ಸ್ ವಾನ್ಸ್, ಯುಸಿಬಿ, ಮಸ್ಟ್ ಅಂಡ್ ಹರ್ಬರ್, ಲೋಟ್ಟೊ ಸಹಿತ ವಿವಿಧ ಕಂಪನಿಗಳ ಉತ್ಪನ್ನಗಳು ಭಾರೀ ರಿಯಾಯಿತಿ ದರದಲ್ಲಿ ಮಾರಾಟವಾಗುತ್ತಿದೆ. ಈ ಅವಕಾಶ ಕೆಲವೇ ದಿನಗಳು ಮಾತ್ರ. ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ ಪ್ರದರ್ಶನ ಹಾಗೂ ಮಾರಾಟ ಸೌಲಭ್ಯವಿದೆ. ಗ್ರಾಹಕರ ಅನುಕೂಲತೆಗಾಗಿ ಡೆಬಿಟ್ ಹಾಗೂ ಕ್ರೆಡಿಟ್ ಕಾರ್ಡ್‌ಗಳನ್ನು ಸ್ವೀಕರಿಸಲಾಗುವುದೆಂದು ಆಯೋಜಕರು ತಿಳಿಸಿದ್ದಾರೆ.

ಕ್ವಿಟ್ ಇಂಡಿಯಾ ಚಳವಳಿ ದಿನಾಚರಣೆ: ಕಾರ್ಮಿಕ ಸಂಘಟನೆಗಳ ಧರಣಿ



ಮೈಸೂರು,ಆ.9(ಎಂಟಿವೈ)– ಕೇಂದ್ರ ಸರ್ಕಾರದ ಕಾರ್ಮಿಕ, ರೈತ, ಜನ ವಿರೋಧಿ ನೀತಿಗಳ ವಿರುದ್ಧ ಜೆಸಿಟಿಯು ಮುಖಂಡರು ಮೈಸೂರಿನ ಗಾಂಧಿವೃತ್ತದಲ್ಲಿ ಮಹಾ ಧರಣಿ ಹಾಗೂ ಬಹಿರಂಗ ಸಭೆ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕ್ವಿಟ್ ಇಂಡಿಯಾ ಚಳವಳಿಯ ನೆನಪಿನಲ್ಲಿ ಸೇರಿದ ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ(ಜೆಸಿಟಿಯು) ನೇತೃತ್ವದಲ್ಲಿ ನಡೆದ ಧರಣಿಯಲ್ಲಿ ಪಾಲ್ಗೊಂಡು ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಮುಂಬರುವ ದಿನಗಳಲ್ಲಿ ಬೃಹತ್ ಹೋರಾಟ ಮಾಡಲು ನಿರ್ಧರಿಸಿದರು.

ಬ್ರಿಟಿಷರನ್ನು ಭಾರತದಿಂದ ತೊಲಗಿಸಲು ಆರಂಭಿಸಿದ ಕ್ವಿಟ್ ಇಂಡಿಯಾ ಚಳವಳಿ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿತು. ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಕಾರ್ಮಿಕ ವರ್ಗ ನಿರಂತರವಾಗಿ ಶೋಷಣೆಗೆ ಒಳಗಾಗುತ್ತಲೇ ಇದೆ. ಆಳುವ ಸರ್ಕಾರಗಳ ಕಾರ್ಮಿಕ, ಜನ ವಿರೋಧಿ ನೀತಿಗಳ ವಿರುದ್ಧ ಹೋರಾಡುತ್ತಲೇ ಇದ್ದೇವೆ. ಆದರೂ ಸಮಸ್ಯೆಗಳು ಬಗೆಹರಿದಿಲ್ಲ ಎಂದು ಕಿಡಿಕಾರಿದರು.

ಇದೇ ವೇಳೆ ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ ಮಾತನಾಡಿ, ಬುದ್ಧ, ಮಹಾವೀರ, ಬಸವಣ್ಣನವರ ಹೆಸರೇಳಿಕೊಂಡು ಕೆಲವರು ದೇಶದಲ್ಲಿ ದ್ವೇಷವನ್ನು ಬಿತ್ತುವ ಕೆಲಸ ಮಾಡುತ್ತಿದ್ದಾರೆ. ಧರ್ಮ, ಜಾತಿ, ವರ್ಗಗಳಿಂದ ಕೂಡಿರುವ ಈ ದೇಶದಲ್ಲಿ ವಿಷ ಬೀಜವನ್ನು ಬಿತ್ತಿ ಒಡೆಯುವ ಕೆಲಸ ಮಾಡಲಾಗುತ್ತಿದೆ. ಸಂವಿಧಾನದ ಆಶಯಗಳನ್ನು ಅರಿಯದೆ ಇರುವವರು ದ್ವೇಷ ತುಂಬುತ್ತಿದ್ದಾರೆ ಎಂದು ಕಿಡಿಕಾರಿದರು. ಬ್ರಿಟಿಷರು ದೇಶ ಬಿಟ್ಟು ಹೋದರೂ ಸರ್ವಾಧಿಕಾರಿ ಧೋರಣೆಯನ್ನು ಕೆಲವರು ಎರವಲು ಮಾಡಿಕೊಂಡು ಅದನ್ನೇ ಮುಂದುವರಿಸುತ್ತಿದ್ದಾರೆ. ಸರ್ವಾಧಿಕಾರಿ ನೀತಿಯ ವಿರುದ್ಧ ಹೋರಾಟ ಅನಿವಾರ್ಯವಾಗಿದೆ. ಅದಾನಿ–ಅಂಬಾನಿಯಂತಹ ಐದಾರು ಶ್ರೀಮಂತರು ದೇಶವನ್ನು ತಮ್ಮ ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳುತ್ತಿದ್ದಾರೆ ಎಂದು ಕಿಡಿಕಾರಿದರು.

ಬೇಡಿಕೆಗಳು: ಕೆಲಸದ ಅವಧಿಯನ್ನು 12 ಗಂಟೆಗೆ ಏರಿಕೆ ಮಾಡಿರುವುದನ್ನು ಹಿಂಪಡೆಯಬೇಕು. ಜೀವನ ಸಾಗಿಸಲು ಕನಿಷ್ಠ ವೇತನವನ್ನು 31 ಸಾವಿರಕ್ಕೆ ಹೆಚ್ಚಿಸಬೇಕು. ಕಾರ್ಮಿಕ ವಿರೋಧಿ ಲೇಬರ್ ಕೋಡ್ ರದ್ದು ಮಾಡಬೇಕು. ಸಾರ್ವತ್ರಿಕ ಪಿಂಚಣಿ ವ್ಯವಸ್ಥೆ ಜಾರಿಗೊಳಿಸಿ, ಕನಿಷ್ಠ 8 ಸಾವಿರ ಪಿಂಚಣಿ ನೀಡಬೇಕು. ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಮತ್ತು ನಗದೀಕರಣ ನಿಲ್ಲಿಸಬೇಕು. ಉದ್ಯೋಗ ಖಾತ್ರಿ ಯೋಜನೆ, ಮನರೇಗಾ, ದುಡಿತದ ದಿನಗಳನ್ನು 200ಕ್ಕೆ ಏರಿಕೆ ಮಾಡಬೇಕು. ಸ್ಕೀಮ್ ಕಾರ್ಮಿಕರಾದ ಆಶಾ, ಅಂಗನವಾಡಿ ಮತ್ತು ಬಿಸಿಯೂಟ ಕಾರ್ಮಿಕರನ್ನು ಕನಿಷ್ಠ ವೇತನ ವ್ಯಾಪ್ತಿಗೆ ಒಳಪಡಿಸಬೇಕು. ವಲಸೆ ಕಾರ್ಮಿಕರಿಗೆ ಸೇವಾ ಭದ್ರತೆ, ಸಾರ್ವತ್ರಿಕ ಪಡಿತರ ವ್ಯವಸ್ಥೆ ಜಾರಿ ಮಾಡಬೇಕು. ಅಸಂಘಟಿತ ವಲಯದ ಕಾರ್ಮಿಕರಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕು. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತ್ರಿಗೊಳಿಸಿ, ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗಿಡಬೇಕು. 2020ರ ವಿದ್ಯುಚ್ಛಕ್ತಿ ಮಸೂದೆಯನ್ನು ಹಿಂಪಡೆಯಬೇಕೆಂದು ಒತ್ತಾಯಿಸಿದರು. ಮಹಾ ಧರಣಿಯಲ್ಲಿ ಜೆಸಿಟಿಯು ಸಂಚಾಲಕ ಜಗನ್ನಾಥ್, ಎಐಟಿಯುಸಿ ಹೆಚ್.ಆರ್.ಶೇಷಾದ್ರಿ, ಹೆಚ್.ಬಿ.ರಾಮಕೃಷ್ಣ, ಸೋಮರಾಜೇ ಅರಸ್, ದೇವದಾಸ್, ಸಿಐಟಿಯು ಜಯರಾಮ್, ಬಾಲಾಜಿರಾವ್, ಅಣ್ಣಪ್ಪ ಲ.ಜಗನ್ನಾಥ್, ಚಂದ್ರಶೇಖರ ಮೇಟಿ, ಯಶೋದರ ರಾವ್, ಮುದ್ದು ಕೃಷ್ಣ, ಎಯುಸಿಸಿಟಿಯುನ ಚೌಡಳ್ಳಿ ಜವರಯ್ಯ, ಆನಂದ್, ನಾ.ದಿವಾಕರ, ವೆಂಕಟೇಶ್ ಇನ್ನಿತರರು ಪಾಲ್ಗೊಂಡಿದ್ದರು.

ದಸರಾ ವೇಳೆ ದೀಪಾಲಂಕಾರಕ್ಕೆ ಮನವಿ

ಮೈಸೂರು,ಆ.9–ಮೈಸೂರಿನ ಬನ್ನಿಮಂಟಪ ಹಿಂಭಾಗದ ಪ್ರದೇಶ "ಸಿ" ಲೇಔಟ್, ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ವೃತ್ತ, ಮುಖ್ಯ ರಸ್ತೆ, ಹುಡ್ಕೋ ಮುಖ್ಯ ರಸ್ತೆ, ಶ್ರೀನಿವಾಸ ಸರ್ಕಲ್, ಹಲೀಮ್‌ನಗರ, ಕೆಎಸ್‌ಆರ್‌ಟಿಸಿ ಬ್ಲಾಕ್, ಇಂಡಸ್ಟ್ರಿಯಲ್ ಏರಿಯಾ ಎ ಬ್ಲಾಕ್, ಅನೇಕ ಫ್ಯಾಕ್ಟರಿಗಳು ಇರುವ ಈ ಪ್ರದೇಶಗಳಲ್ಲಿ ಸಾವಿರಾರು ಜನರು ವಾಸಿಸುತ್ತಿದ್ದು, ಈ ಪ್ರದೇಶಗಳಲ್ಲಿ ದಸರಾ ಸಂದರ್ಭದಲ್ಲಿ ದೀಪಾಲಂಕಾರವನ್ನು ಕಡೆಗಣಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ. ಮಹದೇವಪ್ಪ, ಶಾಸಕ ತನ್ವೀರ್ ಸೇಠ್, ಜಿಲ್ಲಾಡಳಿತ ಮತ್ತು ಮೈಸೂರು ದಸರಾ ಮಹೋತ್ಸವ ದೀಪಾಲಂಕಾರ ಉಪ ಸಮಿತಿ, ಸೆಸ್ಕ್ ಅಧೀಕ್ಷಕ ಇಂಜಿನಿಯರ್, ಸೆಸ್ಕ್ ಎನ್.ಆರ್. ಮೊಹಲ್ಲಾ ಕಾರ್ಯಪಾಲಕ ಅಭಿಯಂತರರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸಿ, ದಸರಾ ದೀಪಾಲಂಕಾರಕ್ಕೆ ಟೆಂಡರ್ ಕರೆಯುವ ಮುನ್ನ ಈ ಬಗ್ಗೆ ಪರಿಶೀಲಿಸಿ, ಈ ಪ್ರದೇಶಗಳಲ್ಲಿಯೂ ದೀಪಾಲಂಕಾರ ಮಾಡಬೇಕೆಂದು ಬನ್ನಿಮಂಟಪ ಎಜುಕೇಷನಲ್ & ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಎಸ್.ಕೆ.ಮುದಾಸಿರ್ ಪಾಷ, ಟ್ರಸ್ಟಿಗಳಾದ ಸೈಯದ್ ಮಸೂದ್, ಸಲೀಂ, ಮುದಾಸಿರ್ ಜಮೀಲ್, ಅಬ್ದುಲ್ ಶಕೂರ್ ಮನವಿ ಮಾಡಿದ್ದಾರೆ.

ವಿಶ್ವ ಆದಿಮ ಸಂಜಾತ ದಿನದ ಪ್ರಯುಕ್ತ

ಸಿಎನ್‌ಸಿಯಿಂದ ಡಿಸಿ ಕಚೇರಿ ಎದುರು ಶಾಂತಿಯುತ ಧರಣಿ



ಮಡಿಕೇರಿ, ಆ.9– ವಿಶ್ವ ಆದಿಮಸಂಜಾತ ಸ್ಥಳೀಯ ಜನರ ಅಂತಾರಾಷ್ಟ್ರೀಯ ದಿನದ ಪ್ರಯುಕ್ತ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಶಾಂತಿಯುತ ಧರಣಿ ಸತ್ಯಾಗ್ರಹ ನಡೆಸಿತು.

ಧರಣಿಯ ನೇತೃತ್ವ ವಹಿಸಿ ಮಾತನಾಡಿದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ, ಕೊಡವ ಸ್ವಯಂ ನಿರ್ಣಯ ಹಕ್ಕು ಮತ್ತು ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತತ್ತೆಯನ್ನು ಒಳಗೊಂಡ ವಿವಿಧ ರಾಜ್ಯಾಂಗ ದತ್ತ ಹಕ್ಕುಗಳ ಬೇಡಿಕೆಗಳ ಕುರಿತು ಸರ್ಕಾರಗಳು ಸೂಕ್ತ ಸ್ಪಂದನೆಯನ್ನು ನೀಡಬೇಕೆಂದು ಒತ್ತಾಯಿಸಿದರು.

ಕೊಡವರು ವಿಶಿಷ್ಟವಾದ ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆಯನ್ನು ಹೊಂದಿರುವ ಬುಡಕಟ್ಟು ಜನಾಂಗದವರಾಗಿದ್ದಾರೆ. ವಿಭಿನ್ನ ಭಾಷೆ ಮತ್ತು ನಂಬಿಕೆಗಳನ್ನು ಹೊಂದಿದ್ದಾರೆ. ಸಾಂಪ್ರದಾಯಿಕವಾಗಿ ಅವರು ಕೊಡವ ಭೂಮಿಯಲ್ಲೇ ಉಳಿದುಕೊಂಡಿದ್ದಾರೆ. ನಂಬಿಕೆ ಮತ್ತು ಸಂಸ್ಕೃತಿಯನ್ನು ತಮ್ಮ ಹೊಸ ಪೀಳಿಗೆಗೆ ರವಾನಿಸಿದ್ದಾರೆ. ಈ ರೀತಿಯ ವಿಶಿಷ್ಟ ಮತ್ತು ಅತಿಸೂಕ್ಷ್ಮ ಜನಾಂಗದ ಹಕ್ಕುಗಳನ್ನು ಆಡಳಿತ ವ್ಯವಸ್ಥೆ ಮುಂದೆ ಪ್ರತಿಪಾದಿಸುವುದು ನಮ್ಮ ಕರ್ತವ್ಯವಾಗಿದೆ ಎಂದರು.

ಸಿಎನ್‌ಸಿ ಸಂಘಟನೆ ಕೊಡವ ಲ್ಯಾಂಡ್‌ಗಾಗಿ ಶ್ರಮಿಸುತ್ತಿದೆ, ಭೌಗೋಳಿಕ–ರಾಜಕೀಯ ಸ್ವಾಯತ್ತತೆ, ಆಂತರಿಕ ರಾಜಕೀಯ ಸ್ವ–ನಿರ್ಣಯದ ಹಕ್ಕು ಮತ್ತು ಮಿನಿಸ್ಕ್ಯೂಲ್ ಮೈಕ್ರೋ ಕೊಡವ ಜನಾಂಗೀಯ ಬುಡಕಟ್ಟು ಕುಲಕ್ಕೆ ಎಸ್‌ಟಿ ಟ್ಯಾಗ್ ಪ್ರತಿಪಾದಿಸುತ್ತ ಕಳೆದ 33 ವರ್ಷಗಳಿಂದ ಹಕ್ಕೊತ್ತಾಯ ಮಂಡಿಸುತ್ತಾ ಬಂದಿದೆ ಎಂದರು.

ಕೊಡವರು ಕೊಡಗಿಗೆ ಸೀಮಿತವಾದ ಜನರಾಗಿದ್ದು, ಹೊರಗೆ ಎಲ್ಲಿಯೂ ಕೊಡವರಿಗೆ ತಾಯಿ ಬೇರಿಲ್ಲ. ಆದಿಮಸಂಜಾತ ಜನರಾಗಿರುವ ಕೊಡವರು, ಭೂಮಿ ಸೃಷ್ಟಿಯಾದ ದಿನದಿಂದಲೂ ಕೊಡಗನ್ನು ತಮ್ಮ ಅವಿಭಾಜ್ಯ ಮತ್ತು ಸಾಂಪ್ರದಾಯಿಕ ಜನ್ಮ ಭೂಮಿಯನ್ನಾಗಿ ಪಡೆದಿದ್ದಾರೆ. ಆದ್ದರಿಂದ ಭಾರತದ ಈಶಾನ್ಯ ಪ್ರಾಂತ್ಯದಲ್ಲಿ 10 ಸ್ವಾಯತ್ತ ಪ್ರದೇಶಗಳಿಗೆ ಸಮಾನವಾಗಿ ಸ್ವಯಂ ನಿರ್ಣಯದ ಹಕ್ಕನ್ನು ಕೊಡವರಿಗೂ ಅಳವಡಿಸಬೇಕು. ಆದಿವಾಸಿ ಮೂಲನಿವಾಸಿ ಕೊಡವ ಜನಾಂಗವನ್ನು ನಮ್ಮ ಸಂವಿಧಾನದ ಎಸ್.ಟಿ ಪಟ್ಟಿಯಲ್ಲಿ ಸೇರಿಸಬೇಕು. ಕೊಡವ ಭಾಷೆಯನ್ನು 8ನೇ ಶೆಡ್ಯೂಲ್‌ಗೆ ಸೇರಿಸಬೇಕು, ಸಂವಿಧಾನದ ವಿಧಿಗಳ ಅಡಿಯಲ್ಲಿ ಪಠ್ಯಕ್ರಮ ಮತ್ತು ಆಡಳಿತದಲ್ಲಿ ಪರಿಚಯಿಸಬೇಕು. ಕೊಡವ ಜಾನಪದ ಪರಂಪರೆಯನ್ನು ಅಮೂರ್ತ ಸಂಸ್ಕೃತಿಯಲ್ಲಿ ಸೇರಿಸಬೇಕು.

ಯುನೆಸ್ಕೋದ ಪರಂಪರೆ ಪಟ್ಟಿಯಲ್ಲಿ ಕೊಡವ ಜಾನಪದ ಪರಂಪರೆಯನ್ನು ಜೀವಂತಗೊಳಿಸಲು, ಸರ್ಕಾರ ಕಾರ್ಯಕ್ರಮ ಒದಗಿಸಬೇಕು. ವಿಶ್ವ ಕೊಡವಾಲಜಿ ಸಂಶೋಧನಾ ಕೇಂದ್ರ ಮತ್ತು ಕೊಡವ ಅಡ್ವಾನ್ಸ್ಡ್ ಶಿಕ್ಷಣ ಅಧ್ಯಯನ ಕೇಂದ್ರ ಸ್ಥಾಪಿಸಲು ನಮಗೆ ಸರ್ಕಾರಿ ಭೂಮಿ ನೀಡಬೇಕು. ಹೊಸ ಸಂಸತ್ತಿನಲ್ಲಿ ಕೊಡವ ಪ್ರಾತಿನಿಧ್ಯವನ್ನು ನೀಡಬೇಕು, ನಮ್ಮ ಆಧ್ಯಾತ್ಮಿಕ–ಪಾರಮಾರ್ಥಿಕ ಭೂಮಿಗಳಾದ ಮಂದ್, ದೇವಕಾಡ್, ತೂಟ್‌ಂಗಳ, ಕ್ಯಾಕೋಳ, ಇತ್ಯಾದಿಗಳು ಹಾಗೂ ಕೊಡವ ಜನ್ಮಭೂಮಿಯಲ್ಲಿ ನಮ್ಮ ಐತಿಹಾಸಿಕ ನಿರಂತರತೆಗೆ ಶಾಸನಬದ್ಧ ಅನುಮೋದನೆಗಾಗಿ, ಮಣಿಪುರ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ ಮತ್ತು ಮಿಜೋರಾಂ ಸಾಲಿನಲ್ಲಿ ಇನ್ನರ್ ಲೈನ್ ಪರ್ಮಿಟ್ ಖಾತರಿಯನ್ನು ಕೋರುತ್ತದೆ ಎಂದು ನಾಚಪ್ಪ ಹೇಳಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ನಂಜುಂಡೇಗೌಡ ಅವರ ಮೂಲಕ ಹಕ್ಕೊತ್ತಾಯಗಳ ಮನವಿ ಪತ್ರವನ್ನು ಸಲ್ಲಿಸಿದರು. ಸತ್ಯಾಗ್ರಹದಲ್ಲಿ ಕೊಡವ ಸಾಂಪ್ರದಾಯಿಕ ಪುರಾತನ ಕಲಾಕೃತಿಗಳನ್ನು ಪ್ರದರ್ಶಿಸಲಾಯಿತು.

ಪುಲ್ಲೇರ ಸ್ವಾತಿ ಕಾಳಪ್ಪ, ಪಟ್ಟಮಾಡ ಲಲಿತ, ಕೂಪದಿರ ಪುಷ್ಪ, ಮುತ್ತಪ್ಪ, ಚೋಳಪಂಡ ಜ್ಯೋತಿ ನಾಣಯ್ಯ, ಕಲಿಯಂಡ ಪ್ರಕಾಶ್, ಜಮ್ಮಡ ಮೋಹನ್, ಬಾಚರಣಿಯಂಡ ಚಿಪ್ಪಣ್ಣ, ಅಜ್ಜಿಕುಟ್ಟಿರ ಲೋಕೇಶ್, ಪಟ್ಟಮಾಡ ಕುಶ, ಚಂಬಂಡ ಜನತ್, ಕಾಂಡೇರ ಸುರೇಶ್, ಅರೆಯಡ ಗಿರೀಶ್, ಕಾಟುಮಣಿಯಂಡ ಉಮೇಶ್, ನಂದಿನೆರವಂಡ ವಿಜು, ಮಣೋಟಿರ ಚಿಣ್ಣಪ್ಪ ಕಿರಿಯಮಾಡ ಶರಿನ್ ಪುಟ್ಟಿಚಂಡ ದೇವಯ್ಯ, ಪುಲ್ಲೇರ ಕಾಳಪ್ಪ, ಅಳಮಂಡ ಜೈ, ಮಂದಪಂಡ ಮನೋಜ್, ಪಾರುವಂಗಡ ನವೀನ್, ಚೋಳಪಂಡ ನಾಣಯ್ಯ, ಕೂಪದಿರ ಸಾಬು, ಬೊಟ್ಟಂಗಡ ಜಪ್ಪು, ಪುದಿಯೊಕ್ಕಡ ಕಾಶಿ, ಮಣೋಟಿರ ಜಗದೀಶ್, ನಂದಿನೆರವಂಡ ಅಪ್ಪಯ್ಯ, ನಂದಿನೆರವಂಡ ಅಯ್ಯಣ್ಣ, ನಂದಿನೆರವಂಡ ದಿನೇಶ್, ಅಜ್ಜಿನಕಂಡ ಸನ್ನಿ ಮಾಚಯ್ಯ, ಬಡುವಂಡ ವಿಜಯ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಗಾಂಜಾ ಸೇವಿಸುತ್ತಿದ್ದ ನಾಲ್ವರ ಬಂಧನ

ಮಡಿಕೇರಿ, ಆ.9– ಗಾಂಜಾ ಸೇವನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಡಿಕೇರಿ ನಗರ ಪೊಲೀಸರು ಒಟ್ಟು ನಾಲ್ಕು ಮಂದಿ ಯುವಕರನ್ನು ಬಂಧಿಸಿದ್ದಾರೆ.

ಮೂಲತಃ ಮಕ್ಕಂದೂರು ಗ್ರಾಮದ ನಿವಾಸಿ ಹಾಲಿ ನಗರದ ದೇಚೂರಿನಲ್ಲಿ ವಾಸವಿರುವ ಪ್ರತಾಪ್(22), ಇಬ್ನಿವಳವಾಡಿ ಗ್ರಾಮದ ಐ.ಆರ್. ಮೋನಿಶ್(20), ಕರ್ಣಂಗೇರಿ ಗ್ರಾಮದ 3ನೇ ಮೈಲು ನಿವಾಸಿ ಡಿ.ಲಿಖಿತ್(23) ಹಾಗೂ ಪಿ.ಎಸ್.ಅಕ್ಷಯ್(23) ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ.

ಈ 4 ಯುವಕರು ದೇಚೂರಿನಲ್ಲಿ ಗಾಂಜಾ ಸೇವಿಸುತ್ತಿರುವ ಬಗ್ಗೆ ನಗರ ಪೊಲೀಸ್ ಠಾಣೆಗೆ ಮಾಹಿತಿ ದೊರಕಿತ್ತು. ಈ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಸಂದರ್ಭ ನಾಲ್ವರು ಆರೋಪಿಗಳು ಸೆರೆ ಸಿಕ್ಕಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮಡಿಕೇರಿ ಡಿವೈಎಸ್‌ಪಿ ಗಂಗಾಧರಪ್ಪ, ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ ನಗರ ಠಾಣೆಯ ಪಿಎಸ್‌ಐ ಶ್ರೀನಿವಾಸ್, ಅಪರಾಧ ವಿಭಾಗದ ಪಿಎಸ್‌ಐ ರಾಧಾ, ಡಿಸಿಆರ್‌ಬಿ ವಿಭಾಗದ ಅಧಿಕಾರಿಗಳು ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಕೂಡಿಗೆ: ಗ್ರಾಪಂ ಅಧ್ಯಕ್ಷರಾಗಿ ಕೆ.ಟಿ.ಗಿರೀಶ್ ಆಯ್ಕೆ



ಕುಶಾಲನಗರ, ಆ.9– ತಾಲೂಕಿನ ಕೂಡಿಗೆ ಗ್ರಾಮ ಪಂಚಾಯಿತಿಯ ಎರಡನೇ ಅವಧಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಾದ ಕೆ.ಟಿ.ಗಿರೀಶ್ ಅಧ್ಯಕ್ಷರಾಗಿ ಹಾಗೂ ಜಯಶ್ರೀ ಉಪಾಧ್ಯಕ್ಷರಾಗಿ ಆಯ್ಕೆಯಾದರು.

ಪಂಚಾಯತಿ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಸದಸ್ಯರಾದ ಗಿರೀಶ್, ಅರುಣ್ ರಾವ್,ಅನಂತ, ಶಿವ ಕುಮಾರ್ ನಾಮಪತ್ರ ಸಲ್ಲಿಸಿದ್ದರು. ಬಿಸಿಎಂ ಎ ಮಹಿಳೆಗೆ ಮೀಸಲಾ ಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಜಯಶ್ರೀ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಜಯಶ್ರೀ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕೆ.ಟಿ.ಗಿರೀಶ್ 8 ಮತ ಪಡೆದು ಅಯ್ಕೆಯಾದರೆ ಅನಂತ 7 ಮತಗಳನ್ನು ಗಳಿಸಿ ಪರಾಭವಗೊಂಡರು. ಆದರೆ ಅರುಣ್ ರಾವ್ ಮತ್ತು ಶಿವಕುಮಾರ್ ಯಾವುದೇ ಮತಗಳಿಸಲಿಲ್ಲ. ಈ ಸಂದರ್ಭ ಎಲ್ಲಾ 15 ಸದಸ್ಯ ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಕುಶಾಲನಗರ ಪುರಸಭೆ ಮುಖ್ಯಾಧಿಕಾರಿ ಕೃಷ್ಣಪ್ರಸಾದ್ ಚುನಾವಣಾಧಿಕಾರಿಯಾಗಿ ಪಿ.ವೈ.ಪುನೀತ್ ಸಹಾಯಕರಾಗಿ ಕಾರ್ಯ ನಿರ್ವಹಿಸಿದರು. ಕೂಡಿಗೆ ಗ್ರಾಪಂ ಅಭಿವೃದ್ಧಿ ಅಧಿಕಾರಿ ಅಂಜನಾದೇವಿ ಇದ್ದರು.

ವಿರಾಜಪೇಟೆ ಅರಣ್ಯ ವ್ಯಾಪ್ತಿಯಲ್ಲಿ ಕಾಡಾನೆಗಳ ಹಾವಳಿ

ಎಷ್ಟೇ ಬಾರಿ ಕಾಡಿಗಟ್ಟಿದರೂ ದಾಳಿ ಮಾಡುತ್ತಿರುವ ಆನೆಗಳ ಹಿಂಡು

ನಾಪೋಕ್ಲು, ಆ.9– ವಿರಾಜಪೇಟೆ ಅರಣ್ಯ ವಲಯ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ಕಾಡಾನೆಗಳ ಉಪಟಳದಿಂದಾಗಿ ಬೆಳೆಗಾರರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದು ಇದರ ನಿಯಂತ್ರಣಕ್ಕೆ ಕಾಡಾನೆಗಳನ್ನು ಕಾಡಿಗೆ ಅಟ್ಟುವ ಮೂಲಕ ಸಾಕಷ್ಟು ಶ್ರಮ ವಹಿಸುತ್ತಿದ್ದಾರೆ. ಸಮೀಪದ ಮರಂದೋಡ ಗ್ರಾಮದಲ್ಲಿ ಕಾಡಾನೆಗಳ ಹಾವಳಿ ಮುಂದುವರೆದಿದ್ದು, ಗ್ರಾಮಸ್ಥರು ಸಂಕಷ್ಟ ಅನುಭವಿಸುತ್ತಿದ್ದಾರೆ. ಮಂಗಳವಾರ ಅರಣ್ಯ ಇಲಾಖೆಯ ಸಹಯೋಗದೊಂದಿಗೆ 10 ಕಾಡಾನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ನಡೆಸಲಾಗಿತ್ತು. ಬುಧವಾರ ಮತ್ತೆ ಕಾಡಾನೆಗಳು ಮರಂದೋಡ ಗ್ರಾಮದ ಮುಕ್ಕಾಟಿರ ಪ್ರಕಾಶ್ ಅವರ ತೋಟದ ಗೇಟ್ ಅನ್ನು ಜಖಂಗೊಳಿಸಿವೆ. ಮರಂದೋಡ ಶಾಲೆಯ ಗೇಟನ್ನು ಕೂಡ ಜಖಂಗೊಳಿಸಿವೆ. ತೋಟಗಳಲ್ಲಿ ಅಡ್ಡಾಡುತ್ತಿದ್ದ ಕಾಡಾನೆಗಳನ್ನು ಬುಧವಾರ ಮತ್ತೆ ಕಾಡಿಗಟ್ಟಲಾಗಿದೆ.



ಅರಣ್ಯ ಇಲಾಖೆ ನಡೆಸಿದ ಕಾರ್ಯಾಚರಣೆಯಲ್ಲಿ ಅರಣ್ಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎ.ನೆಹರು ಮಾರ್ಗದರ್ಶನದಲ್ಲಿ ವಿರಾಜಪೇಟೆ ವಲಯ ಅರಣ್ಯಾಧಿಕಾರಿ ಕಳ್ಳಿರದೇವಯ್ಯ ನೇತೃತ್ವದಲ್ಲಿ ಅರಣ್ಯ ಆನೆ ಕ್ಷಿಪ್ರ ಕಾರ್ಯಪಡೆ ತಂಡ ಕೆದಮುಳ್ಳೂರು ಹಾಗೂ ಚೆಯ್ಯಂಡಾಣೆ ಕ್ಯಾಂಪ್ ಸಿಬ್ಬಂದಿಗಳು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

ಮಡಿಕೇರಿಯಲ್ಲಿ ಜೆಸಿಟಿಯುನಿಂದ ಪ್ರತಿಭಟನೆ

ಬಂಡವಾಳಶಾಹಿಗಳನ್ನು ಆಹ್ವಾನಿಸಿ ಕಾರ್ಮಿಕರ ಹಕ್ಕು ಕಸಿಯುವ ಯತ್ನ



ಮಡಿಕೇರಿ, ಆ.9– ಬ್ರಿಟಿಷರ ಕಪಿ ಮುಷ್ಟಿಯಿಂದ ಭಾರತವನ್ನು ಮುಕ್ತಗೊಳಿಸುವ ನಿಟ್ಟಿನಲ್ಲಿ ಅಂದು 'ಕ್ವಿಟ್ ಇಂಡಿಯಾ' ಅಹಿಂಸಾತ್ಮಕ ಚಳವಳಿ ನಡೆದಿತ್ತಾದರೆ, ಇತ್ತೀಚಿನ ವರ್ಷಗಳಲ್ಲಿ ಬಂಡವಾಳ ಶಾಹಿಗಳನ್ನು ಉತ್ತೇಜಿಸುತ್ತ ವಿದೇಶಿ ಸಂಸ್ಥೆಗಳನ್ನು ರಾಷ್ಟ್ರಕ್ಕೆ ಆಹ್ವಾನಿಸುವುದರೊಂದಿಗೆ ಕಾರ್ಮಿಕ ಸಮೂಹದ ಹಕ್ಕುಗಳನ್ನು ಕಸಿಯುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿ ಕಾರ್ಮಿಕರ ಜಂಟಿ ಕ್ರಿಯಾ ಸಮಿತಿ (ಜೆಸಿಟಿಯು)ಯಿಂದ ಪ್ರತಿಭಟನೆ ನಡೆಯಿತು.

ಸಿಐಟಿಯು ಸಂಘಟನೆಯ ಜಿಲ್ಲಾ ಅಧ್ಯಕ್ಷ ಪಿ.ಆರ್. ಭರತ್ ಅವರ ನೇತೃತ್ವದಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳ ಸಹಯೋಗದೊಂದಿಗೆ ನಗರದ ಜನರಲ್ ಕೆ.ಎಸ್.ತಿಮ್ಮಯ್ಯ ವೃತ್ತದಲ್ಲಿ ಪ್ರತಿಭಟನೆ ನಡೆಸಿ, ಕೇಂದ್ರದ ಕಾರ್ಮಿಕ ವಿರೋಧಿ ನೀತಿಗಳನ್ನು ತೀವ್ರವಾಗಿ ಖಂಡಿಸಲಾಯಿತು.

ಈ ಸಂದರ್ಭ ಪಿ.ಆರ್.ಭರತ್ ಮಾತನಾಡಿ, ಮಹಾತ್ಮಾ ಗಾಂಧೀಜಿಯವರ ಅಹಿಂಸಾತ್ಮಕ ಚಳುವಳಿಯಲ್ಲಿ ರಾಷ್ಟ್ರದಲ್ಲಿ ಕಾರ್ಮಿಕರನ್ನು ಒಳಗೊಂಡಂತೆ ಎಲ್ಲಾ ಸ್ತರದ ಜನ ಸಮೂಹದ ಒಗ್ಗಟ್ಟಿನ ಹೋರಾಟ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟಿತು. ಪ್ರಸ್ತುತ ಸ್ವಾತಂತ್ರ್ಯದ 77 ವರ್ಷಗಳನ್ನು ನಾವು ಕಳೆಯುತ್ತಿರುವ ಹಂತದಲ್ಲಿ ಕಾರ್ಮಿಕರಿಗೆ ನಿಜವಾದ ಸ್ವಾತಂತ್ರ್ಯ ಲಭಿಸಿದೆಯೇ ಎಂದು ತೀಕ್ಷ್ಣವಾಗಿ ಪ್ರಶ್ನಿಸಿದರು.

ಕಳೆದ 9 ವರ್ಷಗಳ ಮೋದಿ ನೇತೃತ್ವದ ಕೇಂದ್ರ ಸರ್ಕಾರ 47 ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿ ತರುವ ಮೂಲಕ, ಬಂಡವಾಳ ಶಾಹಿಗಳಿಗೆ ಅನುಕೂಲತೆ ಕಲ್ಪಿಸುವ ಪ್ರಯತ್ನಗಳಿಗೆ ಮುಂದಾಗಿದೆ. ಆ ಮೂಲಕ ವಿದೇಶಿ ಕಾರ್ಪೋರೇಟ್ ಸಂಸ್ಥೆಗಳನ್ನು ಕೈ ಬೀಸಿ ಕರೆಯುತ್ತಿದೆ ಇದನ್ನು ತೀವ್ರವಾಗಿ ವಿರೋಧಿಸುವುದಾಗಿ ಭರತ್ ತಿಳಿಸಿದರು.

ಕೃಷಿ ಉತ್ಪನ್ನಗಳ ಬೆಲೆಯಲ್ಲಿನ ಏರುಪೇರು, ಗೊಬ್ಬರಗಳ ಮೇಲಿನ ಸಹಾಯಧನ ಕಡಿತದಿಂದ ಹೆಚ್ಚುತ್ತಿರುವ ಬೆಲೆಯಿಂದ ರೈತರು ಆತ್ಮಹತ್ಯೆಗೆ ಮುಂದಾಗುವ ಪರಿಸ್ಥಿತಿಗಳು ಇಂದು ನಿರ್ಮಾಣವಾಗುತ್ತಿದೆ. ವಿದೇಶಿ ಸಂಸ್ಥೆಗಳ ಹೂಡಿಕೆಗೆ ಅನುಗುಣವಾಗಿ ಅವರಿಗೆ ರೈತರ ಕೃಷಿ ಭೂಮಿಗಳನ್ನು ನೀಡುವ ಕಾರ್ಯಗಳು ನಡೆಯುತ್ತಿದೆ. ಕೇಂದ್ರ ಸರ್ಕಾರ ವಿದೇಶಿ ಕಾರ್ಪೋರೇಟ್ ಸಂಸ್ಥೆಗಳ ಕೈಗೊಂಬೆಯಾಗಿ ವರ್ತಿಸುತ್ತಿದೆ ಎಂದು ಆರೋಪಿಸಿದರು.

ಬಡ ವರ್ಗದ ಕಾರ್ಮಿಕ ಸಮೂಹ, ರೈತಾಪಿ ವರ್ಗ ಮತ್ತು ತಳ ಹಂತದ ಸಮುದಾಯಗಳ ಶೋಷಣೆ ನಿರಂತರವಾಗಿ ಮುಂದುವರೆಯುತ್ತಿದೆ. ಇವುಗಳ ನಡುವೆ ಜನಸಾಮಾನ್ಯರ ನಿತ್ಯ ಬಳಕೆಯ ವಸ್ತುಗಳ ಬೆಲೆ ಗಗನ ಮುಖಿಯಾಗಿದ್ದು, ಬದುಕು ಸಂಕಷ್ಟಕ್ಕೆ ತಳ್ಳಲ್ಪಡುತ್ತಿದೆ ಎಂದು ಭರತ್ ಅಸಮಾಧಾನ ವ್ಯಕ್ತಪಡಿಸಿದರು. ಈ ಎಲ್ಲಾ ಪ್ರಮುಖ ಪ್ರಶ್ನೆಗಳನ್ನು ಮುಂದಿರಿಸಿಕೊಂಡು ಅಖಿಲ ಭಾರತ ಕಾರ್ಮಿಕ ಸಂಘಟನೆಗಳ ಕರೆಯ ಮೇರೆ ಕಾರ್ಮಿಕರ ಜಂಟಿ ಕ್ರಿಯಾ ಸಮಿತಿಯಿಂದ 'ಕ್ವಿಟ್ ಇಂಡಿಯಾ' ಚಳವಳಿಯ ಈ ಮಹತ್ವದ ದಿನದಂದು ಹೋರಾಟವನ್ನು ನಡೆಸಲಾಗುತ್ತಿದೆ ಎಂದು ಭರತ್ ತಿಳಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಅಧ್ಯಕ್ಷ ಹೆಚ್.ಬಿ. ರಮೇಶ್, ಸಿಐಟಿಯು ಪ್ರಧಾನ ಕಾರ್ಯದರ್ಶಿ ಎ.ಸಿ.ಸಾಬು, ಸಿಐಟಿಯು ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಪವಿತ್ರ, ಸೋಮವಾರಪೇಟೆ ತಾಲೂಕು ಅಧ್ಯಕ್ಷೆ ಸಾವಿತ್ರಿ, ಹಮಾಲಿ ಕಾರ್ಮಿಕರ ಸಂಘದ ಅಧ್ಯಕ್ಷ ಹಮೀದ್, ಜಿಲ್ಲಾ ಸರ್ಕಾರಿ ಆಸ್ಪತ್ರೆ ನೌಕರರ ಸಂಘದ ಅಧ್ಯಕ್ಷೆ ಜಾನಕಿ, ಗ್ರಾಮ ಪಂಚಾಯ್ತಿ ನೌಕರರ ಸಂಘದ ಅನಿಲ್ ಸೇರಿದಂತೆ ಹಲ ಪ್ರಮುಖರು, ಕಾರ್ಮಿಕ ಸಂಘಟನೆಗಳ ಸದಸ್ಯರುಗಳು ಪಾಲ್ಗೊಂಡಿದ್ದರು.

ಬಿ.ಶೆಟ್ಟಿಗೇರಿ ಗ್ರಾಪಂ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆ

ಗೋಣಿಕೊಪ್ಪ, ಆ.9– ಬಿ. ಶೆಟ್ಟಿಗೇರಿ ಗ್ರಾಪಂ ಅಧ್ಯಕ್ಷರಾಗಿ ಕೊಲ್ಲೀರ ಬೋಪಣ್ಣ, ಉಪಾಧ್ಯಕ್ಷರಾಗಿ ಚೇರಂಡ ಕೌಶಿ ಆಯ್ಕೆಯಾಗಿದ್ದಾರೆ.



ಕೊಲ್ಲೀರ ಬೋಪಣ್ಣ

ಬುಧವಾರ ನಡೆದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಮದ್ರೀರ ಗಿರೀಶ್ ಗಣಪತಿ ವಿರುದ್ಧ ಜಯಿಸಿದರು. ಒಟ್ಟು 6 ಸದಸ್ಯ ಸ್ಥಾನದಲ್ಲಿ ಬೋಪಣ್ಣ ಮಾತ್ರ ಕಾಂಗ್ರೆಸ್ ಬೆಂಬಲಿತ ಸದಸ್ಯರಾಗಿದ್ದಾರೆ. ಉಪಾಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಚೇರಂಡ ಕೌಶಿ ಅವಿರೋಧವಾಗಿ ಆಯ್ಕೆಯಾದರು.

ಉತ್ತಮ ಶಿಕ್ಷಣದಿಂದ ಆದಿವಾಸಿ, ಸೋಲಿಗರ ಅಭಿವೃದ್ಧಿ ಸಾಧ್ಯ

ವಿಶ್ವ ಆದಿವಾಸಿ ದಿನಾಚರಣೆಯಲ್ಲಿ ಶಾಸಕ ಎಆರ್‌ಕೆ ಅಭಿಮತ



ಸೋಲಿಗರಿಗೆ ಮನೆಗಳ ನಿರ್ಮಾಣ, ಮೂಲ ಸೌಕರ್ಯಗಳನ್ನು ಒದಗಿಸಿ ಕೊಡುವಲ್ಲಿ ತೊಂದರೆಯಾಗುತ್ತಿದೆ. ಆದ್ದರಿಂದ ಅಧಿಕಾರಿಗಳು ದೂರದೃಷ್ಟಿಯಿಂದ ಆಲೋಚನೆ ಮಾಡಿ ಯೋಜನೆಗಳನ್ನು ರೂಪಿಸುವ ಮೂಲಕ ಸೋಲಿಗರ ಅಭಿವೃದ್ಧಿಗೆ ಮುಂದಾಗಬೇಕು.
- ಎ.ಆರ್. ಕೃಷ್ಣಮೂರ್ತಿ, ಶಾಸಕರು.

ಚಾಮರಾಜನಗರ, ಆ.9– ಅರಣ್ಯದಲ್ಲಿ ವಾಸಿಸುವ ಆದಿವಾಸಿ, ಸೋಲಿಗರು ಅಭಿವೃದ್ಧಿ ಹೊಂದಲು ಉತ್ತಮ ಶಿಕ್ಷಣ ಪಡೆಯಬೇಕು ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ತಿಳಿಸಿದರು. ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ಜಿಲ್ಲಾ ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘದಿಂದ ನಡೆದ 29ನೇ ವಿಶ್ವ ಆದಿವಾಸಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸರ್ಕಾರವು ಆದಿವಾಸಿಗಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದ್ದು, ಅನೇಕ ಗಿರಿಜನ ಆಶ್ರಮ ಶಾಲೆಗಳನ್ನು ತೆರೆದಿದೆ. ಇದರ ಸದ್ಬಳಕೆ ಮಾಡಿಕೊಳ್ಳಬೇಕು. ಶಿಕ್ಷಣದ ಜೊತೆಗೆ ಪೂರ್ವಜರ ಕಲೆ, ಸಂಸ್ಕೃತಿಯನ್ನು ಸಹ ಉಳಿಸಿ ಬೆಳೆಸಿಕೊಂಡು ಹೋಗಬೇಕು. ಅಲ್ಲದೇ ಟಿವಿ, ಸಿನಿಮಾಗಳಿಗೆ ಮಾರು ಹೋಗದೆ ತಮ್ಮ ಸಂಸ್ಕೃತಿಯ ಕಡೆ ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರು ಮೀಸಲಾತಿ ಜಾರಿ ಮಾಡಿದಾಗ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದಲ್ಲಿ ಕೇವಲ 6 ಜಾತಿಗಳಿದ್ದವು. ಈಗ ಕರ್ನಾಟಕದಲ್ಲಿ 101 ಜಾತಿಗಳಿದ್ದು, ದೇಶದಲ್ಲಿ 1200ಕ್ಕೂ ಹೆಚ್ಚು ಜಾತಿಗಳಿವೆ. ಇದರಿಂದ ತುಳಿಯಲ್ಪಟ್ಟವರು, ಶೋಷಿತರು ಎಂದು ಕರೆಯಲ್ಪಡುವ ಮೂಲನಿವಾಸಿಗಳು ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ ಎಂದು ವಿಷಾಧಿಸಿದರು.

ನಮ್ಮ ತಂದೆಯವರಾದ ಬಿ.ರಾಚಯ್ಯ ಅವರು ಶಾಸಕರಾಗಿದ್ದ ಅವಧಿಯಲ್ಲಿ ಬೂದಿಪಡಗದ ರಂಗಸಂದ್ರದಲ್ಲಿ ಆಶ್ರಮ ಶಾಲೆಯನ್ನು ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರಿಂದ ಉದ್ಘಾಟನೆ ಮಾಡಿಸಿದ್ದರು. ಅಲ್ಲದೇ ಹಲವು ಹೊಸ ಪೋಡುಗಳನ್ನು ನಿರ್ಮಿಸಿ ಕೊಟ್ಟರು ಎಂದು ತಿಳಿಸಿದರು. ನಂತರ ಹನೂರು ಶಾಸಕ ಎಂ.ಆರ್. ಮಂಜುನಾಥ್ ಮಾತನಾಡಿ, ಆದಿವಾಸಿಗಳು ಸಾಮಾಜಿಕ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮುಂದೆ ಬರಬೇಕಾದರೆ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿಸಬೇಕು. ನಿಮಗೆ ಅಗತ್ಯವಾದ ನೆರವನ್ನು ಒದಗಿಸಲು ತಾವು ಬದ್ಧ ಎಂದರು.

ಬಳಿಕ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪನಾಗ್ ಮಾತನಾಡಿ, ಆದಿವಾಸಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಕೊಡಿಸಬೇಕಾದ ಸೌಲಭ್ಯಗಳ ಕುರಿತು ಜಿಲ್ಲಾಡಳಿತದಿಂದ ಕಾರ್ಯಕ್ರಮಗಳಿಗೆ ಚಾಲನೆ ನೀಡಲು ಮುಂದಾಗಿದ್ದೇವೆ. ಈ ಬಾರಿಯ ಸ್ವಾತಂತ್ರೋತ್ಸವ ದಿನಾಚರಣೆಯಲ್ಲಿ ನಾನಾ ಗೀತೆಗಳ ಸಮೂಹ ಗಾಯನಕ್ಕೆ ಆದಿವಾಸಿ ಸಮುದಾಯದ 170 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ ಎಂದರು.

ಇದೇ ವೇಳೆ ಹಕ್ಕೊತ್ತಾಯದ ಮನವಿ ಪತ್ರವನ್ನು ಜಿಲ್ಲಾ ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜುಳಾ, ತಾಲೂಕು ಅಧಿಕಾರಿ ನವೀನ್ ಮಠ, ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಹೆಚ್ಚಿನ ನಿರ್ದೇಶಕ ಡಾ.ಎನ್.ಎಸ್. ಪ್ರಶಾಂತ್, ಸೋಲಿಗರ ಅಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಎಂ. ಜಡೇಸ್ವಾಮಿ, ತಾಲೂಕು ಅಧ್ಯಕ್ಷರಾದ ಕೋರೇಗೌಡ, ದೊಡ್ಡ ಸಿದ್ದಯ್ಯ, ದಾಸೇಗೌಡ, ಗಿರಿಜನ ಶ್ರೇಯೋಭಿವೃದ್ಧಿ ಸಂಘದ ಅಧ್ಯಕ್ಷ ಮಾದಯ್ಯ, ಮುಖಂಡರಾದ ಮುತ್ತಯ್ಯ, ಕೇತಮ್ಮ, ಡಾ.ಸಿ. ಮಾದೇಗೌಡ, ಶಿವಣ್ಣ, ಚಂದ್ರಪ್ಪ, ಭವ್ಯ, ಜಾರ್ಜ್, ವಿಜಿಕೆಕೆ ವೈದ್ಯ ಡಾ.ತಾಣ್ಯ ಸೇರಿದಂತೆ ಇತರರಿದ್ದರು.

ಕಾರ್ಯಕ್ರಮಕ್ಕೂ ಮೊದಲು ಬಸವರಾಜು ತಂಡದವರು ಆದಿವಾಸಿ ಸಂಸ್ಕೃತಿಬಿಂಬಿಸುವ ಗೀತೆಗಳನ್ನು ಹಾಡಿ ರಂಜಿಸಿದರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಎಐಟಿಯುಸಿ, ಜೆಸಿಟಿಯು ಪ್ರತಿಭಟನೆ



ಚಾಮರಾಜನಗರ, ಆ.9– ಅಸಂಘಟಿತ ಹಾಗೂ ಸಂಘಟಿತ ವಲಯದ ಕಾರ್ಮಿಕರನ್ನು ಕನಿಷ್ಠ ವೇತನ ಕಾಯ್ದೆ ವ್ಯಾಪ್ತಿಗೆ ತಂದು 31,500 ವೇತನ ನಿಗದಿಗೊಳಿಸಬೇಕು ಎಂದು ಆಗ್ರಹಿಸಿ ನಗರದಲ್ಲಿ ಎಐಟಿಯುಸಿ, ಜೆಸಿಟಿಯು ಜಿಲ್ಲಾ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಜಿಲ್ಲಾಡಳಿತ ಭವನಕ್ಕೆ ತೆರಳಿ ಬೇಡಿಕೆ ಈಡೇರಿಸುವಂತೆ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಪಂ ನೌಕರರು, ಅಂಗನವಾಡಿ ಕಾರ್ಯಕರ್ತೆಯರು, ಅಸಂಘಟಿತ ಹಾಗೂ ಸಂಘಟಿತ ವಲಯದ ಕಾರ್ಮಿಕರನ್ನು ಕನಿಷ್ಠ ವೇತನ ಕಾಯ್ದೆ ವ್ಯಾಪ್ತಿಗೆ ತಂದು ಇಎಸ್‌ಐ, ಪಿಎಫ್, ಗ್ರಾಚ್ಯುಟಿ ಮತ್ತು ಪಿಂಚಣಿ ಸೌಲಭ್ಯ ಒದಗಿಸಬೇಕು. 12 ಗಂಟೆಗಳ ಕೆಲಸದ ಅವಧಿ ಅಧಿಸೂಚನೆ ವಾಪಸ್ ಆಗಬೇಕು. ಕಾರ್ಮಿಕ 4 ಕೋಡ್‌ಗಳನ್ನು ವಾಪಸ್ಸು ಪಡೆಯಬೇಕು ಎಂದು ಆಗ್ರಹಿಸಿದರು.

ಈ ವೇಳೆ ಎಐಟಿಯುಸಿ ರಾಜ್ಯ ಕಾರ್ಯದರ್ಶಿ ರಾಮಕೃಷ್ಣ ಮಾತನಾಡಿ, 1942ರಲ್ಲಿ ಕ್ವಿಟ್ ಇಂಡಿಯಾ ಚಳವಳಿ ಮುಖಾಂತರ ಬ್ರಿಟೀಷರನ್ನು ಭಾರತ ಬಿಟ್ಟು ತೊಲಗುವಂತೆ ಹೋರಾಟ ಮಾಡಲಾಯಿತು. ಇಂದು ದೇಶದಲ್ಲಿ ಆರ್ಥಿಕ ಅಸಮಾನತೆ, ದುಡಿಯುವ ವರ್ಗಕ್ಕೆ ಕನಿಷ್ಠ ವೇತನಕ್ಕಾಗಿ ಕಾರ್ಮಿಕ ಸಂಘಟನೆಗಳು ಕ್ವಿಟ್ ಇಂಡಿಯಾ ಚಳವಳಿ ಮಾದರಿಯಲ್ಲಿ ಚಳವಳಿ ರೂಪಿಸಬೇಕಾಗಿದೆ ಎಂದರು.

ರೈತರು, ಕಾರ್ಮಿಕರು ಮತ್ತು ಬಡವರ ಪರವಾದ ಕಾನೂನುಗಳು ಆಗುತ್ತಿಲ್ಲ, ಕಾರ್ಪೋರೇಟ್ ವಲಯವನ್ನು ಓಲೈಸಲು ಕಾನೂನುಗಳು ಆಗುತ್ತಿವೆ. ಇದರಿಂದ ಕಾರ್ಮಿಕರಿಗೆ ಕನಿಷ್ಠ ಕೂಲಿಯು ಸಿಗದಂತಾಗಿದೆ. ಶೇ. 1ರಷ್ಟಿದ್ದು, ಶೇ. 40ಆದಾಯ ಹೊಂದಿರುವ ಶ್ರೀಮಂತರಿಂದ ಆರ್ಥಿಕ ಅಸಮಾನತೆ ಹೆಚ್ಚುತ್ತಿದೆ ಎಂದರು.

ಕಾರ್ಮಿಕರ ಪರವಾಗಿ ಇದ್ದ 44 ಕಾನೂನುಗಳನ್ನು ಕೇಂದ್ರ ಸರ್ಕಾರ ತೆಗೆದು 4 ಕೋಡ್‌ಗಳಾಗಿ ಮಾಡಿ ಕಾರ್ಮಿಕ ರನ್ನು ಶೋಷಣೆ ಮಾಡಲು ಕೇಂದ್ರ ಸರ್ಕಾರ ಹೊರಟಿದೆ ಎಂದು ಆರೋಪಿ ಸಿದರು. ರೈತ, ಕಾರ್ಮಿಕ ಮತ್ತು ಬಡವರ ವಿರೋಧಿ ಕಾನೂನನ್ನು ಕೈಬಿಡಬೇಕು, ದುಡಿಯುವ ಕೈಗಳಿಗೆ ಉದ್ಯೋಗ ಕಲ್ಪಿಸಿ, ಕನಿಷ್ಠ ವೇತನ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸುರೇಶ್, ಸಿದ್ದರಾಜು, ಕೃಷ್ಣಪ್ಪ, ನಾಗಮಣಿ, ಭಾಗ್ಯ, ಶಾಹಿದಾ ಬಾನು, ಗುರುಲಿಂಗಮ್ಮ ಇತರರು ಇದ್ದರು.

ಹೃದಯಾಘಾತದಿಂದ ಶಾಲಾ ಬಾಲಕಿ ಸಾವು

ಬೆಂಗಳೂರಿನ ವಿದ್ಯಾರ್ಥಿ ವಾಕಿಂಗ್ ಮಾಡುವಾಗ ಕುಸಿದು ದುರಂತ

ಗುಂಡ್ಲುಪೇಟೆ, ಆ.9– ಹೃದಯಾಘಾತ ಇತ್ತೀಚಿನ ದಿನಗಳಲ್ಲಿ ಸಣ್ಣ ವಯಸ್ಸಿನವರು, ಮಧ್ಯವಯಸ್ಸಿನವರನ್ನೂ ಬಲಿ ತೆಗೆದುಕೊಳ್ಳುತ್ತಿದ್ದು, ಜನಸಾಮಾನ್ಯರಲ್ಲಿ ಆತಂಕ ಮೂಡಿಸಿದೆ. ಇದೀಗ ಶಾಲಾ ಬಾಲಕಿಯೊಬ್ಬರು ಬಲಿಯಾಗಿದ್ದಾರೆ.



ಪಟ್ಟಣದ ಖಾಸಗಿ ಶಾಲೆಯ ವಿದ್ಯಾರ್ಥಿನಿಯೊಬ್ಬರು ಹೃದಯಾಘಾತದಿಂದ ಸಾವಿಗೀಡಾಗ ಘಟನೆ ಬುಧವಾರ ನಡೆದಿದೆ.

ಪಟ್ಟಣದ ನಿರ್ಮಲಾ ಕಾನ್ವೆಂಟಿನಲ್ಲಿ ಹತ್ತನೇ ತರಗತಿ ವ್ಯಾಸಂಗ ಮಾಡುತ್ತಿದ್ದ ಫೆಲಿಶಾ(15) ಮೃತ ವಿದ್ಯಾರ್ಥಿನಿ. ಕ್ರೈಸ್ತ ಮಿಷನರಿ ಹಾಸ್ಟೆಲಿನಲ್ಲಿದ್ದ ಬೆಂಗಳೂರು ಮೂಲದ ಫೆಲಿಶಾ ಬೆಳಗ್ಗೆ ವಾಕಿಂಗ್ ಮಾಡುವಾಗ ಕುಸಿದು ಬಿದ್ದಳು. ಕೂಡಲೇ ಆಕೆಯನ್ನು ಸಮೀಪದ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಷ್ಟರಲ್ಲಿ ಸಾವಿಗೀಡಾಗಿದ್ದಳು. ವಿಷಯ ತಿಳಿದ ಸಾರ್ವಜನಿಕರು ಆಸ್ಪತ್ರೆ ಹಾಗೂ ಶಾಲೆಗೆ ಧಾವಿಸಿ ಫೆಲಿಶಾ ಸಾವಿಗೆ ಮರುಕ ವ್ಯಕ್ತಪಡಿಸಿದರು.

ಆಸ್ಪತ್ರೆಗೆ ಬಂದ ಆಕೆಯ ತಾಯಿ ಅನಿತಾ ಹಾಗೂ ಸಂಬಂಧಿಕರ ರೋಧನ ಮುಗಿಲುಮುಟ್ಟಿತ್ತು. ತಮ್ಮ ಮಗಳ ಮರಣೋತ್ತರ ಪರೀಕ್ಷೆ ಬೇಡ ನಮ್ಮ ವಶಕ್ಕೆ ಕೊಡಿ ಎಂದು ಮನವಿ ಮಾಡಿದರು. ವಿದ್ಯಾರ್ಥಿನಿಯ ಸಾವಿನ ಸತ್ಯ ತಿಳಿಯಲು ಮರಣೋತ್ತರ ಪರೀಕ್ಷೆ ಅಗತ್ಯವಾಗಿದೆ ಎಂದು ಸರ್ಕಲ್ ಇನ್ಸ್‌ಪೆಕ್ಟರ್ ಪರಶಿವಮೂರ್ತಿ, ಸಬ್ ಇನ್ಸ್‌ಪೆಕ್ಟರ್ ಕಿರಣ್ ಮನವರಿಕೆ ಮಾಡಿದರು. ಕಳೆದ ಎರಡು ವರ್ಷಗಳ ಹಿಂದೆ ಫೆಲಿಶಾ ಅಕ್ಕ ಸಹಾ ಇದೇ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ವರೆಗೆ ಓದಿ ಸದ್ಯ ಬೆಂಗಳೂರಿನಲ್ಲಿ ಪಿಯುಸಿ ವ್ಯಾಸಂಗ ಮಾಡುತ್ತಿದ್ದಾಳೆ.

ಕಬ್ಬಿನ ಬಾಕಿ ಹಣವನ್ನು ಪಾವತಿಸಲು ಆಗ್ರಹ



ಚಾಮರಾಜನಗರ, ಆ.9– ಕಬ್ಬಿನ ಬಾಕಿ ಹಣವನ್ನು ರೈತರಿಗೆ ಕೊಡಿಸಬೇಕು ಎಂದು ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷರು ಹಳ್ಳಿಕೆರೆ ಹುಂಡಿ ಭಾಗ್ಯರಾಜ್ ಒತ್ತಾಯಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಕಬ್ಬು ಬೆಳೆಗಾರರು, ರೈತರು ಹಾಗೂ ಬಣ್ಣಾರಿ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಯ ಸಭೆಯಲ್ಲಿ ಮಾತನಾಡಿದರು.

ಕಳೆದ ವರ್ಷ ಕಬ್ಬು ಬೆಳೆಗಾರರು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ 39 ದಿನಗಳ ನಿರಂತರ ಹೋರಾಟ ಮಾಡಿ ಸರ್ಕಾರದಿಂದ 150ರೂ. ಹೆಚ್ಚುವರಿ ಹಣವನ್ನು ಪ್ರತಿ ಟನ್‌ಗೆ ಕೊಡಿಸಲು ಯಶಸ್ವಿಯಾದರು. ಆದರೆ, ಈ ಹಣವನ್ನು ಕಾರ್ಖಾನೆಯವರು ರೈತರಿಗೆ ನೀಡಿಲ್ಲ ಎಂದು ದೂರಿದರು.

ಕಾರ್ಖಾನೆಯವರು ತಕ್ಷಣ ರೈತರಿಗೆ ಬಾಕಿ ಹಣ ಪಾವತಿಸಿ ಕಾರ್ಖಾನೆ ಆರಂಭಿಸಲು ಜಿಲ್ಲಾಡಳಿತ ಅವಕಾಶ ನೀಡಬೇಕು. ವಿಪಕ್ಷ ಒಪ್ಪಂದದ ಪತ್ರವನ್ನು ಜಾರಿಗೆ ತಂದು 12 ತಿಂಗಳಿಗೆ ಕಬ್ಬನ್ನು ಕಟಾವು ಮಾಡಿಕೊಳ್ಳಬೇಕು. ಕಟಾವು ಮಾಡಲು ವಿಳಂಬ ಮಾಡಿದರೆ ಹೆಚ್ಚುವರಿ ಬಡ್ಡಿ ಹಾಗೂ ನಷ್ಟ ಪರಿಹಾರವನ್ನು ಜಿಲ್ಲಾಡಳಿತ ಕೊಡಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ನಂತರ ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ, ಜಿಲ್ಲೆಯಲ್ಲಿ ಕಬ್ಬು ಬೆಳೆಗಾರರಿಗೆ 10 ಕೋಟಿ ಬಾಕಿ ಬರಬೇಕಾಗಿರುವ ಹಣವನ್ನು ಕೊಡಿಸುವಲ್ಲಿ ರಾಜ್ಯದ ಸಕ್ಕರೆ ಆಯುಕ್ತರು ಹಾಗೂ ರಾಜ್ಯ ಸರ್ಕಾರದ ಅಡ್ವಕೇಟ್ ಜನರಲ್ ಅವರನ್ನು ಭೇಟಿ ಮಾಡಿ ಜಿಲ್ಲೆಯ ಕಬ್ಬು ಬೆಳೆಗಾರ ರೈತ ಹಿತವನ್ನು ಕಾಪಾಡುವಲ್ಲಿ ಕ್ರಮವಹಿಸುತ್ತೇನೆ ಎಂದು ಭರವಸೆ ನೀಡಿದರು.

ಸಭೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಹೊನ್ನೂರು ಬಸವಣ್ಣ ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ಹಾಲಿನ ನಾಗರಾಜು, ಮಹದೇವಸ್ವಾಮಿ, ಗೌಡಹಳ್ಳಿ ಷಡಕ್ಷರಿ, ಮಹೇಶ್, ಬಸವಣ್ಣ, ವಿಜಿ ಕುಮಾರ, ಶಿವ ಮೂರ್ತಿ, ಆಹಾರ ಇಲಾಖೆ ಉಪನಿರ್ದೇಶಕ ಯೋಗೀಶ್, ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಯ ಉಪಾಧ್ಯಕ್ಷ ಶರವಣ ಹಾಜರಿದ್ದರು.

ಇಂದು ಚಾ. ನಗರ ವಿವಿಯಲ್ಲಿ ಕ್ಯಾಂಪಸ್ ಸೆಲೆಕ್ಷನ್

ಚಾಮರಾಜನಗರ, ಆ.9– ಚಾಮರಾಜನಗರ ವಿವಿ ಹಾಗೂ ಅಜೀಂ ಪ್ರೇಮ್ ಜಿ ಫೌಂಡೇಶನ್ ವತಿಯಿಂದ ಚಾಮರಾಜನಗರ ವಿವಿ ಸುವರ್ಣ ಗಂಗೋತ್ರಿಯಲ್ಲಿ ಆ.10ರಂದು ಬೆಳಗ್ಗೆ 10.30 ರಿಂದ 11.30 ರವರೆಗೆ ಅಧ್ಯಯನ ನಡೆಸುತ್ತಿರುವ ವಿಜ್ಞಾನ ವಿಭಾಗಗಳ ವಿದ್ಯಾರ್ಥಿಗಳಿಗೆ ಅರ್ಹತಾ ಪರೀಕ್ಷೆ ನಡೆಸಲಾಗುತ್ತಿದ್ದು ಇದರಲ್ಲಿ ಉತ್ತೀರ್ಣರಾದವರಿಗೆ ಸ್ಥಳದಲ್ಲೇ ನೇರ ನೇಮಕಾತಿ (ಕ್ಯಾಂಪಸ್ ಸೆಲೆಕ್ಷನ್) ಮಾಡಿಕೊಳ್ಳಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಅಗ್ನಿ ಅವಘಡ; ಲಕ್ಷಾಂತರ ರೂ. ನಷ್ಟ



ಚಾಮರಾಜನಗರ, ಆ.9– ಅಗ್ನಿ ಅವಘಡ ಸಂಭವಿಸಿ ಲಕ್ಷಾಂತರ ರೂ. ಮೌಲ್ಯದ ರಸಗೊಬ್ಬರಗಳು ಮತ್ತು ಕಚೇರಿ ಪರಿಕರಗಳು ಸುಟ್ಟು ಭಸ್ಮವಾಗಿರುವ ಘಟನೆ ತಾಲೂಕಿನ ಹೆಬ್ಬಸೂರು ಗ್ರಾಮದಲ್ಲಿ ಮಂಗಳವಾರ ರಾತ್ರಿ ಸಂಭವಿಸಿದೆ.

ತಾಲೂಕಿನ ಹೆಬ್ಬಸೂರು ಗ್ರಾಮದಲ್ಲಿ ಹಸಿರು ರೈತ ಉತ್ಪಾದಕ ಕೇಂದ್ರವು ಕೆಲವು ವರ್ಷಗಳಿಂದ ಕಾರ್ಯನಿರ್ವಹಿಸುತ್ತ ಬಂದಿದ್ದು ಹಲವಾರು ರೈತರು ಸೇರಿ ಈ ಸೊಸೈಟಿಯನ್ನು ಸ್ಥಾಪಿಸಿಕೊಂಡು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಿಕೊಂಡು ಬರುತ್ತಿದೆ. ಜೊತೆಗೆ ರೈತರಿಗೆ ಸಬ್ಸಿಡಿ ದರದಲ್ಲಿ ಗೊಬ್ಬರ ಕೊಡುವುದು ಇದರ ಪ್ರಮುಖ ಕೆಲಸವಾಗಿತ್ತು.

ಗ್ರಾಮದ ಮುಖ್ಯ ರಸ್ತೆಯಲ್ಲಿ ಎಸ್‌ಬಿಐ ಶಾಖೆಗೆ ಹೊಂದಿಕೊಂಡಂತಿರುವ ಈ ಕಚೇರಿ ಸಹಿತ ಗೋದಾಮಿನಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಹೊತ್ತಿಕೊಂಡು ಧಗಧಗಿಸಿದೆ, ಬೆಂಕಿಯ ಒತ್ತಡಕ್ಕೆ ಗೋದಾಮಿನ ಶೆಟರ್ ಸಿಡಿದಿದೆ ಇದರ ಶಬ್ಧಕ್ಕೆ ಅಕ್ಕಪಕ್ಕದ ಮನೆಯವರು ಬಂದು ನೋಡುವಷ್ಟರಲ್ಲಿ ಬೆಂಕಿಯ ಕೆನ್ನಾಲಿಗೆ ಇಡೀ ಗೋದಾಮನ್ನೆ ಆವರಿಸಿತ್ತು. ತಕ್ಷಣ ಅಗ್ನಿ ಶಾಮಕದಳದ ಸಿಬ್ಬಂದಿಯವರಿಗೆ ತಿಳಿಸಲಾಗಿ ಅವರು ಬಂದು ಬೆಂಕಿ ಯನ್ನು ನಂದಿಸಿದ್ದಾರೆ.

ಈ ಅಗ್ನಿ ಅವಘಢದಿಂದ ಸುಮಾರು ಹದಿನಾಲ್ಕು ಲಕ್ಷದಷ್ಟು ಗೊಬ್ಬರ ಮತ್ತು ಕಂಪ್ಯೂಟರ್ ಉಪಕರಣ ನಷ್ಟವಾಗಿದೆ ಎನ್ನಲಾಗಿದೆ. ಈ ಸಂಬಂಧ ರಾಮಸಮುದ್ರ ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಅಥವಾ ಇನ್ನಾವ ಕಾರಣದಿಂದ ಅವಘಢ ಸಂಬವಿಸಿದೆ ಎಂಬುದನ್ನು ತಿಳಿಯಬೇಕಿದೆ. ಸದ್ಯ ಎಸ್‌ಬಿಐ ಬ್ಯಾಂಕ್ ಪಕ್ಕದಲ್ಲಿ ಇದ್ದು ಅದಕ್ಕೆ ಯಾವುದೇ ಹಾನಿಯಾಗಿಲ್ಲ. ಇದರಿಂದ ಬ್ಯಾಂಕ್ ಸಿಬ್ಬಂದಿ ನಿಟ್ಟುಸಿರು ಬಿಟ್ಟಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಸಸ್ಯಾಹಾರಿ ಹೋಟೆಲ್‌ಗೆ ಒಬ್ಬ ಸೂಪರ್ ವೈಸರ್, ಕ್ಯಾಶಿಯರ್ ಹಾಗೂ ಸಪ್ಲೆಯರ್, ದೋಸೆ ಹಾಕುವವರು ಬೇಕಾಗಿದ್ದಾರೆ.
9916206561

ಬೇಕಾಗಿದ್ದಾರೆ
ಮೈಸೂರಿನ ವಿಜಯನಗರ, ವಿದ್ಯಾರಣ್ಯಪುರಂ ಹಾಗೂ ಹೂಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು
ಸೆಕ್ಯೂರಿಟಿ ಗಾರ್ಡ್
SSLC/PUC, 25 to 50 Years
ಈ ಮೇಲಿನ ಹುದ್ದೆಗೆ ಅನುಭವವುಳ್ಳ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
9739199355,9844235981

WANTED
ಮೈಸೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಲು ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ.
ಸಮಯ: 9AM to 5 PM
9844184349
9844184349

MUDA APPROVED
30X40 W/F Site Rs.41 Lakhs
40x73 E/F Site Rs.94 Lakhs
Ready for Registration
Ready to Construction
Bank Loan Available Next to Vijayanagar 4th Stage,
12 KMS from City Center
9538583377

ಮನೆ ಮಾರಾಟಕ್ಕಿದೆ
30x40 ಅಳತೆಯಲ್ಲಿ ಕಟ್ಟಿರುವ 3BHK, (G+FF) ಮನೆ ಜಯದೇವನಗರ, 1ನೇ ಕ್ರಾಸ್ (ರಾಯಲ್ ಇನ್ ಹೋಟೆಲ್ ಹಿಂಭಾಗ) ಮೈಸೂರು ಇಲ್ಲಿ ಮಾರಾಟಕ್ಕಿದೆ
9916265781

ಕುಡಿತದ ಚಟದಿಂದ ಮುಕ್ತರಾಗಬೇಕೆ?
ಮೈಸೂರಿನ ಚೈತನ್ಯ ಫೌಂಡೇಷನ್ ವತಿಯಿಂದ ಆಗಸ್ಟ್ 13 ರಿಂದ ಸೆ. 2 ರವರೆಗೆ 21 ದಿನಗಳ ಕಾಲ ಉಚಿತ ಕುಡಿತ ಮತ್ತು ಮಾದಕ ವಸ್ತುಗಳ ಚಟ ಬಿಡಿಸುವ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಊಟ, ವಸತಿ, ಚಿಕಿತ್ಸಾ ಸೌಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
9164469570, 6361744190

ಮನೆ ಕೆಲಸಕ್ಕೆ ಹುಡುಗಿ ಬೇಕಾಗಿದ್ದಾರೆ
ರಾಮಾನುಜ ರಸ್ತೆ, ಅಗ್ರಹಾರ, 17ನೇ ಕ್ರಾಸ್, ಕಡ್ಡಾಯವಾಗಿ ಮನೆಯಲ್ಲೇ ಉಳಿಯಬೇಕು, ಊಟ ವಸತಿ ಇರುತ್ತದೆ ಆಕರ್ಷಕ ಸಂಬಳ
9986622769

WANTED
Wanted teaching staff for reputed institution (Experience Preferred) for all subjects. Transport facilities available. Drop your resume through WhatsApp
8971577685
9980631121

3 ಬೆಡ್‌ರೂಮ್ ಹೊಸ ಮನೆ ಮಾರಾಟಕ್ಕಿದೆ
20x30 ದಟ್ಟಗಳ್ಳಿ, ಮೈಸೂರು, ತ್ರಿವೇಣಿ ಸೂಪರ್ ಮಾರ್ಕೆಟ್ ಹತ್ತಿರ,
Price - 79 Lakhs
ಮಾಲೀಕರು ಸಂಪರ್ಕಿಸಿ:
6361295132

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್, ಸೆಕ್ಯೂರಿಟಿ ಸೂಪರ್‌ವೈಸರ್, ಅಡುಗೆ ಭಟ್ಟರು, ಅಡುಗೆ ಸಹಾಯಕರು (ಹೆಲ್ಪರ್ಸ್) ಬೇಕಾಗಿದ್ದಾರೆ.
ಸ್ಥಳ: ಮೈಸೂರು ಮತ್ತು ಬೆಂಗಳೂರು
7975079375
9880116412
9964415265

REQUIRED
Tele Callers Men & Women For Bajaj Finance Company
Any Qualification Eligible
Language- Tamil, Telugu, Malayalam and Kannada
6363567994
8105624293

ಕೆಲಸಕ್ಕೆ ಬೇಕಾಗಿದ್ದಾರೆ
ಮಗು, ವಯಸ್ಸಾದವರನ್ನು ನೋಡಿಕೊಳ್ಳಲು ಹಾಗೂ ಮನೆ ಕೆಲಸಕ್ಕೆ ಹೆಂಗಸರು ಮೈಸೂರಿನಲ್ಲಿ ಬೇಕಾಗಿದ್ದಾರೆ.
9880102700

ಸೈಟ್ ಮಾರಾಟಕ್ಕಿದೆ
30x50 ವೆಸ್ಟ್ ಫೇಸ್
ವಿಮಾನ ನಗರ ಸಹಕಾರ ನೌಕರರ ಸಂಘ ನಂಬರ್ 61
ಜೆಪಿ ನಗರ ಹತ್ತಿರ ದಡದಹಳ್ಳಿ ರೋಡ್
ಬೆಲೆ : 39,00,000/-
9900372013


ಸ್ಕೂಲ್ ಯೂನಿಫಾರಂ ಹೋಲ್‌ಸೇಲ್ ಬೆಲೆಯಲ್ಲಿ
ಷೂಗಳು ಸಾಕ್ಸ್ ಬ್ಯಾಗ್‌ಗಳು
ಭಾವಸಾರ್ ಶ್ರೀಗಣೇಶ್
ಅಗ್ರಹಾರ, ಬಸವೇಶ್ವರ ರಸ್ತೆ 5ನೇ ಕ್ರಾಸ್, ಮೈಸೂರು

ಸೈಟುಗಳು ಮಾರಾಟಕ್ಕಿವೆ ಮುಡಾ ಅಪ್ರೂವ್ಡ್
30x40 - North West, 40x60 N/F, 40x60 W/F, 58x60 North East Corner
ರಿಂಗ್ ರಸ್ತೆ ಹತ್ತಿರ, ಯೂನಿವರ್ಸಿಟಿ ಲೇಔಟ್ ಎದುರು.
30x50 E/F ATME Engineering ಕಾಲೇಜ್ ಪಕ್ಕ.
40x60 East face ವರುಣ ಹತ್ತಿರ.
Mob: 900372792

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
21–9–23: ನೇಪಾಳ್ ಮುಕ್ತಿನಾಥ್, ಪಶುಪತಿನಾಥ್.
30–9–2023: ಕಾಶಿ, ಗಯಾ, ಅಯೋಧ್ಯೆ, ಪ್ರಯಾಗ್‌ರಾಜ್.
29–8–2023: ಶಿರಡಿ, 3 ಜ್ಯೋತಿರ್ಲಿಂಗ ದರ್ಶನ.
11–9–2023: ಪುರಿ ಜಗನ್ನಾಥ್, ಕೋನಾರ್ಕ್, ಚಂದ್ರಭಾಗ್ ಬೀಚ್, ಭುವನೇಶ್ವರ್.
7–9–2023: ರಾಮೇಶ್ವರಂ, ಕನ್ಯಾಕುಮಾರಿ, ಮಧುರೈ.
9591017782, 9964527782

ತಕ್ಷಣ ಬೇಕಾಗಿದ್ದಾರೆ
ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹೊಸದಾಗಿ ತೆರೆದಿರುವ ಕಂಪನಿಯೊಂದಕ್ಕೆ 156 ವಿವಿಧ ಪೋಸ್ಟ್‌ಗಳಿಗೆ 10th, PUC, ITI, Any Degree (Pass /Fail) ಆಗಿರುವ ಉತ್ಸಾಹಿ ಯುವಕ/ ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿ+ಊಟದೊಂದಿಗೆ 14,000 ರಿಂದ 35,000/- (ESI+PF+OT)
6364103418
9164052361

MUDA APPROVED
30X40 E/F Site Rs.30 Lakhs
Ready for Registration
Ready to Construction
Bank Loan Available
Bannur Road, Mysore
12 Kms From City Center
5 Kms from Devegowda Circle
9538583377

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

ITI ಗೆ ಪ್ರವೇಶಾವಕಾಶ
ITI (Fitter - NSQF) ವೃತ್ತಿಗೆ SSLC/PUC Pass or Fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. NCVT ಭಾರತ ಸರ್ಕಾರದಿಂದ ಸಂಯೋಜನೆ ಗೊಂಡಿರುತ್ತದೆ.
BENAKA-ITI, College, Near Cauvery Circle, Dr. Rajkumar Road, Raghvendra Nagar, Mysore
9342123467
9141756695

HOUSE FOR LEASE /RENT
Newly Built 2BHK Independent House Semi Furnished with Solar @ Lalithadri Nagar Ring Road, Near Indian Oil Petrol Bunk (Behind)
9902729729

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ ವಿದ್ಯಾರ್ಹತೆ : ಕನಿಷ್ಠ ಓದು/ಬರಹ ಗೊತ್ತಿರಬೇಕು. ವೇತನ 13,448 + ESI+PF. ಮತ್ತು ಉಚಿತ ಊಟದ ವ್ಯವಸ್ಥೆ. ಅಗತ್ಯ ದಾಖಲಾತಿಗಳು : ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.
8453408502,9108100117

ನಿವೇಶನ ಮಾರಾಟಕ್ಕಿದೆ
20x30 ಹಳೇ ಮನೆ, ವಿಜಯನಗರ 4ನೇ ಹಂತ, 2ನೇ ಘಟ್ಟ, ರೂ. 55 ಲಕ್ಷ.
ಸನ್ ಸಿಟಿ ಹೋಮ್
60x40 W/F. ಒಟ್ಟು 2720 ಚದರ ಅಡಿ. ಪ್ರತಿ ಚದರ ಅಡಿಗೆ ರೂ. 1200 (ನೆಗೋಷಿಯಬಲ್). ನಾಗನಾಲ, ಮೈಸೂರು
Mob: 8553540950

100% Job
ಮೈಸೂರಿನ ಪ್ರತಿಷ್ಠಿತ ಕಂಪನಿಗಳಿಗೆ ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ helper, Packing, Checking Quality, Production Line ಗೆ ಮತ್ತು Attender Receptionist, Data Entry, Basic Office, Team Leader ಮುಂತಾದ ಹುದ್ದೆಗಳಿಗೆ 10th, PUC, ITI, Any Degree Pass/Fail ಆದವರು ಬೇಕಾಗಿದ್ದಾರೆ. ಸಂಬಳ 15,000 ರಿಂದ 39,000/- (ESI+PF+OT) ಸೇರಿ. ಷರತ್ತು ಅನ್ವಯ
9739857142
9036548905

For Consultation and Treatment
Dr. Nirmala B. (M.D.DGo)
ಹಿರಿಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು
ಕರುಣಾ ಆಸ್ಪತ್ರೆ
'ಎಂ' ಬ್ಲಾಕ್, ಕುವೆಂಪುನಗರ ಇಲ್ಲಿ ಸಲಹೆ ಮತ್ತು ಚಿಕಿತ್ಸೆಗೆ ಲಭ್ಯವಿರುತ್ತಾರೆ.
ಸಮಯ: 10 AM to 2 PM
ಸಂಜೆ 5 ರಿಂದ 7 ಗಂಟೆ
6363434782

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

ANANDA NILAYAM
Constructions & Engineering Services
Construction of residential buildings, Home Renovations & repair works, Interior works, All types of flooring, Water proofing, Masonry & plastering works, MS, SS Fabrication & roofing works, 2D plans & 3D Elevations (as per vasthu principles), Approval plans and Bank loan estimations.
Contact: Bhaskara.V, DCE, BE
Mob:9108597114
Email: 227bhaskar@gmail.com

ಬೇಕಾಗಿದ್ದಾರೆ
ಮೈಸೂರಿನ ನಜರ್‌ಬಾದ್‌ನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಪುರುಷರು/ ಮಹಿಳೆಯರು ಬೇಕಾಗಿದ್ದಾರೆ.
ಸಂಬಳ: 12,000/–
8892258814

ಕೇರಳ ಕೊಳ್ಳೇಗಾಲದ ಜ್ಯೋತಿಷ್ಯರು
INDIAN FAMOUS ASTROLOGER
Mob: 9036984793
ಪಂಡಿತ್: ಕೆ.ಎಸ್. ಪಣಿಕ್ಕರ್ (ಕೇರಳ)
ಜ್ಯೋತಿಷ್ಯ ವಿದ್ವಾನ್ ಶ್ರೀ ಶ್ರೀ ಎಸ್ ಕುಮಾರ್, (ಕೊಳ್ಳೇಗಾಲ)
ಇವರು ಕೇರಳದ ಕುಟ್ಟಿಚೇತನ್ ಕೊಳ್ಳೇಗಾಲದ ಕಳ್ಳಕೌಡಿ ಅಘೋರ ಶಕ್ತಿಯಿಂದ, ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರುದೋಷ, ಇನ್ನೂ ಯಾವುದೇ ನಿಮ್ಮ ಗುಪ್ತ ಸಮಸ್ಯೆಗಳಿಗೆ ಸ್ಥಳದಲ್ಲಿಯೇ. ಪರಿಹಾರ ತಿಳಿಸುತ್ತಾರೆ.
ಖಾಯಂ ವಿಳಾಸ: ಪಡುವಾರಹಳ್ಳಿ ಸಿಗ್ನಲ್, ಭೂದೇವಿ ಫಾರ್ಮ್ ಎದುರು, ವಿನೋಬ ರಸ್ತೆ, ಮೈಸೂರು–570006

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ತಕ್ಷಣವೇ ಬೇಕಾಗಿದ್ದಾರೆ
ಚಂದಕೇಶ ಹೇರ್ ಆಯಿಲ್ ಕಂಪನಿಯಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕ ಯುವತಿಯರು ಬೇಕಾಗಿದ್ದಾರೆ.
ಹುದ್ದೆ : ಮಾರ್ಕೆಟಿಂಗ್, ಪ್ರಮೋಟರ್ಸ್, ಟೀಮ್ ಲೀಡರ್, ಉಚಿತ ವಸತಿಯೊಂದಿಗೆ ESI & PF ಸೇರಿ ತಿಂಗಳಿಗೆ 15000 ರಿಂದ 22500
Fixed Salary ವಯೋಮಿತಿ 18 ರಿಂದ 40 ವರ್ಷ.
8105942917,7892180248

ಬರವಣಿಗೆಯ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಶೀಟ್‌ಗೆ 40 ರೂ.ಗಳನ್ನು ಪಡೆಯಿರಿ.
9731891409
ಮೈಸೂರು ಅಗ್ರಹಾರ.
9449774835
ಚಾಮರಾಜನಗರ

WANTED
SERVICE ENGINEER
B.E /Diploma / ITI / Mechanical
Kent RO Water purifier Authorised Service Center/Home Appliances
Telecaller / Office Work -Female
9900237315
9845963421

TNI TECHNOLOGIES
BOGADI, MYSORE-570026.
TRAINING + JOB
OFFICE ESSENTIALS
TALLY With GST
C, C++, JAVA, PYTHON
NEET/CET/IIT-JEE
PCMB STUDY MATERIAL
From
EXCEL ACADAMICS
Bengaluru
8951208347

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ಎಲ್ಲಾ ವಯಸ್ಸಿನ ಎಲ್ಲಾ ವಿದ್ಯಾವಂತ ವಧುವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಪ್ರತಿದಿನ ವಧುವರರ ನೇರ ಸಂದರ್ಶನ ಇರುತ್ತದೆ.
ಡಾ. ಗುರೂಜಿ
9448229184
7899625268

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

KITCHEN INTERIORS
₹95,000/-
www.ssbuildmart.com
ISO 9001:2015 Certified Company Depot
SS Build Mart®
Talk to our Design Team
9901291267 / 9845426862

NISARGA ENTERPRISES LOAN OFFICE
MOB: 8296400433
9880436288
New Start of Business Loan Industrial Loan, Machinery Loan, Garments Loan, Business Loan, Home Loan, Home Mortgage Loan, Site Mortgage Loan, Personal Loan 12,000/- Salary above

30x30 ಅಳತೆಯ MUDA
ಖಾತೆಯುಳ್ಳ W/F ಸೈಟು ಮಾರಾಟಕ್ಕಿದೆ 22 ಲಕ್ಷದ 50 ಸಾವಿರಗಳು ಯಶಸ್ವಿನಿ ಲೇಔಟ್ ಶ್ರೀನಗರದಿಂದ 1.5 ಕಿ.ಮೀ, ದಡದಹಳ್ಳಿ ರಸ್ತೆ, ಮೈಸೂರು
N/F 20x30 KHB
ಸೈಟು ಮಾರಾಟಕ್ಕಿದೆ. ಇಲವಾಲದ ಹತ್ತಿರ 9 ಲಕ್ಷದ 50 ಸಾವಿರಗಳು. ಗುಂಗ್ರಾಲ್ ಛತ್ರದ ಹತ್ತಿರ, ಮೈಸೂರು
9742198093

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160

ಬೇಕಾಗಿದ್ದಾರೆ
ಡೋರ್‌ಸ್ಟೆಪ್ ಕಾರ್ ವಾಶ್‌ಗೆ ಕಾರ್ ವಾಶ್ ಮಾಡಲು ಹುಡುಗರು ಬೇಕಾಗಿದ್ದಾರೆ.
ಆಕರ್ಷಕ ವೇತನ,
ವಯೋಮಿತಿ 18 ರಿಂದ 28
9964799308
9900306575

MATCH MAKERS , BRIDE / GROOMS
ವಧು/ವರರ ಮದುವೆ ಮಾಡಿಸುತ್ತೇವೆ
ಎಲ್ಲಾ ಜಾತಿಯ Govt Job, Private/ ಸ್ವಂತ Factory, / ಪ್ರತಿ ಪರರು/ ಡಾಕ್ಟರ್, ಇಂಜಿನಿಯರ್ ಎಲ್ಲಾ ಡಿಗ್ರಿಗಳು ಮೊದಲನೇ ಮದುವೆ, ಡೈವೋರ್ಸಿಗಳು, ವಿಧವೆಯರು, ವಿಧುರರು/ಸ್ವತಂತ್ರರು. Single Person Up to 65 Years ಮದುವೆಗೆ Life Partnerಗಾಗಿ ಕರ್ನಾಟಕಾದ್ಯಂತ ಇರುವ ಲಕ್ಷಾಂತರ ವಧು/ವರರಲ್ಲಿ ಉತ್ತಮ ಆಯ್ಕೆಗೆ ನೇರ ಭೇಟಿ ನೀಡಿ ಉದ್ಯೋಗ/ವಸತಿ/ ಬಡವರ ವಧುಗಳಿಗೆ ಉಚಿತ
7975728012

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM® 10yrs WARRANTY
ISO 9001:2015 Certified Depot
CALL 99012 91267
98454 26862

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

VACANCY
for Below Designation at Reputed Hotel in Mysore.
1. Cashier, 2) Receptionist 3) House Keeping or Room Cleaning.
8217737552

ಸೈಟು & ಮನೆ ಮಾರಾಟಕ್ಕಿದೆ
20x30 NF, 26x36 SF x EST
ಸೈಟು ಮಾರಾಟಕ್ಕಿದೆ
20x30 NF, 30x50 N/F
30x50 NFxEST
7026429368
9844668348

WANTED
Site Engineer
3 to 6 Years Experience
resumewanted2023@gmail.com
9972825343

ಮಹಾಲಕ್ಷ್ಮಿ ಮ್ಯಾರೇಜ್ ಬ್ಯೂರೋ
9110684495,7760817374
1) 29 ವರ್ಷ ಒಕ್ಕಲಿಗ ವಧುವಿಗೆ ವರ ಬೇಕಾಗಿದೆ. BE., M.Tech,
2) 32 ವರ್ಷ ಒಕ್ಕಲಿಗ ವರನಿಗೆ ವಧು ಬೇಕಾಗಿದೆ. BE
3) 27 ವರ್ಷ ಒಕ್ಕಲಿಗ ವರನಿಗೆ ವಧು ಬೇಕಾಗಿದೆ MBA., MS, Canada
4) 36 ವರ್ಷ ಒಕ್ಕಲಿಗ ವಧುವಿಗೆ ವರ ಬೇಕಾಗಿದೆ MBA, HR
5) 34 ವರ್ಷ ಒಕ್ಕಲಿಗ ವರನಿಗೆ ವಧು ಬೇಕಾಗಿದೆ. BSc
6) 30 ವರ್ಷ ಕುರುಬ ವರನಿಗೆ ವಧು ಬೇಕಾಗಿದೆ MCA

ಬೇಕಾಗಿದ್ದಾರೆ
ಮೈಸೂರಿನಲ್ಲಿ ಕಾರ್ಯ ನಿರ್ವಹಿಸಲು ಅನುಭವವುಳ್ಳ ಮತ್ತು ವಿದ್ಯಾವಂತ ಸೆಕ್ಯೂರಿಟಿ ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ.
7259389106

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
87490 98879

WANTED
Ladies For Cyber Centre (CSC- Digital Seva Kendra) Work Experience in Govt on Line Applications for 1 year.
Shivarampet Mysore
9611452911
9620385464

ಪ್ರಮಾಣ ಪತ್ರ
ರೇಖಾ ಹೆಗಡೆ ಆದ ನಾನು # 2091, 7ನೇ ಕ್ರಾಸ್, 1ನೇ ಮೇನ್, ಕೆ.ಬ್ಲಾಕ್ ಕುವೆಂಪುನಗರ – 23, ನಿವಾಸಿಯಾಗಿದ್ದು ನನ್ನ ಆಧಾರ್ ಕಾರ್ಡ್ ಹಾಗೂ ಶಾಲಾ ದಾಖಲೆಗಳಲ್ಲಿ ನನ್ನ ಹೆಸರು ರೇಖಾ ಹೆಗಡೆ ಎಂದು ನಮೂದಾಗಿದ್ದು, ನನ್ನ ಪಾಸ್‌ಪೋರ್ಟ್‌ನಲ್ಲಿ ರೇಖಾ ನಾರಾಯಣ್ ಎಂದು ನಮೂದಾಗಿರುತ್ತದೆ ಈ ಎರಡೂ ಹೆಸರು ನನ್ನದೇ ಆಗಿದೆಯೆಂದು ನೋಟರಿ ಎಸ್.ವಿ. ನಾಗೇಂದ್ರ ಅವರ ಸಮ್ಮುಖದಲ್ಲಿ ಪ್ರಮಾಣೀಕರಿಸುತ್ತೇನೆ.

ನೇಗಿಲಯೋಗಿ ಮರುಳೇಶ್ವರ ಒಕ್ಕಲಿಗ ವಧು–ವರರ ಮಾಹಿತಿ ಕೇಂದ್ರ
12ನೇ ಒಕ್ಕಲಿಗ ವಧು–ವರರ ಸಮಾವೇಶ
ದಿ: 13–08–2023, ಭಾನುವಾರ, ಸಮಯ: ಬೆಳಗ್ಗೆ 9 ಗಂಟೆಗೆ ಸ್ಥಳ: ನೇಗಿಲಯೋಗಿ ಮರುಳೇಶ್ವರ ಸೇವಾ ಭವನ, ಹೊಸ ನ್ಯಾಯಾಲಯದ ಎದುರು, ಜಯನಗರ, ಕೆ.ಜಿ.ಕೊಪ್ಪಲು, ಮೈಸೂರು–14
ವಿವರಗಳಿಗೆ ಸಂಪರ್ಕಿಸಿ ಮೊ:
9483453005,9900629393
9448392488,9113201893

ಬಾಡಿಗೆಗೆ ಇದೆ
ಆಫೀಸ್ ಉಪಯೋಗಕ್ಕೆ 10x10 ಅಡಿ ಅಳತೆಯ (ಮೊದಲನೇ ಅಂತಸ್ತಿನಲ್ಲಿ) ಎನ್.ಎಸ್.ರಸ್ತೆ ಶಾಂತಲ ಚಿತ್ರಮಂದಿರದ ಬಳಿ
9448600935

FLAT FOR SALE/RENT
3 BHK NEW Flat for Sale on 3rd Floor, 1680 sqft, Furnished Flat, Price - 1.28Cr
3 BHK Flat for Rent, N/F, 1650 sqft, FF for rent Rent - 32 K at Jayalakshmipuram, Mysuru
8660105902

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಂತೂರ್ ನಾಲ್ವರ ದೈವ, ಕಲ್ಲುಟ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಂತೂರ ನಾಲ್ವರ ದೈವ ಚೌಡಿ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕೇಸ್, ಹಣಕಾಸಿನ ತೊಂದರೆ, ವ್ಯಾಪಾರ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

HOUSE FOR RENT
GOKULAM
DOUBLE BED ROOM, 1st FLOOR
RENT 12000/-
9900237315

ಡಿ.ಟಿ.ಪಿ. ಆಪರೇಟರ್ ಬೇಕಾಗಿದ್ದಾರೆ
ಪೇಜ್ ಮೇಕರ್, ಕೋರಲ್‌ಡ್ರಾ, ಫೋಟೋ ಶಾಪ್ ಅನುಭವವುಳ್ಳವರು ಬೇಕಾಗಿದ್ದಾರೆ.
9448434619
9535736990

ಬಾಡಿಗೆಗೆ
ಕುವೆಂಪುನಗರದ ವಿಶ್ವಮಾನವ ಜೋಡಿ ರಸ್ತೆಯ ಬಳಿ ಫರ್ನಿಚರ್‌ನೊಂದಿಗೆ ಸುಸಜ್ಜಿತವಾದ ಅಟ್ಯಾಚ್ಡ್ ಬಾತ್‌ರೂಮ್‌ಗಳನ್ನು ಹೊಂದಿರುವ 10 ರೂಮುಗಳು ಬಾಡಿಗೆಗೆ ದೊರೆಯುತ್ತದೆ.
9620607138
8105751169

ಸುವರ್ಣ ಯಾತ್ರ
1) ಕಾಶಿ ಪ್ರವಾಸ 2 ಜ್ಯೋತಿರ್ಲಿಂಗ ಸೇರಿ 7 ದಿನಗಳು 30–08–2023 (ಗಯಾ, ಬುದ್ಧಗಯಾ, ಪ್ರಯಾಗ್‌ರಾಜ್, ಅಯೋಧ್ಯ, ನೈಮಿಶಾರಣ್ಯ)
2) ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ 9 ದಿನಗಳು 08–09–2023 (ಸೋನಾಲಿ, ಲುಂಬಿನಿ, ಮುಕ್ತಿನಾಥ, ಪೋಕ್ರಾ, ಕಠ್ಮಂಡು, ಮನೋಕಾಮನ)
9008381022
9019462508

ತಕ್ಷಣ ಬೇಕಾಗಿದ್ದಾರೆ
ಬೋಗಾದಿ ರಿಂಗ್ ರೋಡ್ ಏರಿಯಾದ ಹೆಸರಾಂತ ಕಾಲೇಜಿಗೆ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ಸಂಬಳ : 14000/-,
ESI & PF ಸೌಲಭ್ಯವಿದೆ
9620777819
9620667819

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:- ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಬೇಕಾಗಿದ್ದಾರೆ
ಮೈಸೂರಿನ ಕುವೆಂಪುನಗರದಲ್ಲಿರುವ AW Group of Company ಗೆ 225 ಗ್ರಾಮೀಣ+ ನಗರದ ಅಭ್ಯರ್ಥಿಗಳನ್ನು ನೇರ ಸಂದರ್ಶನದೊಂದಿಗೆ ನೇರ ಆಯ್ಕೆ ಮಾಡಿಕೊಳ್ಳಲಾಗುತ್ತಿದೆ.
ವಿದ್ಯಾರ್ಹತೆ : SSLC, PUC, ITI, Any Degree Diploma Etc. ವಯೋಮಿತಿ : 18 to 31 Years ತಿಂಗಳಿಗೆ 19000–25000 (ಉಚಿತ ಊಟ+ವಸತಿ)
9900163228,7349699460

SITE FOR SALE
40X50 N/F Bogadi SBM
30x40 W/F Bogadhi Ring Road, 40x60 Vijayanagar 4th Stage.
60 Ft Road Commercial
9844865607

ಟೆಲಿಕಾಲಿಂಗ್ ಮತ್ತು ಆಫೀಸ್ ವರ್ಕ್ ಮಾಡಲು
ಹುಡುಗಿಯರು ಬೇಕಾಗಿದ್ದಾರೆ.
SSLC & PUC Any Degree
ಸಂಬಳ: 9000/-
ಸ್ಥಳ: ಜಗನ್‌ಮೋಹನ್ ಪ್ಯಾಲೇಸ್ ಹತ್ತಿರ, ಮೈಸೂರು
7795680949

ಹೋಂ ನರ್ಸ್
ವೃದ್ಧರನ್ನು ಮತ್ತು ಹಾಸಿಗೆ ಹಿಡಿದ ರೋಗಿಗಳನ್ನು ಅವರ ಮನೆಯಲ್ಲಿಯೇ ಉಳಿದುಕೊಂಡು ಆರೈಕೆ ಮಾಡುವ ಅನುಭವವಿರುವ ಹೋಂ ನರ್ಸ್ ಲಭ್ಯವಿದ್ದಾರೆ.
8861042384

ಹಳೇಮನೆ / ಸೈಟ್ ಬೇಕಾಗಿದೆ
30x40 ಈಸ್ಟ್ ದಿಕ್ಕಿನ ಹಳೇಮನೆ /ಸೈಟ್ ಬೇಕಾಗಿದೆ ಕೆಸರೆ 3ನೇ ಹಂತ ನಾಯ್ಡು ನಗರದಲ್ಲಿ
9686119686

ತಕ್ಷಣ ಬೇಕಾಗಿದ್ದಾರೆ
ಯಾದವಗಿರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC & ಮೇಲ್ಪಟ್ಟು,
ಸಂಬಳ: 16000 +W/o
ESI & PF ಸೌಲಭ್ಯವಿರುತ್ತದೆ.
9880727819
9620667819

ಕೆಲಸಕ್ಕೆ ಬೇಕಾಗಿದ್ದಾರೆ
ಟಿ.ನರಸೀಪುರದ ಐದು ಮಹಡಿಯ ಫ್ಯಾಮಿಲಿ ಶೋರೂಮ್ ಶ್ರೀ ಮಹದೇಶ್ವರ ಸಿಲ್ಕ್ಸ್ ಅಂಡ್ ರೆಡಿಮೇಡ್‌ಗೆ ಸೇಲ್ಸ್‌ಮನ್ ಸೇಲ್ಸ್‌ಗರ್ಲ್ಸ್ ಹಾಗೂ ಎಕ್ಸೆಲ್ Tally ಯಲ್ಲಿ ಅನುಭವ ಇರುವ ಅಕೌಂಟೆಂಟ್ ಹಾಗೂ ಬಿಲ್ಲಿಂಗ್ ಹುಡುಗರು ಹುಡುಗಿಯರು ಬೇಕಾಗಿದ್ದಾರೆ. ಸಂದರ್ಶನದ ಸ್ಥಳ ಮಹದೇಶ್ವರ ಕಲ್ಯಾಣ ಮಂಟಪ ಟಿನರಸೀಪುರ ಪೆಟ್ರೋಲ್ ಬಂಕ್ ಎದುರು.
7676685839,9663015447

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಂರುರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಸಂಬಳ: 12000 ರಿಂದ 18000 (ಉಚಿತ ಊಟ ವಸತಿ ಇರುತ್ತದೆ)
8050699742

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಲ್ಲಿ ವಯಸ್ಸಾದ ವೃದ್ಧರನ್ನು ಆರೈಕೆ ಮಾಡಲು ಅನುಭವವಿರುವ/ ಇಲ್ಲದಿರುವ ಮಹಿಳೆಯರು ಹೋಂಕೇರ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಸಂಬಳ, ಊಟ, ವಸತಿಯೊಂದಿಗೆ ವೇತನ ರೂ. 10,000/– ರಿಂದ ರೂ.15000/–ರವರೆಗೆ (ಆಧಾರ್ ಕಾರ್ಡ್, ಫೋಟೋ ಕಡ್ಡಾಯ) ಸಂಪರ್ಕಿಸಿ
8867121917

ಹುಣಸೂರಿನವರಿಗೆ...
ಕನಸು ನಿಮ್ಮದು ನನಸು ನಮ್ಮದು ಹೊಸ ಮನೆ ಕಟ್ಟಿಬೇಕೆ ಚಿಂತೆ ಬೇಡ, Loan ಮಾಡಿಸಿ ಪ್ರಾರಂಭ 25% ನಾವೇ ಹಾಕಿ 3D Plan ಸಹಿತ ಉತ್ತಮ ಗುಣಮಟ್ಟದ ಮನೆ ಮಾಡಿಕೊಡುತ್ತೇವೆ.
S K Construction
9844239850

HOTEL FOR LEASE/SALE
65 Sites Well Accomadate Located in Good Area, Mysore
9535601201

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೂರನೇ ಪುಟದಿಂದ

ಪಿಐಎಲ್ ವಜಾ

ಬಂದಿತ್ತು. ಈ ಕಾರಣದಿಂದ ದೇವರಾಜ ಮಾರುಕಟ್ಟೆಯ ಕೆಲವು ಭಾಗ ಶಿಥಿಲಾವಸ್ಥೆ ತಲುಪಿದೆ. ಸೂಕ್ತ ನಿರ್ವಹಣೆ ಇಲ್ಲದೆ ಮಳೆ ನೀರಿನ ಪ್ರಮಾಣದಿಂದ 2016ರಲ್ಲಿ ದೇವರಾಜ ಮಾರುಕಟ್ಟೆಯ ಉತ್ತರ ದ್ವಾರದ ಬಳಿ ಕುಸಿದು ಬಿದ್ದಿತ್ತು. ಇದಕ್ಕೂ ಹಿಂದೆ 1981ರಲ್ಲಿ 150 ಮಳಿಗೆ, 1990ರಲ್ಲಿ 175 ಮಳಿಗೆ ಹಾಗೂ 1990ರಲ್ಲಿ 30 ಮಳಿಗೆಗಳು ಬೆಂಕಿಗಾಹುತಿಯಾಗಿದ್ದವು. ದೇವರಾಜ ಮಾರುಕಟ್ಟೆಯ ಉತ್ತರ ದ್ವಾರ ಕುಸಿದು ಬಿದ್ದ ನಂತರ ಸರ್ಕಾರ ಇತ್ತ ಕಣ್ಣು ತೆರೆದು, ದೇವರಾಜ ಮಾರುಕಟ್ಟೆ ಸಂರಕ್ಷಿಸಬಹುದೇ ಇಲ್ಲವೇ ನೆಲಸಮಗೊಳಿಸಿ, ಹೊಸದಾಗಿ ನಿರ್ಮಾಣ ಮಾಡಬೇಕೇ ಎಂಬ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡುವಂತೆ ಮೈಸೂರಿನ ಎಸ್‌ಜೆಸಿಇ ತಜ್ಞ ಇಂಜಿನಿಯರ್ ಡಾ.ಸೈಯದ್ ಶಕೀಬ್ ಉರ್ ರೆಹಮಾನ್ ನೇತೃತ್ವದಲ್ಲಿ ಸರ್ಕಾರ ತಜ್ಞರ ಸಮಿತಿ ರಚಿಸಿತ್ತು.

ನೂರು ವರ್ಷ ಪೂರೈಸಿರುವ, ಈಗ ಶಿಥಿಲಾವಸ್ಥೆಯಲ್ಲಿರುವ ದೇವರಾಜ ಮಾರುಕಟ್ಟೆಯನ್ನು ನವೀಕರಣಗೊಳಿಸಲು ಸಾಧ್ಯವಿಲ್ಲ. ಇದನ್ನು ನೆಲಸಮಗೊಳಿಸಿ ಹೊಸ ಕಟ್ಟಡ ಕಟ್ಟುವುದು ಬಿಟ್ಟು ಬೇರೆ ಮಾರ್ಗವಿಲ್ಲ ಎಂದು ಡಾ.ಸೈಯದ್ ಶಕೀಬ್ ಉರ್ ರೆಹಮಾನ್ ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು. ತಜ್ಞರ ವರದಿ ಆಧರಿಸಿ ಸರ್ಕಾರ ದೇವರಾಜ ಮಾರುಕಟ್ಟೆಯನ್ನು ನೆಲಸಮ ಮಾಡಿ ಹೊಸದಾಗಿ ಮಾರುಕಟ್ಟೆ ಕಟ್ಟಡ ನಿರ್ಮಾಣ ಮಾಡುವ ತೀರ್ಮಾನಕ್ಕೆ ಬಂದಿತು. ಆ ವೇಳೆ ಮೈಸೂರಿನ ಪಾರಂಪರಿಕ ಸ್ಮಾರಕ ಹಾಗೂ ನಿರ್ಮಾಣಗಳ ಪ್ರಿಯ ನಾಗರಿಕರಾದ ರಾಜಾಚಂದ್ರ, ಪ್ರೊ. ಸಿ.ಜಯದೇವರಾಜೇ ಅರಸ್, ಗೌರಿ ಸತ್ಯ, ಯಶಸ್ವಿನಿ ಶರ್ಮ ಹಾಗೂ ನಿರಂಜನ್ ನಿಕ್ಕಂ, ದೇವರಾಜ ಮಾರುಕಟ್ಟೆ ನೆಲಸಮ ಮಾಡದಂತೆ ಹೈಕೋರ್ಟ್‌ನಲ್ಲಿ 2020ರಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಿದ್ದರು.

ಸಂರಕ್ಷಣೆಗೆ ಆದ್ಯತೆ: ಮೈಸೂರಿನ ದೇವರಾಜ ಮಾರುಕಟ್ಟೆಯನ್ನು ರಾಜರ ಕಾಲದಲ್ಲಿ ಪಾರಂಪರಿಕ ಶೈಲಿಯಲ್ಲಿ ನಿರ್ಮಾಣ ಮಾಡಲಾಗಿದೆ. ಮೈಸೂರಿನ ಪಾರಂಪರಿಕತೆ ಉಳಿಸಲು ಮಾರುಕಟ್ಟೆ ಕಟ್ಟಡ ಸಂರಕ್ಷಿಸುವುದು ಅವಶ್ಯ. ಈ ಹಿಂದೆ ರಾಜರ ಕಾಲದಲ್ಲಿ ವೈಜ್ಞಾನಿಕವಾಗಿ ಹೇಗೆ ಈ ಕಟ್ಟಡ ನಿರ್ಮಾಣ ಮಾಡಲಾಗಿದೆಯೋ ಅದೇ ವೈಜ್ಞಾನಿಕ ರೀತಿಯಲ್ಲಿ ನವೀಕರಣ ಮಾಡಬಹುದು. ಈ ಕಾರಣದಿಂದ ದೇವರಾಜ ಮಾರುಕಟ್ಟೆಯನ್ನು ನೆಲಸಮ ಮಾಡಬಾರದು ಎಂದು ಪಾರಂಪರಿಕ ಪ್ರಿಯರು ವಾದಿಸಿದ್ದರು. ಈ ಹಿನ್ನೆಲೆಯಲ್ಲಿ ದೇವರಾಜ ಮಾರುಕಟ್ಟೆಯನ್ನು ನೆಲಸಮ ಗೊಳಿಸುವ ಸರ್ಕಾರದ ತೀರ್ಮಾನಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿತು. ತರುವಾಯ ನಡೆದ ವಿಚಾರಣೆ ಸಮಯದಲ್ಲಿ ದೇವರಾಜ ಮಾರುಕಟ್ಟೆ ನೆಲಸಮ ಮಾಡದೆ ಅನ್ಯ ಮಾರ್ಗವಿಲ್ಲ ಎಂದು ಸರ್ಕಾರ ಹೈಕೋರ್ಟ್‌ನಲ್ಲಿ ವಾದ ಮಾಡುತ್ತಾ ಬಂದಿತು. ಜೊತೆಗೆ ಡಾ.ಸೈಯದ್ ಶಕೀಬ್ ಉರ್ ರೆಹಮಾನ್ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಿತ್ತು.

ಪಾಲಿಕೆ ವಾದ: ಮೈಸೂರು ನಗರ ಪಾಲಿಕೆ ಪರವಾಗಿ ವಾದ ಮಂಡಿಸಿದ ವಕೀಲೆ ಗೀತಾ, ರಾಜರ ಕಾಲದಲ್ಲಿ ನಿರ್ಮಾಣವಾಗಿರುವ ದೇವರಾಜ ಮಾರುಕಟ್ಟೆಯನ್ನು ವೈಜ್ಞಾನಿಕ ರೀತಿಯಲ್ಲಿ ನವೀಕರಣ ಮಾಡಲು ಈಗ ತಜ್ಞ ಕೆಲಸಗಾರರು ಇಲ್ಲ. ಈ ಕಾರಣದಿಂದ ನೆಲಸಮ ಮಾಡಿ ಹೊಸದಾಗಿ ಕಟ್ಟಡ ನಿರ್ಮಾಣ ಬಿಟ್ಟು ಅನ್ಯ ಮಾರ್ಗವಿಲ್ಲ ಎಂದು ಹೈಕೋರ್ಟ್‌ಗೆ ಸರ್ಕಾರದ ಪರವಾಗಿ ಅಫಿಡವಿಟ್ ಸಲ್ಲಿಸಿ, ವಾದ ಮಂಡಿಸಿದ್ದರು. ಇದೇ ವೇಳೆ ಪಾರಂಪರಿಕ ಪ್ರಿಯರು ಕೂಡ ಹೈಕೋರ್ಟ್‌ಗೆ ಖಾಸಗಿ ತಜ್ಞರ ವರದಿ ಸಲ್ಲಿಸಿದ್ದರು. ಮೈಸೂರಿನ ಕುಕ್ಕರಹಳ್ಳಿಕೆರೆ ಬಳಿ ಇರುವ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಸೆಂಟರ್ ಫಾರ್ ಫಿಲಾಸಫಿ ಪಾರಂಪರಿಕ ಕಟ್ಟಡ ಕೂಡ ಶಿಥಿಲಾವಸ್ಥೆಯಲ್ಲಿತ್ತು. ಮೈಸೂರು ವಿಶ್ವ ವಿದ್ಯಾನಿಲಯ ಆ ಕಟ್ಟಡ ನವೀಕರಿಸಿ ಸಂರಕ್ಷಿಸಿದೆ. ಅದೇ ರೀತಿ ದೇವರಾಜ ಮಾರುಕಟ್ಟೆಯನ್ನು ನವೀಕರಿಸಬಹುದು. ಈ ಮೂಲಕ ಮೈಸೂರಿನ ಪಾರಂಪರಿಕತೆ ಸಂರಕ್ಷಿಸಬೇಕು ಎಂದು ಬೆಂಗಳೂರಿನ ಬಿಎಂಎಸ್ ಕಾಲೇಜಿನ ತಜ್ಞ ಇಂಜಿನಿಯರ್‌ಗಳು ನೀಡಿದ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಿದರು. ಇದೇ ವರದಿ ಆಧರಿಸಿ, ಹಲವು ಅಂಶಗಳ ದಾಖಲೆ ಮುಂದಿಟ್ಟು ಪಾರಂಪರಿಕ ಪ್ರಿಯರ ವಕೀಲರಾದ ಡಾ.ಆದಿತ್ಯ ಸೊಂದಿ ಹಾಗೂ ನಿಧಿ ಶ್ರೀ ವೇಣುಗೋಪಾಲ್ ಹೈಕೋರ್ಟ್‌ನಲ್ಲಿ ವಾದ ಮಂಡಿಸಿದ್ದರು. ಸರ್ಕಾರದ ವಾದ ಹಾಗೂ ಪಾರಂಪರಿಕ ಪ್ರಿಯರ ಪ್ರತಿವಾದ ಆಲಿಸಿದ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಪ್ರಸನ್ನ ಬಿ.ವರಾಳೆ ನೇತೃತ್ವದ ವಿಭಾಗೀಯ ಪೀಠ, ದೇವರಾಜ ಮಾರುಕಟ್ಟೆ ನೆಲಸಮ ಮಾಡದಂತೆ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಮೊಕದ್ದೆಯನ್ನು ಮಂಗಳವಾರ ವಜಾ ಮಾಡಿದೆ. ಇದರಿಂದ ಪಾರಂಪರಿಕ ಶೈಲಿಯ ದೇವರಾಜ ಮಾರುಕಟ್ಟೆಯನ್ನು ನೆಲಸಮ ಮಾಡಿ ಹೊಸದಾಗಿ ಮಾರುಕಟ್ಟೆ ಸಂಕೀರ್ಣ ನಿರ್ಮಾಣ ಮಾಡುವ ಸರ್ಕಾರದ ತೀರ್ಮಾನಕ್ಕೆ ಜಯ ಸಿಕ್ಕಂತಾಗಿದೆ.

“ ದೇವರಾಜ ಮಾರುಕಟ್ಟೆಯನ್ನು ನೆಲಸಮ ಮಾಡದಂತೆ ತಾವು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಕೋರ್ಟ್ ವಜಾ ಮಾಡಿದೆ. ಪಾರಂಪರಿಕ ಶೈಲಿಯ ದೇವರಾಜ ಮಾರುಕಟ್ಟೆಯನ್ನು ಸಂರಕ್ಷಿಸಿ ಮೈಸೂರಿನ ಪಾರಂಪರಿಕತೆ ಉಳಿಸುವ ನಮ್ಮ ನಿಲುವಿಗೆ ತದ್ವಿರುದ್ಧ ತೀರ್ಪು ಬಂದಿದೆ. ಆದರೆ ಇಷ್ಟಕ್ಕೆ ನಮ್ಮ ಹೋರಾಟ ನಿಲ್ಲುವುದಿಲ್ಲ. ಹೈಕೋರ್ಟ್ ತೀರ್ಪು ಪ್ರಶ್ನಿಸಿ ಸುಪ್ರಿಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುತ್ತೇವೆ. ತೀರ್ಪಿನ ಪ್ರತಿ ದೊರೆತ ಮೇಲೆ ನಮ್ಮ ವಕೀಲರ ಜೊತೆ ಸಮಾಲೋಚನೆ ನಡೆಸುತ್ತೇವೆ. ತರುವಾಯ ಮುಂದಿನ ಕಾನೂನು ಹೋರಾಟ ಮುಂದುವರೆಸುತ್ತೇವೆ. ಮೈಸೂರಿನ ಪಾರಂಪರಿಕತೆ ಉಳಿಸಲು ಸುಪ್ರಿಂಕೋರ್ಟ್‌ಗೆ ಹೋಗದೆ ನಮಗೆ ಅನ್ಯ ಮಾರ್ಗವಿಲ್ಲ. ಈ ನಿಟ್ಟಿನಲ್ಲಿ ಶೀಘ್ರವೇ ಪ್ರಕ್ರಿಯೆ ಆರಂಭಿಸುತ್ತೇವೆ.
–ರಾಜಾಚಂದ್ರ, ಮಾರುಕಟ್ಟೆ ನೆಲಸಮ ವಿರೋಧಿಸಿ ಪಿಐಎಲ್ ಸಲ್ಲಿಸಿದ್ದವರು.

“ ದೇವರಾಜ ಮಾರುಕಟ್ಟೆ ಕಟ್ಟಡವನ್ನು ನೆಲಸಮ ಮಾಡದಂತೆ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಹೈಕೋರ್ಟ್ ವಜಾ ಮಾಡಿರುವ ತೀರ್ಪಿನ ಪ್ರತಿ ದೊರೆತ ನಂತರ ಮಾರುಕಟ್ಟೆಯ ವರ್ತಕರ ತುರ್ತು ಸಭೆ ಕರೆದು ಚರ್ಚೆ ಮಾಡುತ್ತೇವೆ. ನಮ್ಮ ವಕೀಲರ ಕಾನೂನು ಸಲಹೆ ಪಡೆದು ಮುಂದಿನ ತೀರ್ಮಾನ ಮಾಡುತ್ತೇವೆ. –ಮಹದೇವು, ಅಧ್ಯಕ್ಷರು, ದೇವರಾಜ ಮಾರುಕಟ್ಟೆ ವರ್ತಕರ ಸಂಘ

“ ಮೈಸೂರಿನ ದೇವರಾಜ ಮಾರುಕಟ್ಟೆಯನ್ನು ನೆಲಸಮಗೊಳಿಸದಂತೆ ಪಾರಂಪರಿಕ ಪ್ರಿಯರು ಸಲ್ಲಿಸಿದ್ದ ಪಿಐಎಲ್ ಅನ್ನು ಹೈಕೋರ್ಟ್ ವಜಾ ಮಾಡಿರುವ ವಿಚಾರ ನನ್ನ ಗಮನಕ್ಕೆ ಬಂದಿದೆ. ಹೈಕೋರ್ಟ್ ತೀರ್ಪಿನ ಪ್ರತಿಯನ್ನು ಪಡೆದು, ತರುವಾಯ ತೀರ್ಪಿನಲ್ಲಿ ನ್ಯಾಯಾಧೀಶರು ಏನು ಹೇಳಿದ್ದಾರೆ ಎಂದು ಅರಿಯಬೇಕು. ನಂತರ ಮುಂದೆ ಯಾವ ಕ್ರಮ ಕೈಗೊಳ್ಳಬೇಕು ಎಂದು ತೀರ್ಮಾನ ಮಾಡಲಾಗುವುದು. ಹೈಕೋರ್ಟ್ ತೀರ್ಪು ಓದದೇ ಈಗಲೇ ಯಾವ ತೀರ್ಮಾನ ಕೈಗೊಳ್ಳಲು ಸಾಧ್ಯವಿಲ್ಲ.
–ಆಶಾದ್ ಉರ್ ರೆಹಮಾನ್ ಷರೀಫ್ ಮೈಸೂರು ಪಾಲಿಕೆ ಆಯುಕ್ತ

ನವೀಕರಣ ಆರಂಭ



ಅದಕ್ಕೆ ದುರಸ್ತಿ ಅಗತ್ಯವಿದೆ ಎಂದು ಸಲಹೆ ನೀಡುತ್ತಾ ಬಂದಿದ್ದರು. ಈ ಕುರಿತು ಹಿಂದಿನ ಪಾಲಿಕೆ ಆಯುಕ್ತರು, ಮೇಯರ್‌ಗಳನ್ನು ದೊಡ್ಡ ಗಡಿಯಾರದ ಮೇಲ್ಭಾಗದವರೆಗೂ ಕರೆದೊಯ್ದು ಸ್ಥಿತಿಗತಿಗಳನ್ನು ತೋರಿಸಿ ವಿವರಿಸಿದ್ದ ಅವರು, ಜರೂರಾಗಿ ದುರಸ್ತಿ ಮಾಡದಿದ್ದರೆ ಯಾವುದೇ ಸಂದರ್ಭದಲ್ಲಿ ಧರೆಗುರುಳಬಹುದು ಎಂದು ಎಚ್ಚರಿಸಿದ್ದರು. ಆದರೂ ಇಲ್ಲಿವರೆಗೆ ಕಾಯಕಲ್ಪಕ್ಕೆ ಶುಭ ಘಳಿಗೆ ಕೂಡಿ ಬಂದಿರಲಿಲ್ಲ.

ಇದೀಗ ಪ್ರೊ. ರಂಗರಾಜು ಅವರ ಸಲಹೆ ಮತ್ತು ಒತ್ತಾಯದಿಂದಾಗಿ ಪರಿಸ್ಥಿತಿಯ ಗಂಭೀರತೆ ಅರ್ಥ ಮಾಡಿಕೊಂಡ ಮೇಯರ್ ಶಿವಕುಮಾರ್, ಪಾರಂಪರಿಕ ಇಲಾಖೆ ಅಧಿಕಾರಿಗಳಿಂದ ಡಿಪಿಆರ್ ಸಿದ್ಧಪಡಿಸಿ ದೊಡ್ಡ ಗಡಿಯಾರದ ದುರಸ್ತಿ ಮತ್ತು ಸಂರಕ್ಷಣೆಗೆ 43 ಲಕ್ಷ ರೂ. ಪಾಲಿಕೆ ಅನುದಾನದಿಂದ ಇಂದು ಕಾಮಗಾರಿಗೆ ಚಾಲನೆ ನೀಡಿದ್ದಾರೆ. ಉಪ ಮೇಯರ್ ಡಾ. ಜಿ. ರೂಪಾ, ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಪಾಲಿಕೆ ಸದಸ್ಯ ಎಂ.ಡಿ. ನಾಗರಾಜ್, ಅಭಿವೃದ್ಧಿ ಅಧಿಕಾರಿ ಸೋಮಶೇಖರ್, ಪ್ರೊ. ರಂಗರಾಜು, ಗೋಪಿನಾಥ್ ಹಾಗೂ ಇತರರು ಗುದ್ದಲಿ ಪೂಜೆ ವೇಳೆ ಉಪಸ್ಥಿತರಿದ್ದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮೇಯರ್ ಶಿವಕುಮಾರ್, ಸರ್ಕಾರಿ ಅತಿಥಿ ಗೃಹ ಉತ್ತರ ದ್ವಾರದ ಸ್ವಾಗತ ಕಮಾನು ದುರಸ್ತಿಗೆ ಪಾಲಿಕೆ ಅನುದಾನದಿಂದ 75 ಲಕ್ಷ ರೂ. ಬಿಡುಗಡೆ ಮಾಡಲಾಗಿದ್ದು, ಸದ್ಯದಲ್ಲೇ ಕಾಮಗಾರಿಗೆ ಟೆಂಡರ್ ಕರೆಯಲಾಗುವುದು ಎಂದರು.

ಅದೇ ರೀತಿ ಲಲಿತ ಮಹಲ್ ರಸ್ತೆಯ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಬಳಿಯ ಕಮಾನು ಗೇಟ್‌ನ ಎರಡೂ ಬದಿಯ ಕಂಬಗಳನ್ನು 30 ಅಡಿ ಅಗಲಕ್ಕೆ ಸ್ಥಳಾಂತರಿಸಿ ನವೀಕರಿಸಲು ಡಿಪಿಆರ್ ಸಿದ್ಧವಾಗುತ್ತಿದೆ. ಮೆಟ್ರೋಪೋಲ್ ಸರ್ಕಲ್ ಬಳಿ ಸದರ್ನ್ ಸ್ಟಾರ್ ಹೋಟೆಲ್ ಎದುರಿನ ಮಹಾರಾಣಿ ಕಾಲೇಜು ಸ್ವಾಗತ ಕಮಾನು, ಕೇಂದ್ರ ಕಾರಾಗೃಹ ಬಳಿ ಅಶೋಕ ರಸ್ತೆಯ ಎರಡೂ ಗುಮ್ಮಿ ಸ್ಮಾರಕಗಳ ದುರಸ್ತಿ ಮತ್ತು ನವೀಕರಣಕ್ಕೂ ಡಿಪಿಆರ್ ತಯಾರಾಗುತ್ತಿದೆ ಎಂದು ಮೇಯರ್ ತಿಳಿಸಿದರು.

ಮೈಸೂರಿನ ಪಾರಂಪರಿಕ ಸ್ವಾಗತ ಕಮಾನು, ಸ್ಮಾರಕಗಳನ್ನು ಸಂರಕ್ಷಿಸಲು ಮೈಸೂರು ಮಹಾ ನಗರಪಾಲಿಕೆಯು ಒಟ್ಟು 3 ಕೋಟಿ ರೂ. ಅನುದಾನ ಖರ್ಚು ಮಾಡುತ್ತಿದೆ. ಆ ಮೂಲಕ ಈ ಹಿಂದೆ ರಾಜಮಹಾರಾಜರು ನೀಡಿರುವ ಕೊಡುಗೆಗಳನ್ನು ಉಳಿಸಿ ಸಂರಕ್ಷಿಸಲಾಗುತ್ತಿದೆ ಎಂದು ಶಿವಕುಮಾರ್ ತಿಳಿಸಿದರು.

ಮುಂಬರುವ ದಸರಾ ಮಹೋತ್ಸವದ ವೇಳೆಗೆ ಎಲ್ಲಾ ಕಾಮಗಾರಿಗಳನ್ನೂ ಪೂರ್ಣಗೊಳಿಸುತ್ತೇವೆ. ಪುರಾತತ್ವ, ಸಂಗ್ರಹಾಲಯಗಳು ಹಾಗೂ ಪಾರಂಪರಿಕ ಇಲಾಖೆಯಿಂದಲೇ ಕಾಮಗಾರಿ ನಡೆಯಲಿದ್ದು, ಪ್ರೊ. ಎನ್.ಎಸ್. ರಂಗರಾಜು ಅದರ ಮೇಲ್ವಿಚಾರಣೆ ಮಾಡುತ್ತಾರೆ ಎಂದು ಅವರು ತಿಳಿಸಿದರು.

ಶತಕಂಠ ರಾವಣನ ವಧಿಸಿದ ಸೀತೆ; ತೊಗಲು ಗೊಂಬೆಯಾಟದಲ್ಲಿ ಮೂಡಿಬಂದ ‘ಅದ್ಭುತ ರಾಮಾಯಣ’





ಮೈಸೂರಿನ ಧ್ವನ್ಯಾಲೋಕದಲ್ಲಿ ಬುಧವಾರ ಅದ್ಭುತ ರಾಮಾಯಣದ ತೊಗಲುಗೊಂಬೆಯಾಟ ಪ್ರದರ್ಶನಕ್ಕೆ ಚಾಲನೆ ನೀಡಲಾಯಿತು. ಮತ್ತೊಂದು ಚಿತ್ರದಲ್ಲಿ ಗೊಂಬೆಯಾಟದ ಪ್ರದರ್ಶನ ಕಾಣಬಹುದು.

ಮೈಸೂರು,ಆ.9(ಪಿಎಂ)– ನಾರಿಯರಿಗೆಲ್ಲಾ ಕಂಠಕನಾದ ಶತಕಂಠ ರಾವಣನ ವಧೆ ಮಾಡುವ ಸೀತೆಯೇ ‘ಅದ್ಭುತ ರಾಮಾಯಣ’ದಲ್ಲಿ ಶ್ರೀರಾಮನಿಗಿಂತಲೂ ಪ್ರಧಾನ ಪಾತ್ರ ವಾಲ್ಮೀಕಿ ರಾಮಾಯಣಕ್ಕಿಂತ ವಿಭಿನ್ನ ಕಥಾಹಂದರ ಹೊಂದಿರುವ ಇಂತಹ ಈ ರಾಮಾಯಣವನ್ನು ‘ತೊಗಲುಗೊಂಬೆಯಾಟ’ ಕಲಾ ಪ್ರಕಾರದಲ್ಲಿ ಬುಧವಾರ ಪ್ರದರ್ಶಿಸಲಾಯಿತು.

ನಶಿಸುವ ಹಂತದಲ್ಲಿರುವ ಈ ಗೊಂಬೆಯಾಟಕ್ಕೆ ಪುನರುಜ್ಜೀವ ಕಲ್ಪಿಸಲು ಧಾರವಾಡದ ಪಪೆಟ್ ಹೌಸ್ ಮತ್ತು ಸಂಚಲನ ಮೈಸೂರು ರಂಗತಂಡ ಮುಂದಾಗಿವೆ. ಈ ನಿಟ್ಟಿನಲ್ಲಿ ಬುಧವಾರ ನಡೆದ ಮೊಟ್ಟ ಮೊದಲ ಪ್ರದರ್ಶನ ಯಶಸ್ವಿಯಾಯಿತು. ಪಪೆಟ್ ಹೌಸ್‌ನ ನಿರ್ದೇಶಕರೂ ಆದ ರಂಗ ನಿರ್ದೇಶಕಿ ರಜನಿ ಗರುಡ ಅವರಿಂದ ತೊಗಲುಗೊಂಬೆ ಆಡಿಸುವ ತರಬೇತಿ ಪಡೆದ ಮೈಸೂರಿನ ರಂಗಭೂಮಿಯ ಯುವ ಕಲಾವಿದರು ಮೈಸೂರಿನ ಬೋಗಾದಿ ರಸ್ತೆಯ ಧ್ವನ್ಯಾಲೋಕದಲ್ಲಿ ಪ್ರದರ್ಶನ ನೀಡಿದರು.

ಕಳೆದ 15 ದಿನಗಳಿಂದ ಇದೇ ಧ್ವನ್ಯಾಲೋಕದಲ್ಲಿ ತರಬೇತಿ ಪಡೆದ ರಂಗಭೂಮಿ ಕಲಾವಿದರಾದ ಗೌತಮ್, ಕಾವ್ಯ, ರಾಜೇಂದ್ರ, ರಾಜು ಗದಗ್, ದರ್ಶನ್ ಮತ್ತು ಶ್ರೀಕಾಂತ್ ಗೊಂಬೆಯಾಡಿಸಿ ಪ್ರದರ್ಶನವನ್ನು ಯಶಸ್ವಿಗೊಳಿಸಿದರು. ಲಂಕೆಯ ದಶಕಂಠ ರಾವಣನನ್ನು ಕೊಂದ ಶ್ರೀರಾಮನಿಗೆ ಪಾತಾಳಲೋಕದ ಶತಕಂಠ ರಾವಣನನ್ನು ಕೊಲ್ಲುವುದು ಅಸಾಧ್ಯವಾಗುವುದು ಈ ಅದ್ಭುತ ರಾಮಾಯಣ ಮುಖ್ಯ ಕಥಾವಸ್ತು. ಕೊನೆಗೆ ಸೀತೆಯೇ ಕಾಳಿ ಅವತಾರದಲ್ಲಿ ಶತಕಂಠ ರಾವಣನನ್ನು ವಧಿಸುವುದನ್ನು ಈ ಪ್ರದರ್ಶನದಲ್ಲಿ ಅದ್ಭುತವಾಗಿ ಮೂಡಿಸಲಾಯಿತು.

ಇದಕ್ಕೂ ಮುನ್ನ ಪ್ರದರ್ಶನಕ್ಕೆ ಚಾಲನೆ ನೀಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ತೊಗಲುಗೊಂಬೆಯಾಟ ಕಲೆಯು ಸಿನಿಮಾಕ್ಕೂ ಮೊದಲಿದ್ದ ಪ್ರದರ್ಶನ ಕಲೆ. ಇದೇ ರೀತಿಯಲ್ಲಿ ಸೂತ್ರದ ಗೊಂಬೆಯಾಟ ಹಾಗೂ ಯಕ್ಷಗಾನ ಗೊಂಬೆಯಾಟ ಕಲೆಗಳು ಇವೆ. ತೊಗಲುಗೊಂಬೆಯಾಟವು ಹೆಚ್ಚು ಶ್ರಮ ಹಾಗೂ ತಾಂತ್ರಿಕತೆ ಅಪೇಕ್ಷಿಸುವ ವಿಶಿಷ್ಟ ಕಲೆಯಾಗಿದೆ ಎಂದು ಹೇಳಿದರು.

ತೊಗಲಿನಿಂದ ಗೊಂಬೆಗಳನ್ನು ತಯಾರಿಸಿ ಅವುಗಳನ್ನು ವ್ಯವಸ್ಥಿತವಾಗಿ ಜೋಡಿಸಿ ಬೆಳಕು ಒದಗಿಸಿ ತೆರೆಯ ಹಿಂಬದಿಯಿಂದ ಆಡಿಸುವುದು ಈ ಕಲೆಯ ವಿಶಿಷ್ಟತೆ. ಆದರೆ ಸಿನಿಮಾ ರಂಗ ಬಂದ ಬಳಿಕ ಈ ಕಲೆಯ ವರ್ಚಸ್ಸು ಕಡಿಮೆಯಾಯಿತು. ಇಂತಹ ಕಲೆ ಉಳಿಸಿ ಬೆಳೆಸಬೇಕಿದೆ. ಈ ನಿಟ್ಟಿನಲ್ಲಿ ಕೆಲವರು ಪ್ರಯತ್ನಿಸುತ್ತಿದ್ದಾರೆ. ಬಳ್ಳಾರಿಯ ಬೆಳಗಲ್ಲು ವೀರಣ್ಣನವರು ದೊಡ್ಡ ತಂಡ ಕಟ್ಟಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ತೊಗಲುಗೊಂಬೆಯಾಟ ಪ್ರದರ್ಶನ ನೀಡಿದ್ದರು. ಅವರು ಇತ್ತೀಚೆಗೆ ಅಪಘಾತದಲ್ಲಿ ನಿಧನರಾದರು ಎಂದು ವಿಷಾದಿಸಿದರು.

ಇಲಾಖೆಯಿಂದ ಅಗತ್ಯ ಸಹಕಾರ: ಹಾಸನದ ಗುಂಡುರಾಜ್ ಅವರಲ್ಲಿಯೂ ಯುವ ಜನರು ತೊಗಲು ಗೊಂಬೆ ಆಡಿಸುವ ತರಬೇತಿ ಪಡೆಯುತ್ತಿದ್ದಾರೆ. ಕಳೆದ ಸಾಲಿನಲ್ಲಿ ನಮ್ಮ ಇಲಾಖೆ ವತಿಯಿಂದ ‘ಮೂಲ ಸಂಸ್ಕೃತಿ–ಕನ್ನಡ ಸಂಸ್ಕೃತಿ’ ಶೀರ್ಷಿಕೆಯಡಿ ರಾಜ್ಯದಲ್ಲಿ ನಶಿಸಿ ಹೋಗುತ್ತಿರುವ ಕಲೆಗಳನ್ನು ಕೇಂದ್ರೀಕರಿಸಿ ತರಬೇತಿ ನೀಡಲಾಯಿತು. ತೊಗಲು ಗೊಂಬೆಯಾಟದಲ್ಲಿ ಅದ್ಭುತ ರಾಮಾಯಣ ಪ್ರದರ್ಶಿಸುವ ಪಪೆಟ್ ಹೌಸ್, ಸಂಚಲನ ತಂಡದ ಯೋಜನೆಗೆ ನಮ್ಮ ಇಲಾಖೆಯಿಂದ ಅಗತ್ಯ ಸಹಕಾರ ನೀಡಲಾಗುವುದು ಎಂದು ಮಲ್ಲಿಕಾರ್ಜುನಸ್ವಾಮಿ ಹೇಳಿದರು. ರಜನಿ ಗರುಡ ಮಾತನಾಡಿ, ವಾಲ್ಮೀಕಿ ಶಿಷ್ಯರು ಈ ಅದ್ಭುತ ರಾಮಾಯಣ ರಚಿಸಿರಬೇಕೆಂದು ಹೇಳಲಾಗಿದೆ. ವೃತ್ತಿ ರಂಗಭೂಮಿಯ ಪ್ರಸಿದ್ಧ ನಾಟಕಕಾರ ಕಂದಲ್ ಹನುಮಂತರಾಯರು ‘ಅದ್ಭುತ ರಾಮಾಯಣ’ದ ನಾಟಕ ಬರೆದು ತಮ್ಮ ಕಂಪನಿಯಲ್ಲಿ ಪ್ರಯೋಗಿಸಿದ್ದರು. ಆದರೆ ಇದು ಹೆಚ್ಚು ಜನಪ್ರಿಯವಾಗಲಿಲ್ಲ. ಸುಮಾರು ನಾಲ್ಕು ತಾಸಿನ ಈ ನಾಟಕವನ್ನು ಪ್ರಸ್ತುತದ ತೊಗಲುಗೊಂಬೆಯಾಟದಲ್ಲಿ 1 ಗಂಟೆ 15 ನಿಮಿಷಕ್ಕೆ ಇಳಿಸಲಾಗಿದೆ ಎಂದರು. ತರಬೇತಿ ಪಡೆದ ರಂಗಭೂಮಿ ಕಲಾವಿದ ರಾಜೇಂದ್ರ ‘ಮೈಸೂರು ಮಿತ್ರ’ನೊಂದಿಗೆ ಮಾತನಾಡಿ, ಇದೇ ಮೊದಲ ಬಾರಿಗೆ ತೊಗಲುಗೊಂಬೆಯಾಟ ಕಲೆ ಪ್ರದರ್ಶನದಲ್ಲಿ ಗೊಂಬೆಗಳನ್ನು ಆಡಿಸಿದ್ದೇನೆ. ಇನ್ನೂ ಕಲಿಯುವುದಿದೆ. ವಿವಿಧೆಡೆ 15ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡುತ್ತಿದ್ದು, ಹೀಗಾಗಿ ಗೊಂಬೆಗಳನ್ನು ಆಡಿಸುವಲ್ಲಿ ಹೆಚ್ಚಿನ ಅನುಭವ ದೊರೆಯಲಿದೆ. ರಂಗದ ಮೇಲೆ ಅಭಿನಯ ಮಾಡುವುದಕ್ಕೂ ಪರದೆ ಹಿಂಭಾಗದಲ್ಲಿ ಗೊಂಬೆ ಆಡಿಸುವುದಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ಈ ಕಲೆಯ ತಂತ್ರಗಾರಿಕೆ ಅಭಿನಯಕ್ಕೂ ಸಹಾಯಕವಾಗಲಿದೆ ಎಂದು ತಿಳಿಸಿದರು.

ತರಬೇತಿ ಪಡೆದ ರಂಗಭೂಮಿ ಕಲಾವಿದೆ ಕಾವ್ಯ ಮಾತನಾಡಿ, ಪರದೆ ಹಿಂದೆ ಗೊಂಬೆಗಳನ್ನು ಆಡಿಸುವ ಮೂಲಕ ನಾವೂ ಅಭಿನಯ ಮಾಡಬೇಕು. ಗೊಂಬೆಗಳನ್ನು ದೃಶ್ಯಾವಳಿಗಳಿಗೆ ತಕ್ಕಂತೆ ಚಲನೆ ಮಾಡುವುದರಲ್ಲಿ ಹೆಚ್ಚು ಜಾಗರೂಕತೆ ಇರಬೇಕು. ನನಗೆ ಇದು ಹೊಸ ಅನುಭವ ಎಂದರು.

ಗಂಗೋತ್ರಿ ಶಿಕ್ಷಣ ಸಂಸ್ಥೆಯ ಪ್ರಾಥಮಿಕ, ಪ್ರೌಢ ಶಾಲೆಯ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ರಂಗಭೂಮಿ ಕಲಾವಿದರು ಪ್ರದರ್ಶನವನ್ನು ವೀಕ್ಷಿಸಿದರು. ನಿವೃತ್ತ ಅಧಿಕಾರಿ ಎನ್.ಆರ್.ವಿಶುಕುಮಾರ್, ರಂಗಾಯಣ ಉಪನಿರ್ದೇಶಕಿ ನಿರ್ಮಲಾ ಮಠಪತಿ, ಧ್ವನ್ಯಾಲೋಕ ನಿರ್ದೇಶಕಿ ಜಯಶ್ರೀ ಸಂಜಯ್, ಸಂಚಲನ ಮೈಸೂರು ಅಧ್ಯಕ್ಷ ದೀಪಕ್ ಮೈಸೂರು ಮತ್ತಿತರರು ಹಾಜರಿದ್ದರು.

ಆ.13ರಂದು ರಂಗಾಯಣದಲ್ಲಿ ‘ಅದ್ಭುತ ರಾಮಾಯಣ’ ತೊಗಲುಗೊಂಬೆಯಾಟ ಪ್ರದರ್ಶನ

ಮೈಸೂರು,ಆ.9(ಪಿಎಂ)– ತೊಗಲುಗೊಂಬೆಯಾಟ ಕಲಾ ಪ್ರಕಾರದಲ್ಲಿ ‘ಅದ್ಭುತ ರಾಮಾಯಣ’ ಪ್ರದರ್ಶನವನ್ನು ಆ.13ರಂದು ಮೈಸೂರು ರಂಗಾಯಣದ ಭೂಮಿಗೀತ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಸಂಚಲನ ಮೈಸೂರು ಅಧ್ಯಕ್ಷ ದೀಪಕ್ ಮೈಸೂರು ತಿಳಿಸಿದರು. ‘ಮೈಸೂರು ಮಿತ್ರ’ನೊಂದಿಗೆ ಮಾತನಾಡಿದ ಅವರು, ಅಂದು ಸಂಜೆ 6.30ಕ್ಕೆ ಪ್ರದರ್ಶನ ಆಯೋಜಿಸಲಾಗಿದೆ. ಈ ಪ್ರದರ್ಶನಕ್ಕೆ 50 ರೂ. ಟಿಕೆಟ್ ವ್ಯವಸ್ಥೆ ಇದೆ. ಅಲ್ಲದೆ, ಇದೇ ರಾಮಯಾಣದ ಪ್ರದರ್ಶನವನ್ನು ನಾಳೆ ಸುತ್ತೂರಿನಲ್ಲಿ ಮಠದ ಬಯಲು ರಂಗಮಂದಿರದಲ್ಲಿ ಸಂಜೆ 7ಕ್ಕೆ ನೀಡುತ್ತಿದ್ದೇವೆ. ಜೊತೆಗೆ ಆ.12ರಂದು ಮಂಡ್ಯದ ಸದ್ವಿದ್ಯಾ ಶಾಲೆ (ಬೆಳಗ್ಗೆ 10) ಹಾಗೂ ಶಿವಾರಗುಡ್ಡದ ನವೋದಯ (ಮಧ್ಯಾಹ್ನ 3) ಶಾಲೆಯಲ್ಲಿ ಪ್ರದರ್ಶನ ನೀಡಲಾಗುತ್ತಿದೆ ಎಂದರು.

ಮೈಸೂರು–ಚೆನ್ನೈ ರೈಲಿನಲ್ಲಿ ದುಷ್ಕರ್ಮಿಯ ಅಟ್ಟಹಾಸ
ನಂಜನಗೂಡು ಮಹಿಳೆ ಮೇಲೆ ತೀವ್ರ ಹಲ್ಲೆ

ಮೈಸೂರು, ಆ.9(ಆರ್‌ಕೆ)– ಮೈಸೂರು–ಚೆನ್ನೈ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯ ಚಿನ್ನಾಭರಣ, ನಗದು ದೋಚಲೆತ್ನಿಸಿದ ದುಷ್ಕರ್ಮಿಯೊಬ್ಬ ಅದಕ್ಕೆ ಅವರು ಪ್ರತಿರೋಧ ತೋರಿದಾಗ ಅವರ ಮೇಲೆ ಅಮಾನುಷವಾಗಿ ಹಲ್ಲೆ ನಡೆಸಿ, ತೀವ್ರವಾಗಿ ಗಾಯಗೊಳಿಸಿದ್ದಾನೆ. ಈ ಘಟನೆ ಕಳೆದ ಸೋಮವಾರ(ಆ.7) ರಾತ್ರಿ ಬೆಂಗಳೂರಿನ ಕೆಂಗೇರಿ ಬಳಿ ನಡೆದಿದೆ.



ಹಲ್ಲೆಗೊಳಗಾದ ವಿ.ಗಾಯಿತ್ರಿ

ನಂಜನಗೂಡು ನಿವಾಸಿ ಮಹೇಶ ಅವರ ಪತ್ನಿ ವಿ.ಗಾಯಿತ್ರಿ(43), ಹಲ್ಲೆಯಿಂದ ತೀವ್ರವಾಗಿ ಗಾಯಗೊಂಡಿದ್ದಾರೆ. ಚೆನ್ನೈ ಮೂಲದ ಕಂಪನಿಯೊಂದರ ಉದ್ಯೋಗಿಯಾದ ಗಾಯಿತ್ರಿ, ವ್ಯಾಜ್ಯವೊಂದರ ಸಂಬಂಧ ಕಂಪನಿ ಪರವಾಗಿ ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗಲು ಆಗಸ್ಟ್ 7ರಂದು ಮೈಸೂರು–ಚೆನ್ನೈ ಎಕ್ಸ್‌ಪ್ರೆಸ್ ರೈಲಿನಲ್ಲಿ ಚೆನ್ನೈಗೆ ಪ್ರಯಾಣಿಸುತ್ತಿದ್ದರು.

ರಿಸರ್ವೇಷನ್‌ನಲ್ಲಿ ಇ–ಟಿಕೆಟ್ ವೇಯ್ಟಿಂಗ್ ಲಿಸ್ಟ್‌ನಲ್ಲಿದ್ದರಿಂದ ಅದನ್ನು ರದ್ದುಪಡಿಸಿ, ಮುಂಗಡ ಕಾಯ್ದಿರಿಸದ ಮಹಿಳಾ ಕೋಚ್‌ನಲ್ಲಿ ಪ್ರಯಾಣಿಸುತ್ತಿದ್ದರು. ರೈಲು ಅಂದು ರಾತ್ರಿ 10.40 ರಲ್ಲಿ ರಾಮನಗರ ಬಿಡುತ್ತಿದ್ದಂತೆಯೇ ನಿಧಾನವಾಗಿ ಚಲಿಸುತ್ತಿದ್ದಾಗ ಕೋಚ್‌ಗೆ ನುಗ್ಗಿದ ದುಷ್ಕರ್ಮಿ, ಅವರಿಂದ ಹಣ ಮತ್ತು ಚಿನ್ನಾಭರಣ ಕಸಿದುಕೊಳ್ಳಲು ಯತ್ನಿಸಿದ್ದಾನೆ. ಗಾಯಿತ್ರಿ ಅವರು ತೀವ್ರ ವಿರೋಧ ವ್ಯಕ್ತಪಡಿಸಿದಾಗ ಅವರ ಮೇಲೆ ಹಲ್ಲೆ ನಡೆಸಿದ್ದಾನೆ. ಮೈಸೂರಿನಲ್ಲಿ ರೈಲು ಹೊರಡುವಾಗ ಹಲವರು ಈ ಕೋಚ್‌ನಲ್ಲಿದ್ದರು. ಮಾರ್ಗದುದ್ದಕ್ಕೂ ಅವರು ಇಳಿದುಕೊಂಡಿದ್ದರು. ರಾಮನಗರ ನಿಲ್ದಾಣ ತಲುಪುವ ವೇಳೆಗೆ ಗಾಯಿತ್ರಿ ಒಬ್ಬರೇ ಕೋಚ್‌ನಲ್ಲಿದ್ದರು.

ದುಷ್ಕರ್ಮಿ ಕೆಂಗೇರಿಯಲ್ಲಿ ರೈಲು ವೇಗ ತಗ್ಗುತ್ತಿದ್ದಂತೆ ಜಿಗಿದು ಪರಾರಿಯಾಗಿದ್ದಾನೆ. ನಾನು ನಿದ್ರೆಗೆ ಜಾರಿದ್ದರಿಂದ ಆತ ಕೋಚ್‌ಗೆ ನುಸುಳಿದ್ದು ತಿಳಿಯಲಿಲ್ಲ. ಆತ ಸರ ಕಿತ್ತುಕೊಳ್ಳಲೆತ್ನಿಸಿದಾಗಷ್ಟೇ ಎಚ್ಚರವಾಯಿತು. ನಾನು ಪ್ರತಿರೋಧ ವ್ಯಕ್ತಪಡಿಸಿದಾಗ ನನ್ನ ಮೇಲೆ ಹಲ್ಲೆ ಮಾಡಿದ ಎಂದು ಗಾಯಿತ್ರಿ ದೂರಿನಲ್ಲಿ ತಿಳಿಸಿದ್ದಾರೆ.

ಮುಂದೆ ಬೆಂಗಳೂರು ರೈಲು ನಿಲ್ದಾಣದಲ್ಲಿ ರೈಲ್ವೇ ಪೊಲೀಸರಿಗೆ ವಿಷಯ ಮುಟ್ಟಿಸಿದ ಸಂತ್ರಸ್ತೆ, ಪ್ರಯಾಣ ಮುಂದುವರೆಸಿ ಚೆನ್ನೈನಲ್ಲಿ ಕೆಲಸ ಮುಗಿಸಿ ನಿನ್ನೆ(ಆ.8) ಮೈಸೂರಿಗೆ ವಾಪಸ್ಸಾಗಿ ಪತಿ ಮಹೇಶರೊಂದಿಗೆ ಮೈಸೂರು ರೈಲ್ವೇ ಪೊಲೀಸ್ ಠಾಣೆಗೆ ಲಿಖಿತ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಮೈಸೂರು ರೈಲ್ವೇ ಪೊಲೀಸರು, ಘಟನೆ ಸಂಭವಿಸಿರುವುದು ಕೆಂಗೇರಿ ಬಳಿಯಾದ್ದರಿಂದ ಪ್ರಕರಣದ ತನಿಖೆಯನ್ನು ಬೆಂಗಳೂರು ನಗರ ರೈಲ್ವೇ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಿದ್ದಾರೆ. ಕೆಂಗೇರಿ ಬಳಿ ಗಾಯಿತ್ರಿ ಅವರಿಗೆ ಸಹಾಯ ಮಾಡಲು ರೈಲ್ವೇ ಪೊಲೀಸರಾಗಲೀ, ಆರ್‌ಪಿಎಫ್ ಸಿಬ್ಬಂದಿಗಳಾಗಲೀ ಇರಲಿಲ್ಲ ಎಂದು ಮೂಲಗಳು ತಿಳಿಸಿವೆ. ಕೆಂಗೇರಿ ರೈಲು ನಿಲ್ದಾಣದಲ್ಲಿರುವ ಸಿಸಿ ಟಿವಿ ದೃಶ್ಯಾವಳಿಗಳ ಫುಟೇಜ್‌ಗಳನ್ನು ಪಡೆದು ತನಿಖೆ ಕೈಗೊಂಡಿರುವ ಬೆಂಗಳೂರು ನಗರ ರೈಲ್ವೇ ಠಾಣೆ ಪೊಲೀಸರು ಹಲ್ಲೆ ನಡೆಸಿ ಪರಾರಿಯಾಗಿರುವ ದುಷ್ಕರ್ಮಿ ಪತ್ತೆ ಶೋಧ ನಡೆಸುತ್ತಿದ್ದಾರೆ.

ನಟ ವಿಜಯ್ ರಾಘವೇಂದ್ರರ ಪತ್ನಿ ಸ್ಪಂದನಾ ಪಂಚಭೂತಗಳಲ್ಲಿ ಲೀನ



ಬೆಂಗಳೂರು, ಆ.9– ಥೈಲ್ಯಾಂಡ್ ಪ್ರವಾಸಕ್ಕೆ ತೆರಳಿದ್ದ ವೇಳೆ ಹೃದಯಾಘಾತದಿಂದ ನಿಧನರಾದ ಸ್ಯಾಂಡಲ್‌ವುಡ್ ನಟ ವಿಜಯ್ ರಾಘವೇಂದ್ರ ಅವರ ಪತ್ನಿ ಸ್ಪಂದನಾ ಅವರ ಅಂತ್ಯ ಸಂಸ್ಕಾರವನ್ನು ಬುಧವಾರ ಬೆಂಗಳೂರಿನ ಶ್ರೀರಾಂಪುರದ ಹರಿಶ್ಚಂದ್ರಘಾಟ್‌ನಲ್ಲಿ ನೆರವೇರಿಸಲಾಯಿತು. ಇಂದು ಸಂಜೆ ಹರಿಶ್ಚಂದ್ರಘಾಟ್‌ನಲ್ಲಿ ಈಡಿಗ ಬಿಲ್ಲವ ಸಮುದಾಯದ ಸಂಪ್ರದಾಯದಂತೆ ಸ್ಪಂದನಾ ಅವರ ಅಂತ್ಯಕ್ರಿಯೆ ನಡೆದಿದ್ದು, ಪತಿ ವಿಜಯ್ ರಾಘವೇಂದ್ರ ಹಾಗೂ ಪುತ್ರ ಶೌರ್ಯ ಅವರು ಅಂತಿಮ ವಿಧಿ ವಿಧಾನಗಳನ್ನು ನೆರವೇರಿಸಿದರು. ಕುಟುಂಬಸ್ಥರು, ಹಲವು ಗಣ್ಯರು ಸ್ಪಂದನಾಗೆ ಕಣ್ಣೀರಿನ ವಿದಾಯ ಹೇಳಿದರು.

ಮಲ್ಲೇಶ್ವರಂನಿಂದ ಹರಿಶ್ಚಂದ್ರಘಾಟ್‌ವರೆಗೆ ಸ್ಪಂದನಾ ಅವರ ಪಾರ್ಥಿವ ಶರೀರದ ಮೆರವಣಿಗೆ ನಡೆಯಿತು. ಅಂತಿಮಯಾತ್ರೆಯ ವೇಳೆ ರಸ್ತೆಯುದ್ದಕ್ಕೂ ನೂರಾರು ಜನ ಸ್ಪಂದನಾ ಅವರ ಅಂತಿಮದರ್ಶನ ಪಡೆದರು. ನಿನ್ನೆ ಸರಿ ರಾತ್ರಿ ಬ್ಯಾಂಕಾಕ್‌ನಿಂದ ತರಲಾದ ಸ್ಪಂದನಾ ಅವರ ಪಾರ್ಥಿವ ಶರೀರವನ್ನು ಅವರ ತಂದೆ ಬಿ.ಕೆ.ಶಿವರಾಂ ಅವರ ಮಲ್ಲೇಶ್ವರಂ ನಿವಾಸದಲ್ಲಿ ಮಧ್ಯರಾತ್ರಿಯಿಂದಲೇ ಸಾರ್ವಜನಿಕರ ಅಂತಿಮ ದರ್ಶನಕ್ಕಿಡಲಾಯಿತು. ಇಂದು ಮಧ್ಯಾಹ್ನ 2 ಗಂಟೆವರೆಗೆ ಸಾವಿರಾರು ಜನ ಅಂತಿಮ ದರ್ಶನ ಪಡೆದು, ಕಂಬನಿ ಮಿಡಿದರು.

ಅಂತರದೃಷ್ಟಿ ಶಿಬಿರ

ಮೈಸೂರು, ಆ. 9– ಅಂತರದೃಷ್ಟಿ ಬ್ರೈನ್ ಅಕಾಡೆಮಿ, ಪರಮಹಂಸ ಯೋಗ ಮಹಾ ವಿದ್ಯಾಲಯದ ಆಶ್ರಯದಲ್ಲಿ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ 6ನೇ ಇಂದ್ರಿಯ ಜಾಗೃತಿಗೊಳಿಸುವ 14ನೇ ತಂಡದ ಅಂತರದೃಷ್ಟಿ ಶಿಬಿರವನ್ನು ಆ. 13 ರಿಂದ ಸೆ 12 ರವರೆಗೆ 6 ರಿಂದ 16 ವರ್ಷದ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿದೆ. ಉತ್ಕೃಷ್ಟವಾದ ಸಂವೇದನಾ ಶೀಲ ಕೌಶಲ್ಯಗಳು, ಅಂತರ್ ಪ್ರಜ್ಞೆ ಏಕಾಗ್ರತೆ, ಸೃಜನಶೀಲತೆ, ಆತ್ಮವಿಶ್ವಾಸ, ಭಾವನಾತ್ಮಕ ಸ್ಥಿರತೆ, ಮೆದುಳಿನ ಕ್ರಿಯಾ ಶಕ್ತಿ ವೃದ್ಧಿಸುತ್ತದೆ ಮೊ9035506790, 9008727172

1.2 ಲಕ್ಷ ಅಭ್ಯರ್ಥಿಗಳಿಂದ 62 ಲಕ್ಷ ಆಪ್ಷನ್ ಎಂಟ್ರಿ
ಯುಜಿ ಸಿಇಟಿ/ನೀಟ್: ನಾಳೆ ಅಣಕು ಸೀಟು ಹಂಚಿಕೆ ಫಲಿತಾಂಶ ಪ್ರಕಟ

ಬೆಂಗಳೂರು, ಆ.9– ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ತಮ್ಮ ಆದ್ಯತೆಯ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಆಪ್ಷನ್ ಎಂಟ್ರಿ ದಾಖಲು ಮಾಡುತ್ತಿದ್ದು, ಅದರ ಅಣಕು ಸೀಟು ಹಂಚಿಕೆ ಫಲಿತಾಂಶವನ್ನು ಇದೇ 11ರಂದು ಪ್ರಕಟಿಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ತಿಳಿಸಿದ್ದಾರೆ.

ಅವರಿಗೆ ತಮಗೆ ಎಲ್ಲಿ ಸೀಟು ಸಿಗಬಹುದು ಎಂಬುದರ ಅಂದಾಜು ಇದರಿಂದ ಗೊತ್ತಾಗಲಿದೆ. ಈ ನಡುವೆ ಇದೇ 14 ರವರೆಗೂ ಆಪ್ಷನ್ ಎಂಟ್ರಿ ಮಾಡಲು ಅವಕಾಶ ನೀಡಿದ್ದು ಆಸಕ್ತರು ತಮ್ಮ ಇಚ್ಛೆ ಪ್ರಕಾರ ಆದ್ಯತೆಗಳನ್ನು ಬದಲಿಸಿಕೊಳ್ಳಬಹುದು ಎಂದು ಹೇಳಿದರು. ಇದುವರೆಗೂ ಒಟ್ಟು 1.2 ಲಕ್ಷ ಅಭ್ಯರ್ಥಿಗಳು 62 ಲಕ್ಷ ಆಪ್ಷನ್ ಎಂಟ್ರಿಗಳನ್ನು ಮಾಡಿದ್ದು ಇದೊಂದು ದಾಖಲೆ. ಇನ್ನೂ ಕೂಡ ಕೆಲವರು ದಾಖಲು ಮಾಡುತ್ತಿದ್ದಾರೆ ಎಂದು ವಿವರಿಸಿದ್ದಾರೆ.

ಒಟ್ಟು 62 ಲಕ್ಷ ಆಪ್ಷನ್ ಎಂಟ್ರಿಗಳ ಪೈಕಿ 45 ಲಕ್ಷ ಎಂಟ್ರಿಗಳು ಎಂಜಿನಿಯರಿಂಗ್, 10 ಲಕ್ಷ ಎಂಟ್ರಿಗಳು ಮೆಡಿಕಲ್, ಕೃಷಿ ಪದವಿಗೆ 2.5 ಲಕ್ಷ, ಪಶುವೈದ್ಯಕೀಯಕ್ಕೆ 75 ಸಾವಿರ ಆಪ್ಷನ್ ಎಂಟ್ರಿಗಳನ್ನು ಮಾಡಲಾಗಿದೆ.

ಶುಲ್ಕ ಬದಲಿಸಿಕೊಳ್ಳಲು ಗಡುವು: ಖಾಸಗಿ ವೈದ್ಯಕೀಯ ಕಾಲೇಜುಗಳು ಮ್ಯಾನೇಜ್‌ಮೆಂಟ್ ಕೋಟಾದ ಸೀಟು ಶುಲ್ಕವನ್ನು ಪದೇ ಪದೆ ಬದಲಿಸುತ್ತಿದ್ದು ಇದಕ್ಕೆ ಸಾಕಷ್ಟು ವಿರೋಧ ಬಂದಿದೆ. ಹೀಗಾಗಿ ಇದೇ 12ರೊಳಗೆ ತಮ್ಮ ಕಾಲೇಜುಗಳ ಶುಲ್ಕ ಬದಲಿಸಿಕೊಳ್ಳಬೇಕು. ಅದರ ನಂತರ ಶುಲ್ಕ ಪರಿಷ್ಕರಿಸಲು ಅವಕಾಶ ನೀಡುವುದಿಲ್ಲ ಎಂದು ರಮ್ಯಾ ತಿಳಿಸಿದ್ದಾರೆ.

ರಂಗವಲ್ಲಿ ತಂಡದ ‘ರಂಗ ಸಂಭ್ರಮ’ಕ್ಕೆ ಚಾಲನೆ

ಮೈಸೂರು, ಆ.9(ಎಂಕೆ)–ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದೊಂದಿಗೆ 5 ದಿನಗಳ ರಂಗವಲ್ಲಿ ತಂಡದ ‘ರಂಗಸಂಭ್ರಮಕ್ಕೆ–2023’ಕ್ಕೆ ಹಿರಿಯ ರಂಗಕರ್ಮಿ ಮೈಮ್ ರಮೇಶ್ ಬುಧವಾರ ಚಾಲನೆ ನೀಡಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಾನಪದ ವಿದ್ವಾಂಸ ಪುರುಷೋತ್ತಮ್ ಬಿಳಿಮಲೆ ಮಾತನಾಡಿ, 19,600 ಕ್ಕೂ ಹೆಚ್ಚು ಭಾಷೆಗಳು, 4 ಸಾವಿರಕ್ಕಿಂತ ಅಧಿಕ ಸಮುದಾಯಗಳಿರುವ ಹಾಗೂ ಸುಮಾರು 24 ಕ್ಕೂ ಹೆಚ್ಚು ಪ್ರಾದೇಶಿಕ ವ್ಯತ್ಯಾಸವುಳ್ಳ ಭಾರತವು ಅನೇಕ ಬಣ್ಣಗಳಿಂದ ಕೂಡಿದ ರಂಗೋಲಿಯಾಗಿದೆ. ಈ ಬಣ್ಣಗಳಲ್ಲಿ ಯಾವ ಒಂದು ಬಣ್ಣ ನಷ್ಟವಾದರೂ ರಂಗೋಲಿ ಹಾಳಾಗಲಿದೆ. ಆದ್ದರಿಂದ ನಮ್ಮ ಜವಾಬ್ದಾರಿ ಭಾರತದ ಯಾವ ಬಣ್ಣವೂ ಹಾಳಾಗದಂತೆ ನೋಡಿಕೊಳ್ಳುವುದಾಗಿದೆ ಎಂದು ಹೇಳಿದರು.

ಭಾರತದ ಬಣ್ಣಗಳನ್ನು ಉಳಿಸುವ ಅನೇಕ ತಲೆಮಾರುಗಳ ಜೊತೆಗೆ ಇದ್ದೇವೆ ಎಂಬುದು ನಮ್ಮ ಬದುಕಿನ ಭಾಗ್ಯವಾಗಿದೆ. ಬಿ.ವಿ.ಕಾರಂತರು, ಗಿರೀಶ್ ಕಾರ್ನಾಡರು, ಲಂಕೇಶ್ ಸೇರಿದಂತೆ ಅನೇಕರು ರಂಗವಲ್ಲಿಯ ಬಣ್ಣಗಳನ್ನು ಉಳಿಸಲು ನಿರಂತರವಾಗಿ ಹೋರಾಡಿದ್ದಾರೆ ಎಂದು ಸ್ಮರಿಸಿದರು.

ಕಲೆ ನಮ್ಮನ್ನು, ಲೌಕಿಕ ಜಂಜಾಟಗಳಿಂದ ಮುಕ್ತಗೊಳಿಸಿ, ಒಂದು ಹೆಜ್ಜೆ ಮೇಲೆ ತೆಗೆದುಕೊಂಡು ಹೋಗಲು ಸಾಧ್ಯವಾದರೆ ಅದು ಸಾರ್ಥಕವಾದಂತೆ. ಸಾರ್ಥಕತೆ ಕೇವಲ ಅನುಭವವಾಗಿ ಉಳಿಯದೆ ಅನುಭಾವವಾಗಿ ಬದಲಾಗುತ್ತದೆ. ಯಾವುದೇ ಅನುಭವ ಅನುಭಾವವಾಗಿ ಬದಲಾದಾಗ ನಮ್ಮ ಹೃದಯ ನೋಡುವುದಕ್ಕಿಂತ ಹೆಚ್ಚಾಗಿ ಕಾಣುವುದಕ್ಕೆ ಶುರುಮಾಡುತ್ತದೆ. ನೋಡುವ ಮತ್ತು ಕಾಣುವುದರ ನಡುವೆ ಇರುವುದು ಜೀವನ ಮತ್ತು ಕಲೆಗಿರುವ ವ್ಯತ್ಯಾಸ ಎಂದರಲ್ಲದೆ ಸಾಹಿತ್ಯ ಕೃತಿಗಳ ಜೊತೆಗೆ ಜಾನಪದ ಕತೆಗಳಿಂದಲೂ ನಾಟಕಗಳಾಗಬೇಕು ಎಂದು ಆಶಿಸಿದರು. ರಂಗ ಸಂಭ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಹಿರಿಯ ರಂಗಕರ್ಮಿ ಮೈಮ್ ರಮೇಶ್, ರಂಗಭೂಮಿಯಲ್ಲಿ ಮಾನವೀಯತೆ, ಸಾಮಾಜಿಕ ಚಿಂತನೆ ಅಡಗಿದ್ದು, ಕಲಾವಿದರು ಒಂದೇ ಕುಟುಂಬದಂತೆ ಪರಸ್ಪರ ನೋವು–ನಲಿವುಗಳಲ್ಲಿ ಭಾಗಿಯಾಗುತ್ತಾರೆ. ಮನುಷ್ಯರನ್ನು ಮನುಷ್ಯರಂತೆಯೇ ಪ್ರೇಕ್ಷಕರ ಮುಂದೆ ತೋರುವ ರಂಗಭೂಮಿ ಮಾನವೀಯತೆಯ ನೆಲೆಗಟ್ಟಿನಲ್ಲಿದೆ ಎಂದರು.

ಸುಗಮ ಸಂಗೀತ: ಬಳಿಕ ವಿದುಷಿ ವಾಸವಿ ಹಾಗೂ ವಿದುಷಿ ಹರಿಣಾಕ್ಷಿ ಅವರಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ರಂಗಾಯಣ ಉಪ ನಿರ್ದೇಶಕಿ ನಿರ್ಮಲಾ ಮಠಪತಿ, ರಂಗವಲ್ಲಿ ಸಂಚಾಲಕ ಹೆಚ್.ಆರ್. ರವಿಪ್ರಸಾದ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಕಾಡಿನಲ್ಲಿರುವ ಆದಿವಾಸಿಗಳ ಸಮಸ್ಯೆ ಅರಿಯಲು ಹಾಡಿಗಳಲ್ಲಿ ವಾಸ್ತವ್ಯ

ವಿಶ್ವ ಬುಡಕಟ್ಟು ದಿನಾಚರಣೆಯಲ್ಲಿ ಕಾಡಿನ ಜನರ ಬಗ್ಗೆ ಕಳಕಳಿ ವ್ಯಕ್ತಪಡಿಸಿದ ಸಚಿವ ಬಿ.ನಾಗೇಂದ್ರ

ಹೆಚ್.ಡಿ. ಕೋಟೆ, ಆ.9– ರಾಜ್ಯದ ಕಟ್ಟ ಕಡೆಯ ವ್ಯಕ್ತಿಗೂ ಸಹ ಯೋಜನೆಗಳನ್ನು ತಲುಪಿಸುವ ಸಲುವಾಗಿ, ಕಾಡಿನಲ್ಲಿರುವ ಹಾಡಿಗಳಿಗೆ ಖುದ್ದಾಗಿ ಭೇಟಿ ನೀಡಿ, ಅಲ್ಲಿನ ಸ್ಥಿತಿಗತಿ ಅರಿಯಲು ಅಲ್ಲೇ ವಾಸ್ತವ್ಯ ಹೂಡಲು ಆರಂಭಿಸಿದ್ದೇನೆ ಎಂದು ಪರಿಶಿಷ್ಟ ಪಂಗಡಗಳ ಕಲ್ಯಾಣ ಮತ್ತು ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವ ಬಿ.ನಾಗೇಂದ್ರ ತಿಳಿಸಿದರು.

ತಾಲೂಕಿನ ಸೊಳ್ಳೇಪುರ ಗ್ರಾಮದಲ್ಲಿರುವ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರಿನ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ ಆಯೋಜಿಸಲಾಗಿದ್ದ ವಿಶ್ವ ಬುಡಕಟ್ಟು ದಿನಾಚರಣೆ ಹಾಗೂ ಫಲಾನುಭವಿಗಳಿಗೆ ಸವಲತ್ತು ವಿತರಣಾ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಆದಿವಾಸಿಗಳಿಗೆ ಆದ ನೋವನ್ನು, ಸಮಸ್ಯೆಯನ್ನು ಕಣ್ಣಾರೆ ಕಂಡಿದ್ದೇನೆ, ಇಲ್ಲಿರುವ ಸಮಸ್ಯೆ ಮತ್ತು ನೋವನ್ನು ತೊಡೆದಾಕುವ ನಿಟ್ಟಿನಲ್ಲಿ ನಾನು ಹೋರಾಟ ಮಾಡುತ್ತೇನೆ,



ಆದಿವಾಸಿಗಳಿಗೆ ವಿವಿಧ ಸೌಲತ್ತುಗಳನ್ನು ವಿತರಿಸುತ್ತಿರುವ ಸಚಿವ ನಾಗೇಂದ್ರ .



ಪೂರ್ಣಕುಂಭ ಸ್ವಾಗತ ಕೋರಿದ ವಿದ್ಯಾರ್ಥಿಗಳು.

ಅವರಿಗೆ ಸಿಗಬೇಕಾದ ಸೌಲಭ್ಯಗಳನ್ನು ಒದಗಿಸುತ್ತೇನೆ ಎಂದು ತಿಳಿಸಿದರು.

ಆದಿವಾಸಿಗಳ ಕಷ್ಟ ಕಾರ್ಪಣ್ಯಗಳನ್ನು ಅರಿಯಲಿಕ್ಕಾಗಿಯೇ ನಾನು ಹಾಡಿ ವಾಸ್ತವ್ಯ ಹಮ್ಮಿಕೊಂಡಿದ್ದೇನೆ. ಮುಂದಿನ ವರ್ಷದೊಳಗಾಗಿ ಈ ಎಲ್ಲಾ ಸಮಸ್ಯೆಗಳಿಗೆ ಕೊನೆ ಹಾಡಲಾಗುವುದು ಎಂದು ಆದಿವಾಸಿಗಳಿಗೆ ಭರವಸೆ ನೀಡಿದರು.

ಆದಿವಾಸಿಗಳು ಪ್ರಾಣಿಗಳೊಂದಿಗೆ ನಿತ್ಯ ಸಂಘರ್ಷವನ್ನು ಎದುರಿಸುತ್ತಿದ್ದಾರೆ. ಅದು ಅವರಿಗೆ ಅಭ್ಯಾಸವಾಗಿದೆ. ಆದರೆ ನೀವು ಸರ್ಕಾರವನ್ನು ಬೇಡಿಕೊಳ್ಳುವ ಅಭ್ಯಾಸವಾಗಬಾರದು, ಆದ್ದರಿಂದ ಸರ್ಕಾರವೇ ನಿಮ್ಮ ಬೆನ್ನ ಹಿಂದೆ ನಿಂತು ಸಮಸ್ಯೆಯನ್ನು ಬಗೆಹರಿಸಲಿದೆ ಎಂದರು. ಮುಂದಿನ ದಿನಗಳಲ್ಲಿ ಆಶ್ರಮ ಶಾಲೆಯಲ್ಲಿ ಓದಿದ ಮಕ್ಕಳಿಗೆ ಮೊರಾರ್ಜಿ ಶಾಲೆಗೆ ಅಥವಾ ಏಕಲವ್ಯ ಶಾಲೆಗೆ ಸೇರಿಸುವ ಯೋಜನೆಯನ್ನು ಜಾರಿಗೊಳಿಸಲಾಗುವುದು ಎಂದು ಭರವಸೆ ನೀಡಿದ ಅವರು, ಆದಿವಾಸಿಗಳ ಮನೆ ನಿರ್ಮಾಣಕ್ಕೆ 5 ಲಕ್ಷ ಕೊಡುವಂತೆ ಸರ್ಕಾರಕ್ಕೆ ಒತ್ತಾಯಿಸುವುದಾಗಿ ಭರವಸೆ ನೀಡಿದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಆದಿವಾಸಿಗಳಿಗೆ ನೀಡುತ್ತಿದ್ದ ಆರು ತಿಂಗಳ ಆಹಾರ ಪಡಿತರವನ್ನು ಒಂದು ವರ್ಷಕ್ಕೆ ನೀಡಲು ತೀರ್ಮಾನಿಸಲಾಗಿದೆ ಎಂದರು.

ಆದಿವಾಸಿಗಳ ಅಭಿವೃದ್ಧಿಗಾಗಿ ಸದನದಲ್ಲಿ ನಾನು ಮಾತನಾಡುತ್ತಿದ್ದೇನೆ, ಆದಿವಾಸಿಗಳ ಅಭಿವೃದ್ಧಿಗೆ ಅಧಿಕಾರಿಗಳು ಶ್ರಮಿಸಬೇಕೆ ಹೊರತು, ಅವರವರ ಹಿತಾಸಕ್ತಿಗೆ ಜೀವನ ನಡೆಸುವಂತೆ ಕಾಣುತ್ತಿದೆ, ಹೀಗಾದರೆ ಆದಿವಾಸಿಗಳು ಉದ್ಧಾರ ಹೇಗೆ ಸಾಧ್ಯ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಕಾಡಿನಿಂದ ನಾಡಿಗೆ ಪುನರ್ವಸತಿ ಕಲ್ಪಿಸಿದ 3318 ಕುಟುಂಬಗಳಿಗೆ ಹಕ್ಕುಪತ್ರವನ್ನು ನೀಡದಿರುವುದು ತಮಗೆ ಬೇಸರ ತಂದಿದೆ. ನನ್ನ ಅಧಿಕಾರವಧಿಯಲ್ಲಿ ಎಲ್ಲರಿಗೂ ಹಕ್ಕುಪತ್ರ ನೀಡುತ್ತೇನೆ ಎಂದು ಆದಿವಾಸಿಗಳಿಗೆ ಭರವಸೆ ನೀಡಿದರು.

ಗಿರಿಜನ ಆಶ್ರಮ ಶಾಲೆಗಳನ್ನು 12 ನೇ ತರಗತಿಯವರಗೆ ಮೇಲ್ದರ್ಜೆಗೇರಿಸಿ ಸಕಲ ಸೌಲಭ್ಯ ನೀಡುವಂತೆ ನಾನು ಸಚಿವರಿಗೆ ಒತ್ತಾಯಿಸಿದ್ದೇನೆ ಎಂದು ತಿಳಿಸಿದರು.

ಆದಿವಾಸಿ ಮುಖಂಡ ಕಾಳಕಲ್ಕರ್ ಆದಿವಾಸಿಗಳ ಸಮಸ್ಯೆಗಳನ್ನು ಬಿಚ್ಚಿಡುತ್ತಾ ಮಾತನಾಡಿ, ತಾಲೂಕಿನಲ್ಲಿ ಗಿರಿಜನ ಆಶ್ರಮ ಶಾಲೆಯನ್ನು ಹೆಸರಿಗಷ್ಟೇ ತೆರೆಯಲಾಗಿದೆ. ಈ ಶಾಲೆಗಳಲ್ಲಿ ಖಾಯಂ ಶಿಕ್ಷಕರಿಲ್ಲ, ಖಾಯಂ ವಾರ್ಡನ್‌ಗಳಿಲ್ಲ, ಗುಣಮಟ್ಟದ ಶಿಕ್ಷಣ ಇಲ್ಲದೇ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿರುವ ಹಿನ್ನೆಲೆ ಈ ಶಾಲೆಗಳನ್ನು ಶಿಕ್ಷಣ ಇಲಾಖೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ರಾಜೇಶ್ವರಿ, ಉಪಾಧ್ಯಕ್ಷ ರಾಜೇಗೌಡ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಿರ್ದೇಶಕ ಕಲ್ಲೇಶ್, ಜಂಟಿ ನಿರ್ದೇಶಕ ರಾಜಕುಮಾರ್, ಯೋಜನಾ ಸಮನ್ವಯ ಅಧಿಕಾರಿ ಮುನಿರಾಜ್, ಗಿರಿಜನ ಸಂಶೋಧನಾ ನಿರ್ದೇಶಕರು ಶ್ರೀನಿವಾಸ್, ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ನಾರಾಯಣಸ್ವಾಮಿ, ಗಿರಿಜನ ವಿಸ್ತರಣಾಧಿಕಾರಿ ನಾಗರಾಜ್, ತಹಸಿಲ್ದಾರ್ ಸಣ್ಣರಾಮಪ್ಪ ಇಓ, ವಾಲ್ಮೀಕಿ ನಿಗಮದ ಪದ್ಮನಾಭ, ಜಂಟಿ ನಿರ್ದೇಶಕ ರಾಜಕುಮಾರ್, ಏಕಲವ್ಯ ವಸತಿ ಶಾಲೆಯ ಪ್ರಿನ್ಸಿಪಾಲ್ ಚಂದ್ರು, ಡಿಸಿಎಫ್ ಹರ್ಷಕುಮಾರ್ ಚಿಕ್ಕ ನರಗುಂದ, ಎಸಿಎಫ್ ರಂಗಸ್ವಾಮಿ, ಆರ್‌ಎಫ್‌ಓಗಳಾದ ಮಧು, ಹರ್ಷಿತ್, ನಿಗಮದ ವ್ಯವಸ್ಥಾಪಕ ಸುರೇಶ್ ನಾಯಕ್, ಅಡಿಷನಲ್ ಎಸ್ಪಿ ನಂದಿನಿ, ಡಿವೈಎಸ್‌ಪಿ ಮಹೇಶ್, ವೃತ್ತನಿರೀಕ್ಷಕ ಶಬೀರ್ ಹುಸೇನ್, ಜೈ ಕರ್ನಾಟಕ ಸಂಘಟನಾ ರಾಜ್ಯ ಉಪಾಧ್ಯಕ್ಷ ಸತೀಶ್ ಗೌಡ, ಮೈಮುಲ್ ನಿರ್ದೇಶಕ ಈರೇಗೌಡ, ಜಿ.ಪಂ ಸದಸ್ಯ ಚಿಕ್ಕವೀರನಾಯಕ, ಪುರಸಭಾ ಸದಸ್ಯ ಎಚ್.ಸಿ.ನರಸಿಂಹಮೂರ್ತಿ, ಪರಶಿವಮೂರ್ತಿ, ಸೋಮೇಶ್, ಪಿ.ನಾಗರಾಜು, ಹಾದಿವಾಸಿ ಮುಖಂಡರುಗಳಾದ ಕಾಳಕಲ್ಕರ್, ವಿಜಯಕುಮಾರ್, ಚಿಕ್ಕಣ್ಣ, ಸೈಲೇಂದ್ರ, ಗಣೇಶ್ ಅವರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಿರಗಸೂರು ಗ್ರಾಮ ಪಂಚಾಯ್ತಿ ಆಡಳಿತ ಕಾಂಗ್ರೆಸ್ ವಶ

ತಿ.ನರಸೀಪುರ.ಆ.9– ಕಿರಗಸೂರು ಗ್ರಾಮ ಪಂಚಾಯ್ತಿ ಆಡಳಿತ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳ ಪಾಲಾಗಿದ್ದು, ಬುಧವಾರ ನಡೆದ ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ ಚಂದ್ರಮ್ಮ, ಉಪಾಧ್ಯಕ್ಷರಾಗಿ ಚಿನ್ನತಾಯಮ್ಮ ಆಯ್ಕೆಯಾಗಿದ್ದಾರೆ.

ಕಿರಗಸೂರು ಗ್ರಾಪಂಯ 30 ತಿಂಗಳ ಎರಡನೇ ಅವಧಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಚಂದ್ರಮ್ಮ ಹಾಗೂ ಸರೋಜಮ್ಮ ಉಮೇದುವಾರಿಕೆ ಸಲ್ಲಿಸಿದರೆ, ಉಪಾಧ್ಯಕ್ಷ ಸ್ಥಾನದ ಆಯ್ಕೆಗಾಗಿ ಚಿನ್ನತಾಯಮ್ಮ ಹಾಗೂ ಗಿರಿಜಮ್ಮ ನಾಮಪತ್ರ ಸಲ್ಲಿಸಿದರು.

ನಂತರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಚಂದ್ರಮ್ಮ 9 ಮತಗಳನ್ನು ಪಡೆದು ಒಂದು ಮತಗಳ ಅಂತರದಿಂದ ಸರೋಜಮ್ಮರನ್ನು ಪರಾಭವಗೊಳಿಸಿ ಗೆಲುವಿನ ನಗೆ ಬೀರಿದರು.

ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಚಿನ್ನತಾಯಮ್ಮ 10 ಮತಗಳನ್ನು ಪಡೆದು 7 ಮತಗಳನ್ನು ಪಡೆದ ಗಿರಿಜಮ್ಮರನ್ನು 3 ಮತಗಳಿಂದ ಪರಾಜಿತಗೊಳಿಸಿದರು.



ಚುನಾವಣಾಧಿಕಾರಿ ಸುಹಾಸ್ ಚುನಾವಣೆ ಪ್ರಕ್ರಿಯೆ ನಡೆಸಿ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಯನ್ನು ಪ್ರಕಟಿಸಿದರು. ಪಂಚಾಯ್ತಿ ವರಿಷ್ಠರ ಆಯ್ಕೆ ಪ್ರಕಟಗೊಳ್ಳುತ್ತಿದ್ದಂತೆ ಪಂಚಾಯತಿ ಮುಂಭಾಗದಲ್ಲಿ ನೆರೆದಿದ್ದ ಬೆಂಬಲಿಗರು ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು.

ಚುನಾವಣಾ ಸಭೆಯಲ್ಲಿ ನಿಕಟಪೂರ್ವ ಅಧ್ಯಕ್ಷೆ ಜ್ಯೋತಿ ಕಾಂತರಾಜು, ಉಪಾಧ್ಯಕ್ಷ ನಾಗರಾಜು, ಸದಸ್ಯರಾದ ಭಾಗ್ಯ, ಶಿವರಾಜು, ಸಿ.ನಿಂಗರಾಜು, ಗಿರಿಜಮ್ಮ, ಎಂ.ಮಹೇಶ್, ರಾಜೇಶ್ವರಿ, ಮಂಗಳಮ್ಮ, ಪಿ.ನಾಗರಾಜು, ಸರೋಜಮ್ಮ, ಬಿ.ಮಹದೇವಸ್ವಾಮಿ, ಆರ್.ಗಿರೀಶ್, ಕಾಮಿನಿ, ನಾಗರತ್ನಮ್ಮ ಭಾಗವಹಿಸಿದ್ದರು.

ಅನುದಾನ ತರುವೆ: ನೂತನ ಅಧ್ಯಕ್ಷೆ ಚಂದ್ರಮ್ಮ ಮಾತನಾಡಿ, ಪಂಚಾಯ್ತಿ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿ ಹಾಗೂ ಮೂಲಸೌಕರ್ಯಕ್ಕೆ ಮೊದಲ ಆದ್ಯತೆ ನೀಡುವೆ. ಪಂಚಾಯ್ತಿ ವ್ಯಾಪ್ತಿ ವರುಣ ವ್ಯಾಪ್ತಿಗೆ ಬರುವುದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಯತೀಂದ್ರ, ಸಚಿವ ಮಹದೇವಪ್ಪರೊಂದಿಗೆ ಪಂಚಾಯ್ತಿಯ ಒಟ್ಟಾರೆ ಸದಸ್ಯರ ಸಹಕಾರದೊಂದಿಗೆ ಸಂಪರ್ಕ ಸಾಧಿಸಿ ಹೆಚ್ಚಿನ ಅನುದಾನಕ್ಕೆ ಪ್ರಯತ್ನ ಪಡುತ್ತೇನೆ ಎಂದರು.

ಟಿಎಪಿಸಿಎಂಎಸ್ ಉಪಾಧ್ಯಕ್ಷ ಡಣಾಯಕನಪುರ ಮಲ್ಲಣ್ಣ, ಕಾಂಗ್ರೆಸ್ ಮುಖಂಡ ಮನ್ನೆಹುಂಡಿ ಪರಶಿವಮೂರ್ತಿ(ಬೋರ್‌ವೆಲ್), ಡೈರಿ ಅಧ್ಯಕ್ಷ ಬಿಲಿಗೆರೆಹುಂಡಿ ಮಂಟೇಲಿಂಗಪ್ಪ ಮಾಜಿ ಅಧ್ಯಕ್ಷ ಡಿ.ಪಿ.ನುಂಜುಂಡಸ್ವಾಮಿ, ಮಹದೇವಣ್ಣ, ಸೋಮಣ್ಣನಾಯಕ, ಕಿರಗಸೂರು ಶಿವಣ್ಣ, ಮಹೇಶ್, ಹುಣಸೂರು ಸಿದ್ದರಾಜು, ರಾಜಪ್ಪ ಡಿ.ಪಿ.ನಾಗೇಂದ್ರಪ್ರಸಾದ್, ವಸಂತ ಮಾಜಿ ಪಂಚಾಯ್ತಿ ಸದಸ್ಯ ಮಹದೇವಪ್ಪ, ಶೀನಪ್ಪ, ಚಿಕ್ಕಮಾದಯ್ಯ, ಪುಟ್ಟಯ್ಯ, ಗೌಡ್ರ ಪುಟ್ಟಬುದ್ಧಿ, ದೇವರಸನಾಯಕ, ಮಂಡಿ ಪ್ರಕಾಶ್, ಮನುಕುಮಾರ್, ಮನ್ನೇಹುಂಡಿ ಮಧು, ಕೂಡ್ಲೂರು ಕಿರಣ್, ಸುಂದ್ರಪ್ಪ, ಪಂಚಾಯ್ತಿ ಪಿಡಿಓ ಧ'ರಣೇಶ್, ಕಾರ್ಯದರ್ಶಿ ಮೀನಾಕ್ಷಿ ಮತ್ತಿತರರಿದ್ದರು.

ಅಡಿಕೆ ಗಿಡಗಳನ್ನು ಕತ್ತರಿಸಿಹಾಕಿದ ದುಷ್ಕರ್ಮಿಗಳು



ಹುಣಸೂರು,ಆ.9– ಫಲ ನೀಡಬೇಕಾಗಿದ್ದ ಅಡಿಕೆ ಗಿಡಗಳನ್ನು ದುಷ್ಕರ್ಮಿಗಳು ಕತ್ತರಿಸಿ ಹಾಕಿ ಅಟ್ಟಹಾಸಗೈದಿರುವ ಘಟನೆ ತಾಲೂಕಿನ ಕಡೆಮನುಗನಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ತಾಲೂಕಿನ ಗಾವಡಗೆರೆ ಹೋಬಳಿ ಕಡೆಮನುಗನಹಳ್ಳಿ ಗ್ರಾಮದ ದಿ॥ ಕೃಷ್ಣೇಗೌಡರ ಪುತ್ರ ವೆಂಕಟೇಶ್ ತಮ್ಮ 5 ಎಕರೆ ಜಮೀನಿನಲ್ಲಿ ಮನೆ ಕಟ್ಟಿಕೊಂಡು ಅಲ್ಲೇ ವಾಸವಾಗಿದ್ದು, 3 ಎಕರೆ ಜಮೀನಿನಲ್ಲಿ ಅಡಿಕೆ ಬೆಳೆದಿದ್ದರು. ಮನೆ ಅಕ್ಕಪಕ್ಕದಲ್ಲಿ ಇದ್ದ ಅಡಿಕೆ ಮರಗಳನ್ನು ಬಿಟ್ಟು ಮನೆ ಹಿಂದೆ 1.5 ಎಕರೆಯಲ್ಲಿ ಬೆಳೆದಿದ್ದ 85 ಅಡಿಕೆ ಮರಗಳನ್ನು ರಾತ್ರಿ ವೇಳೆ ಕಿಡಿಗೇಡಿಗಳು ಕತ್ತರಿಸಿ ಹಾಕಿದ್ದಾರೆ. ಕೌಟುಂಬಿಕ ಕಲಹದ ಹಿನ್ನಲೆಯಲ್ಲಿ ಈ ಕೃತ್ಯ ಎಸಗಿರಬಹುದೆಂದು ಅನುಮಾನ ವ್ಯಕ್ತಪಡಿಸಿದ್ದಾರೆ.

ಇದೇ ರೀತಿ ಹಿಂದೆಯೂ ಸಹ ಈ ಜಮೀನಿನಲ್ಲಿ ಹಾಕಿದ್ದ ಶುಂಠಿ ಬೆಳೆಯನ್ನು ಸಹ ನಾಶಪಡಿಸಲಾಗಿತ್ತು ಎಂದು ವೆಂಕಟೇಶ್ ತಿಳಿಸಿದರು.

ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಿಸಿದ್ದು, ಮುಂದಿನ ಕ್ರಮ ಕೈಗೊಂಡಿದ್ದಾರೆ. ಸ್ಥಳಕ್ಕೆ ತೋಟಗಾರಿಕೆ ಸಹಾಯಕ ಅಧಿಕಾರಿ ಚೈತ್ರ ಕ್ರೈಂ ಇನ್ಸ್‌ಪೆಕ್ಟರ್ ಸಿದ್ದರಾಜು, ಮಂಜುನಾಥ್, ಲೋಕೇಶ್ ಹಾಗೂ ಸಿಬ್ಬಂದಿ ಭೇಟಿ ನೀಡಿದ್ದಾರೆ.

ಬಿಳಿಗೆರೆ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹಿರೀಕ್ಯಾತನಹಳ್ಳಿ, ಆ.9– ಹುಣಸೂರು ತಾಲೂಕಿನ ಬಿಳಿಗೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಭಾರತಿ ಶಿವಪ್ರಸನ್ನ, ಉಪಾಧ್ಯಕ್ಷರಾಗಿ ನವೀನಾ ಸಿದ್ದನಾಯಕ ಅವಿರೋಧವಾಗಿ ಆಯ್ಕೆಯಾದರು.

ಒಟ್ಟು 15 ಸದಸ್ಯರ ಪೈಕಿ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ಇವರಿಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆಯಾದರು. 5 ಸದಸ್ಯರು ಗೈರು ಹಾಜರಾಗಿದ್ದರು.

ಚುನಾವಣಾಧಿಕಾರಿ ಲೋಕೋಪಯೋಗಿ ಇಲಾಖೆಯ ಎಇಇ ಬೋಜರಾಜ್‌ರವರು ಭಾರತಿ ಶಿವಪ್ರಸನ್ನ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ನವೀನಾ ಸಿದ್ದನಾಯಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ತಿಳಿಸಿದರು.

ನೂತನವಾಗಿ ಆಯ್ಕೆಯಾದ ಭಾರತಿ ಶಿವ ಪ್ರಸನ್ನ ಮಾತನಾಡಿ, ಶಾಸಕರಾದ ಜಿ.ಡಿ.ಹರೀಶ್‌ಗೌಡರ ಬೆಂಬಲ, ಸ್ಥಳೀಯ ಸದಸ್ಯರ ಬೆಂಬಲದಿಂದ ಅಧ್ಯಕ್ಷೆಯಾಗಿದ್ದು ಶಾಸಕರ ಹಾಗೂ ಸದಸ್ಯರ ಸಹಾಯದಿಂದ ಮೂಲ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುವುದರ ಜೊತೆಗೆ ಸ್ಥಳೀಯ ಸಮಸ್ಯೆಗಳ ಬಗ್ಗೆ ಅವಲೋಕಿಸಿ ಹಂತ ಹಂತವಾಗಿ ಅಭಿವೃದ್ಧಿ ಕೈಗೊಂಡು ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವುದಾಗಿ ತಿಳಿಸಿದರು. ನಂತರ ಬೆಂಬಲಿಗರು ಸಿಹಿ ಹಂಚಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಈ ವೇಳೆ ಪಿಡಿಓ ಶೀಲಾ, ಸದಸ್ಯರಾದ ಪ್ರಭಾಕರ್, ಮಂಜುಳಾ ನಾಗರಾಜನಾಯಕ, ಕಾಂತರಾಜೇಗೌಡ, ರುಕ್ಮಿಣಿ ಸಿದ್ದಲಿಂಗೇಗೌಡ, ಮಹದೇವನಾಯಕ, ರೇಣುಕಾ ಸುರೇಶ್, ಕುಮಾರಪ್ಪ ಲತಾ ಕೇಶವಮೂರ್ತಿ, ಮುಖಂಡರಾದ ಪ್ರಸನ್ನ, ಗಣೇಶ್, ಸುರೇಶ್, ಸಂಜಯ್, ಮಾದೇಗೌಡ, ಸಣ್ಣ ಮಲ್ಲೇಗೌಡ, ರಜನಿಕಾಂತ್, ರವಿ, ಹಿರೀಕ್ಯಾತನಹಳ್ಳಿ ಸತೀಶ್, ಪುಟ್ಟರಾಜ್, ಜಗದೀಶ್, ರೇವಣ್ಣ, ಕಟ್ಟೆಮಳಲವಾಡಿ ಸುಂದರ್, ಮುಖಂಡರು ಹಾಜರಿದ್ದರು.

ಬೆಟ್ಟದಪುರ ಗ್ರಾಮ ದೇವತೆ ದೇವಾಲಯದಲ್ಲಿ ಕಳವು



ಬೆಟ್ಟದಪುರ, ಆ.9– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಪ್ರತಿಷ್ಠಿತ ಗ್ರಾಮ ದೇವತೆ ಶ್ರೀ ಶಾಂತವೀರಮ್ಮನವರ ದೇವಾಲಯದಲ್ಲಿ ಮಂಗಳವಾರ ರಾತ್ರಿ ಕಳ್ಳತನ ಸಂಭವಿಸಿದೆ.

ಅಂದು ರಾತ್ರಿ ಸುಮಾರು 12ರ ವೇಳೆ ಆರೋಪಿಗಳು ಬಂದು ದೇವಾಲಯದಲ್ಲಿ ಹುಂಡಿ ಒಡೆದು ಕಳ್ಳತನ ಮಾಡುತ್ತಿರುವ ದೃಶ್ಯ ಸಮೀಪದ ಸಹಕಾರ ಸಂಘದ ಕಟ್ಟಡದಲ್ಲಿ ಅಳವಡಿಸಲಾಗಿರುವ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು ಈ ಕುರಿತು ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಸ್ಥಳಕ್ಕೆ ಬೆಟ್ಟದಪುರದ ಪಿಎಸ್‌ಐ ಪ್ರಕಾಶ್ ಎಂ ಎತ್ತಿನಮನಿ ಅವರು ಭೇಟಿ ನೀಡಿ ಶ್ವಾನದಳ ಹಾಗೂ ಬೆರಳಚ್ಚು ತಜ್ಞರನ್ನು ಕರೆಸಿ ಸ್ಥಳ ಪರಿಶೀಲನೆ ಮಾಡಿಸಿದರು. ಶ್ವಾನದಳವು ದೇವಸ್ಥಾನದ ಸುತ್ತಲ ಬೀದಿಗಳಲ್ಲಿ ಓಡಾಡಿ ದೇವಾಲಯದ ಮುಂಭಾಗದಲ್ಲಿ ನಿಂತಿತು. ಈ ದೇವಾಲಯವನ್ನು ಬೆಟ್ಟದಪುರದ ಗ್ರಾಮಸ್ಥರು ಸಾರ್ವಜನಿಕರ ಸಹಕಾರದೊಂದಿಗೆ ಸುಮಾರು 90 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿದ್ದಾರೆ.

ಹಂಚೀಪುರ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷ ಆಯ್ಕೆ

ಸರಗೂರು, ಆ.9– ತಾಲೂಕಿನ ಹಂಚೀಪುರ ಗ್ರಾಪಂ ಅಧ್ಯಕ್ಷೆಯಾಗಿ ರುಕ್ಮಿಣಿ, ಉಪಾಧ್ಯಕ್ಷರಾಗಿ ಎಂ.ನಟರಾಜು ಆಯ್ಕೆಯಾಗಿದ್ದಾರೆ.

ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರುಕ್ಮಿಣಿ, ಶಿವಮ್ಮ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ನಟರಾಜು, ಎ.ಚಂದ್ರಶೇಖರ್ ನಾಮಪತ್ರ ಸಲ್ಲಿಸಿದರು. ನಂತರ ನಡೆದ ಚುನಾವಣೆಯಲ್ಲಿ ರುಕ್ಮಿಣಿ ಹಾಗೂ ನಟರಾಜು 7 ಮತಗಳನ್ನು ಪಡೆದು ಅಧ್ಯಕ್ಷ, ಉಪಾಧ್ಯಕ್ಷರಾಗಿ ಆಯ್ಕೆಯಾದರೆ, 6 ಮತಗಳನ್ನು ಪಡೆದ ಶಿವಮ್ಮ, ಚಂದ್ರಶೇಖರ್ ಪರಾಭವಗೊಂಡರು.

ಹಸಿರೆಲೆ ಗೊಬ್ಬರದಿಂದ ಮಣ್ಣಿನ ಫಲವತ್ತತೆ ವೃದ್ಧಿ: ಡಾ.ರಾಮಕೃಷ್ಣನ್



ಕಂಪಲಾಪುರ, ಆ.9–ಹಸಿರೆಲೆ ಗೊಬ್ಬರದಿಂದ ಭೂಮಿಯ ಫಲವತ್ತತೆ ಹೆಚ್ಚಿ ಎಲ್ಲಾ ಬೆಳೆಗಳು ಸಮೃದ್ಧಿಯಾಗಿ ಬೆಳೆಯುತ್ತವೆ ಎಂದು ಸಿಟಿಆರ್‌ಐ ಮುಖ್ಯಸ್ಥ ಡಾ. ರಾಮಕೃಷ್ಣನ್ ತಿಳಿಸಿದರು.

ಸಮೀಪದ ಮುತ್ತುರಾಯನ ಹೊಸಳ್ಳಿಯಲ್ಲಿ ತಂಬಾಕು ಮಂಡಳಿ ಹಾಗೂ ಡೆಕ್ಕನ್ ಕಂಪನಿ ಸಹಭಾಗಿತ್ವದಲ್ಲಿ ನಡೆದ ತಂಬಾಕು ರೈತರ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿ, ವೈಜ್ಞಾನಿಕ ಕೃಷಿ ಪದ್ಧತಿಯಿಂದ ಕಡಿಮೆ ಖರ್ಚಿನಲ್ಲಿ ಹೆಚ್ಚು ತಂಬಾಕು ಇಳುವರಿ ಪಡೆಯಬಹುದೆಂದು ಸಲಹೆ ನೀಡಿದರು.

ತಂಬಾಕು ಹರಾಜು ಮಾರುಕಟ್ಟೆ ಸಂಖ್ಯೆ 62 ರ ಅಧೀಕ್ಷಕ ಡಾ.ಬ್ರಿಜ್ ಭೂಷಣ್, ತಂಬಾಕು ಮಂಡಳಿಯಿಂದ ಸಿಗುವ ಸವಲತ್ತುಗಳ ಬಗ್ಗೆ ರೈತರಿಗೆ ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ತಂಬಾಕು ಮಂಡಳಿ ಸದಸ್ಯ ದಿನೇಶ್, ಡೆಕ್ಕನ್ ಕಂಪನಿ ಮ್ಯಾನೇಜರ್ ಅಫ್ರೋಜ್ ಪಾಷಾ ಸೇರಿದಂತೆ ರೈತರು ಹಾಜರಿದ್ದರು.

ತಿ.ನರಸೀಪುರದಲ್ಲಿ ಆ.31 ರಂದು ಬೃಹತ್ ಉದ್ಯೋಗ ಮೇಳ

ತಾಂತ್ರಿಕ, ಕೌಶಲ್ಯ ಕೊರತೆಯಿರುವವರಿಗೆ ತರಬೇತಿ ನೀಡಿ ಉದ್ಯೋಗವಕಾಶ



ಪತ್ರಿಕಾಗೋಷ್ಠಿಯಲ್ಲಿ ಮೈಮುಲ್ ನಿರ್ದೇಶಕ ಆರ್. ಚೆಲುವರಾಜು ಮಾತನಾಡಿದರು.

ತಿ.ನರಸೀಪುರ, ಆ.9– ಕಾಂಗ್ರೆಸ್ ಪಕ್ಷದ ಯುವ ಮುಖಂಡ ಹಾಗೂ ಕೆಡಿಪಿ ಸದಸ್ಯ ಸುನೀಲ್ ಬೋಸ್ ಅವರ ಹುಟ್ಟುಹಬ್ಬದ ಅಂಗವಾಗಿ ತಾಲೂಕಿನ ಉದ್ಯೋಗಾಕಾಂಕ್ಷಿ ಯುವಕ –ಯುವತಿಯರಿಗೆ ಉದ್ಯೋಗ ದೊರಕಿಸಿಕೊಡುವ ಉದ್ದೇಶದಿಂದ ಪಟ್ಟಣದಲ್ಲಿ ಮೊದಲ ಬಾರಿಗೆ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ ಎಂದು ತಾಪಂ ಮಾಜಿ ಅಧ್ಯಕ್ಷ ಹಾಗೂ ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ತಿಳಿಸಿದ್ದಾರೆ.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿಯೇ ಪ್ರಥಮ ಬಾರಿಗೆ ಸುನೀಲ್ ಬೋಸ್ ಹುಟ್ಟುಹಬ್ಬದ ಅಂಗವಾಗಿ ಆ.31 ರಂದು ದೊಡ್ಡ ಮಟ್ಟದ ಉದ್ಯೋಗ ಮೇಳ ನಡೆಯಲಿದ್ದು, ಮೇಳದಲ್ಲಿ ನೂರಕ್ಕೂ ಹೆಚ್ಚು ಕಂಪನಿಗಳು ಪಾಲ್ಗೊಳ್ಳಲಿವೆ ಎಂದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ನಡೆಯುವ ಮೇಳದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಪ್ಲೊಮಾ, ಐಟಿಐ, ಟಿ.ಇ, ಟಿ ಫಾರ್ಮ, ಡಿ ಫಾರ್ಮ, ನರ್ಸಿಂಗ್, ಬಿಎ, ಬಿಕಾಂ, ಬಿಎಸ್ಸಿ ಬಿಬಿಎಂ, ಎಂಬಿಎ, ಎಂಕಾಂ, ಎಂಎಸ್ಸಿ, ಎಂಎಸ್‌ಡಬ್ಲ್ಯೂ ಇನ್ನಿತರೆ ಯಾವುದೇ ಪದವಿ ಪಡೆದಿರುವ ಯುವಕ–ಯುವತಿ ಉದ್ಯೋಗಾಕಾಂಕ್ಷಿಗಳು ಭಾಗವಹಿಸಿ ಮೇಳದ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದ ಅವರು ಮೇಳವು ಸಂಪೂರ್ಣ ಉಚಿತವಾಗಿರುತ್ತದೆ ಎಂದರು.

ಉದ್ಯೋಗದಾತ ಸಂಸ್ಥೆಯ ಮುಖ್ಯಸ್ಥ ರುಕ್ಮಾಂಗದ ಮಾತನಾಡಿ, ಮೇಳದಲ್ಲಿ ರಾಣೆ ಮದ್ರಾಸ್, ಆಟೋಮ್ಯಾಟಿವ್ ಆಕ್ಸೆಲ್, ಎಐಎಂಎಸ್, ಗ್ರಾಮೀಣ್ ಕೂಟ, ಐಸಿಐಸಿಐ ಸೇರಿದಂತೆ ದೊಡ್ಡ ದೊಡ್ಡ ಕಂಪನಿಗಳು ಭಾಗವಹಿಸುತ್ತಿದ್ದು, ಉದ್ಯೋಗ ಅರಸುತ್ತಿರುವ ನಿರುದ್ಯೋಗಿಗಳಿಗೆ ಉದ್ಯೋಗ ಕೊಡಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಿದ್ದೇವೆ, ಕೆಲವರಿಗೆ ಉದ್ಯೋಗ ಮೇಳದಲ್ಲಿ ನಿಜಕ್ಕೂ ಉದ್ಯೋಗ ಸಿಗಲಿದೆಯೇ ಎಂಬ ಅನುಮಾನವಿದೆ. ಕೆಲವೆಡೆ 2000 ಮಂದಿ ಉದ್ಯೋಗಕ್ಕಾಗಿ ಬಂದರೆ 500 ರಿಂದ 600 ಜನಕ್ಕೆ ಉದ್ಯೋಗ ಸಿಕ್ಕಿ ವಾಪಸ್ ಹೋಗುತ್ತಾರೆ. ಆದರೆ ನಾವಿಲ್ಲಿ ಉದ್ಯೋಗ ಅರಸಿ ಬರುವ ಎಲ್ಲ ಆಕಾಂಕ್ಷಿಗಳಿಗೆ ಕೆಲಸ ಕೊಡಿಸುವ ಪ್ರಾಮಾಣಿಕ ಯತ್ನ ಮಾಡುತ್ತೇವೆ. ಅಲ್ಲದೇ ಕೆಲವರಿಗೆ ಕೌಶಲ್ಯ ಕೊರತೆ, ಟೆಕ್ನಿಕಲ್ ಸಮಸ್ಯೆಗಳಿರುತ್ತವೆ. ಅದರಿಂದಲೂ ಉದ್ಯೋಗ ವಂಚಿತರಾಗುವ ಸಾಧ್ಯತೆ ಇರುತ್ತದೆ. ಅದನ್ನೂ ಸಹ ಗಮನದಲ್ಲಿಟ್ಟುಕೊಂಡು ಅವರಿಗೆ ಉಚಿತ ತರಬೇತಿ ಕೊಡಿಸಿ ಕೆಲಸ ಕೊಡಿಸಲು ಯತ್ನಿಸುತ್ತೇವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಅತ್ತಹಳ್ಳಿ ಗ್ರಾಪಂ ಅಧ್ಯಕ್ಷ ಸಿ.ಸುನೀಲ್ ಕುಮಾರ್, ಸದಸ್ಯ ಎ.ಎಸ್.ಮಹೇಶ್, ಕಲಿಯೂರು ಗ್ರಾಪಂ ಸದಸ್ಯ ಶಿವಣ್ಣ, ಅಶೋಕ್, ದೀಪು ಹಾಜರಿದ್ದರು.

ಇಂದು ಕಾರ್ಯಕರ್ತರ ಭೇಟಿ

ತಾಲೂಕು ಮಟ್ಟದ ತ್ರೈಮಾಸಿಕ ಕೆಡಿಪಿ(KDP) ಸಮಿತಿಯ ಸದಸ್ಯರಾದ ಸುನಿಲ್ ಬೋಸ್‌ರವರು ಗುರುವಾರ ಸಾರ್ವಜನಿಕರ ಕುಂದು ಕೊರತೆ ವಿಚಾರಿಸಲು ಈ ಕೆಳಕಂಡ ಗ್ರಾಮಗಳಿಗೆ ಆಗಮಿಸುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಸ್ಥರು ಹಾಗೂ ಮುಖಂಡರು ಭಾಗವಹಿಸಲು ಕೋರಲಾಗಿದೆ.

ಕರೋಹಟ್ಟಿ– 11 ಗಂಟೆಗೆ, ಕೇತಹಳ್ಳಿ – 12.30 ಗಂಟೆಗೆ, ಹೊಸೂರು ಹುಂಡಿ – 3 ಗಂಟೆಗೆ, ಧರ್ಮಯನಹುಂಡಿ – 4 ಗಂಟೆಗೆ, ಯರಗನಹಳ್ಳಿ– 5 ಗಂಟೆಗೆ, ಬನ್ನಹಳ್ಳಿ ಹುಂಡಿ– 6.30 ಗಂಟೆಗೆ ಭೇಟಿ ನೀಡುವರು.

ನಿವೃತ್ತ ಶಿಕ್ಷಕ ಶಿವನಂಜೇಗೌಡ ನಿಧನ



ಬೆಟ್ಟದಪುರ, ಆ.9– ಬೆಟ್ಟದಪುರ ಸಮೀಪದ ಸುರಗಳ್ಳಿ ಗ್ರಾಮದ ನಿವೃತ್ತ ಶಿಕ್ಷಕ ಶಿವನಂಜೇಗೌಡ(80) ಬುಧವಾರ ನಿಧನ ಹೊಂದಿದರು. ದಿವಂಗತರು ಮೂವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ 1.30ಕ್ಕೆ ಅವರ ಸ್ವಗ್ರಾಮದಲ್ಲಿ ನಡೆಯಲಿದೆ. ಶಿವನಂಜೇಗೌಡರ ನಿಧನಕ್ಕೆ ಗ್ರಾಪಂ ಅಧ್ಯಕ್ಷೆ ವೀಣಾ ವೆಂಕಟೇಶ್, ಮಾಜಿ ತಾಪಂ ಸದಸ್ಯ ಶಂಕರೇ ಗೌಡ, ಜೆಡಿಎಸ್ ಮುಖಂಡ ವಿದ್ಯಾಶಂಕರ್, ರವಿಗೌಡ, ಸ್ವಾಮಿಗೌಡ ಹಾಗೂ ಗ್ರಾಮಸ್ಥರು ಸಂತಾಪ ಸೂಚಿಸಿದ್ದಾರೆ.

ಅಪಾಯಕ್ಕೆ ಬಾಯ್ತೆರೆದ ಫುಟ್‌ಪಾತ್ ಸ್ಲ್ಯಾಬ್‌ಗಳು






ಮೈಸೂರು, ಆ.9(ಆರ್‌ಕೆ)– ವ್ಯಾಪಾರಿಗಳ ಒತ್ತುವರಿಯಿಂದ ಪಾದಚಾರಿಗಳಿಗೆ ತೊಂದರೆಯಾಗಿರುವ ಫುಟ್‌ಪಾತ್‌ಗಳು ಒಂದೆಡೆಯಾದರೆ, ಮತ್ತೊಂದೆಡೆ ಅಳವಡಿಸಿರುವ ಸ್ಲ್ಯಾಬ್‌ಗಳೇ ನಾಪತ್ತೆಯಾಗಿ ಚರಂಡಿಗಳು ಅಪಾಯಕ್ಕೆ ಬಾಯ್ತೆರೆದು ಕಾಯುತ್ತಿವೆ.

ಮೈಸೂರಿನ ಸಿಟಿ ಬಸ್‌ಸ್ಟ್ಯಾಂಡ್‌ನಿಂದ ಅರಮನೆ ಪಶ್ಚಿಮ ದ್ವಾರದ ಕಡೆಗೆ ಹೋಗುವ ಸಯ್ಯಾಜಿರಾವ್ ರಸ್ತೆಯ ಫುಟ್‌ಪಾತ್‌ನ ಚರಂಡಿ ಮೇಲೆ ಅಳವಡಿಸಿರುವ ಸ್ಲ್ಯಾಬ್ ಟೈಲ್ಸ್ ನಾಪತ್ತೆಯಾಗಿ ತಿಂಗಳಾದರೂ ಪಾಲಿಕೆ ಅಧಿಕಾರಿಗಳು ಗ್ಯಾಪ್ ಮುಚ್ಚುವ ಗೋಜಿಗೇ ಹೋಗಿಲ್ಲ. ಪರಿಣಾಮ ಫುಟ್‌ಪಾತ್ ಮೇಲೆ ಓಡಾಡುವ ಪಾದಚಾರಿಗಳೇನಾದರೂ ಎಚ್ಚರ ತಪ್ಪಿದರೆ ಚರಂಡಿಗೆ ಬೀಳುವುದು ನಿಶ್ಚಿತ. ಮೈಸೂರಿನ ಹೃದಯ ಭಾಗದಲ್ಲಿ ಅದರಲ್ಲೂ ನಗರಪಾಲಿಕೆ ಕಚೇರಿ ಸಮೀಪವೇ ಈ ಅವಾಂತರವಾಗಿದೆ. ನಿತ್ಯ ಅದೇ ರಸ್ತೆಯಲ್ಲಿ ಪಾಲಿಕೆ ಅಧಿಕಾರಿಗಳು, ಜನಪ್ರತಿನಿಧಿಗಳು ಓಡಾಡುತ್ತಿದ್ದರೂ ಈ ಚರಂಡಿಯಲ್ಲಾಗಿರುವ ಗುಂಡಿ ಅವರ ಕಣ್ಣಿಗೆ ಕಾಣದಿರುವುದು ಶೋಚನೀಯ.

ಮತ್ತೊಂದೆಡೆ ಲಲಿತ ಮಹಲ್ ರಸ್ತೆಯ ಆಡಳಿತ ತರಬೇತಿ ಸಂಸ್ಥೆ (ಎಟಿಐ) ಎದುರೇ ಫುಟ್‌ಪಾತ್‌ನಲ್ಲಿ ಗುಂಡಿಯಾಗಿದೆ. ಅಲ್ಲಿಯೂ ಹಿರಿಯ ಅಧಿಕಾರಿಗಳು, ಗಣ್ಯರು ಓಡಾಡುತ್ತಾರಾದರೂ ಪಾದಚಾರಿ ರಸ್ತೆ ಚರಂಡಿ ಮೇಲೆ ಹಾಕಿರುವ ಟೈಲ್ಸ್ ಕಳಚಿ ಗುಂಡಿಯಾಗಿರುವ ಬಗ್ಗೆ ಗಮನಹರಿಸದಿರುವುದು ಅಚ್ಚರಿ ಮೂಡಿಸಿದೆ.

ಒಂದು ವೇಳೆ ರಾತ್ರಿ ಸಮಯದಲ್ಲಿ ಈ ಎರಡೂ ರಸ್ತೆಗಳಲ್ಲಿ ಫುಟ್‌ಪಾತ್ ಮೇಲೆ ನಡೆದುಕೊಂಡು ಹೋದರೆ ದೇವರೇ ಗತಿ. ಮೈಸೂರು ಮಹಾ ನಗರಪಾಲಿಕೆ ಅಧಿಕಾರಿಗಳು ಈಗಲಾದರೂ ಇತ್ತ ಗಮನಹರಿಸಿ, ಗುಂಡಿ ಮೇಲೆ ಟೈಲ್ಸ್ ಹಾಕಿ ಮುಚ್ಚಿದರೆ ಸಂಭವಿಸಬಹುದಾದ ಅಪಾಯವನ್ನು ತಪ್ಪಿಸಬಹುದಾಗಿದೆ.





ಜೆಡಿಎಸ್ ಮುಖಂಡ, ಶಾಸಕ ಹೆಚ್.ಡಿ. ರೇವಣ್ಣ ಆಪ್ತನ ಬರ್ಬರ ಹತ್ಯೆ



ಹಾಸನ,ಆ.9–ಗ್ರಾನೈಟ್ ವ್ಯಾಪಾರಿ, ಗುತ್ತಿಗೆದಾರ ಹಾಗೂ ಮಾಜಿ ಸಚಿವ ಎಚ್.ಡಿ.ರೇವಣ್ಣ ಅವರ ನಿಕಟವರ್ತಿ ಕೃಷ್ಣೇಗೌಡ(55) ಎಂಬುವರನ್ನು ದುಷ್ಕರ್ಮಿಗಳು ಹಾಸನದ ಕೈಗಾರಿಕಾ ಅಭಿವೃದ್ಧಿ ಕೇಂದ್ರದ ಬಳಿ ಬರ್ಬರವಾಗಿ ಹತ್ಯೆ ಮಾಡಿದ್ದಾರೆ.

ಪ್ರತ್ಯಕ್ಷ ಮಾಹಿತಿ ಪ್ರಕಾರ, ಅವರ ಶ್ರೀರಾಮ ಮಾರ್ಬಲ್ ಮುಂಭಾಗದಲ್ಲಿ ಮಧ್ಯಾಹ್ನ 12.45ರ ಸುಮಾರಿಗೆ ಘಟನೆ ಸಂಭವಿಸಿದೆ. ಘಟಕದ ಮುಂದೆ ಇನ್ನೋವಾ ಕಾರನ್ನು ನಿಲ್ಲಿಸಿ ಗ್ರಾನೈಟ್ ಘಟಕಕ್ಕೆ ಹೋಗುತ್ತಿದ್ದಾಗ ಐವರ ತಂಡ ಇನ್ನೋವಾ ಕಾರಿನಲ್ಲಿ ಬಂದು ಹಲ್ಲೆ ನಡೆಸಿದ್ದಾರೆ. ದುಷ್ಕರ್ಮಿಗಳು ಮೊದಲು ಕೃಷ್ಣೇಗೌಡರಿಗೆ ಹಿಂಬದಿಯಿಂದ ಬಂದು ಹಲ್ಲೆ ನಡೆಸಿದ್ದಾರೆ. ನೆಲಕ್ಕೆ ಬಿದ್ದ ನಂತರ ನಿರಂತರವಾಗಿ ಮಾರಕಾಸ್ತ್ರಗಳಿಂದ ಹಲವು ಬಾರಿ ದಾಳಿ ನಡೆಸಿದ್ದಾರೆ. ಐವರು ಸದಸ್ಯರ ತಂಡ ಬೆಳಗ್ಗೆಯಿಂದಲೇ ವಾಹನವೊಂದರಲ್ಲಿ ಕುಳಿತು ಕೃಷ್ಣೇಗೌಡರ ಚಲನವಲನಗಳನ್ನು ಗಮನಿಸಿದ್ದಾರೆ. ಬೆಳಿಗ್ಗೆಯಿಂದ ಅವರನ್ನು ಹಿಂಬಾಲಿಸಿದ್ದಾರೆ. ಸುಪಾರಿ ಕೊಲೆ ಮಾಡಿರುವ ಶಂಕೆ ಪೊಲೀಸರಿಗೆ ವ್ಯಕ್ತವಾಗಿದೆ. ಹತ್ಯೆಗೀಡಾದ ಕೃಷ್ಣೇಗೌಡ ಹಾಸನ ನಗರದಲ್ಲಿ ಹಣಕಾಸಿನ ವಿಚಾರದಲ್ಲಿ ಬೇರೆ ಬೇರೆ ವ್ಯಕ್ತಿಗಳೊಂದಿಗೆ ಮನಸ್ತಾಪ ಹೊಂದಿದ್ದರು ಎನ್ನಲಾಗಿದೆ. ಹಲವು ಬಾರಿ ಜಗಳವಾಡಿದ್ದು, ಈ ಸಂಬಂಧ ನಗರ ಠಾಣೆಯಲ್ಲಿ ದೂರು ಮತ್ತು ಪ್ರತಿದೂರುಗಳು ದಾಖಲಾಗಿವೆ. ಎಎಸ್ಪಿ ತಮ್ಮಯ್ಯ ನೇತೃತ್ವದಲ್ಲಿ ಸ್ನಿಫರ್ ಡಾಗ್ ಮತ್ತು ಬೆರಳಚ್ಚು ತಜ್ಞರನ್ನೊಳಗೊಂಡ ಪೊಲೀಸ್ ತಂಡವು ಸ್ಥಳಕ್ಕೆ ಧಾವಿಸಿ ಮೃತದೇಹವನ್ನು ಎಚ್‌ಐಎಂಎಸ್ ಆಸ್ಪತ್ರೆಗೆ ಸ್ಥಳಾಂತರಿಸಿತು. ಕ್ರೂರ ಹತ್ಯೆಯಿಂದ ಎಚ್ಚೆತ್ತ ಪೊಲೀಸರು ಪೊಲೀಸ್ ಪಡೆಗಳನ್ನು ನಿಯೋಜಿಸಿ ಪೊಲೀಸ್ ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ ತೀವ್ರಗೊಳಿಸಿದ್ದಾರೆ.

ಆ.13, ಒಕ್ಕಲಿಗ ವಧು–ವರರ ಸಮಾವೇಶ

ಮೈಸೂರು,ಆ.9–ನೇಗಿಲಯೋಗಿ ಮರುಳೇಶ್ವರ ಒಕ್ಕಲಿಗ ವಧು–ವರರ ವೇದಿಕೆ ವತಿಯಿಂದ 2023ನೇ ಸಾಲಿನ ಒಕ್ಕಲಿಗ ವಧು–ವರರ ಸಮಾವೇಶವನ್ನು ಆ.13ರ ಬೆಳಗ್ಗೆ 9 ಗಂಟೆಗೆ ನೇಗಿಲಯೋಗಿ ಮರುಳೇಶ್ವರ ಸೇವಾ ಭವನ, ಹೊಸ ನ್ಯಾಯಾಲಯದ ಎದುರು, ಕೆ.ಜಿ.ಕೊಪ್ಪಲು, ಜಯನಗರ, ಮೈಸೂರು ಇಲ್ಲಿ ಆಯೋಜಿಸಲಾಗಿದೆ. ಈಗಾಗಲೇ ನಮ್ಮ ವೇದಿಕೆಯಲ್ಲಿ ನೋಂದಾಯಿಸಿಕೊಂಡಿರುವವರು ಹಾಗೂ ಸ್ಥಳದಲ್ಲೇ ನೋಂದಾಯಿಸಿಕೊಳ್ಳಲು ಇಚ್ಛಿಸುವವರು ಈ ಸಮಾವೇಶದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊ: 9483453005, 9900629393, 9113201893, 9448392488 ಸಂಪರ್ಕಿಸಿ.

PUBLIC NOTICE

Notice is hereby given that MR.THOMAS VARGHESE, son of Mr.T.J. Varghese, and MRS.LILA THOMAS, wife of Mr. Thomas Varghese are desirous to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE - 570 002, within 15 (Fifteen) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY: Property bearing House No.51, situated at Block II, Jayalakshmipuram Extension, Devaraja Mohalla, Mysore, site measuring East to West 60.00 feet and North to South 110.00 feet, with building thereon, bounded on: East: Site No.52, West: Site No.50, North: Road and South: Site No.73.

Sd/- Dhirendra Kumar R. Mehta
Advocate, KEY-ANS LAW SOLUTIONS
Date: 09.08.2023, Place: Mysore

ಸಾರ್ವಜನಿಕ ಪ್ರಕಟಣೆ

ಈ 'ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್ ಐಟಂಗಳಲ್ಲಿ ನಮೂದಿಸಿರುವ ಸ್ವತ್ತುಗಳನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು ನಗರ, ಮಂಡಿ ಮೊಹಲ್ಲಾ ಬ್ಯಾಂಬು ಬಜಾರ್, ಮನೆ ನಂಬರ್ 18, ಸ್ಟಾರ್ ವಿವ್ ರಲ್ಲಿ ವಾಸವಾಗಿರುವ ಶ್ರೀಮತಿ. ನೂರ್‌ಮದನಿ 'ಕೋಂ ಶ್ರೀ. ಮೊಹಮ್ಮದ್ ಶಿರಾಜ್ ಆಹ ಮದ್ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಆಜಿತ ತಕರಾರು ಮತ್ತು ಪೂರಕ ದಾಖಾಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು, ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾ ಗಿರುತ್ತಾರೆ ಎಂದು ಪರಿಗಣಿಸಿ ಕ್ರಯದಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್ : ಐಟಂ– 1: ಮೈಸೂರು, ನಜರ್‌ಬಾದ್ ಮೊಹಲ್ಲಾ, ಇಟ್ಟಿಗೆಗೂಡು, ಬ್ಯಾಂಡ್ ಬಂಗಲೆ ರಸ್ತೆಯಲ್ಲಿರುವ, ಪೂರ್ವ–ಪಶ್ಚಿಮ; ದಕ್ಷಿಣದ ಕಡೆ 23 ಅಡಿ, ಉತ್ತರದ ಕಡೆ $24^{1/2}$ ಅಡಿ ಮತ್ತು ಉತ್ತರ–ದಕ್ಷಿಣ: $43^{3/4}$ ಅಡಿ, ಒಟ್ಟು ವಿಸ್ತೀರ್ಣ 1037.875 ಚದರ ಅಡಿ ಅಳತೆಯ ಸ್ವತ್ತಿನ ಸಂಖ್ಯೆ 787/A, N–6/A, ಮತ್ತು, ಅದರಲ್ಲಿ ಕಟ್ಟಿರುವ ಕಟ್ಟಡ ಇದಕ್ಕೆ ಚಕ್ಕುಬಂದಿ; ಪೂರ್ವಕ್ಕೆ:– ಖಾಸಗಿ ಸ್ವತ್ತು, ಪಶ್ಚಿಮಕ್ಕೆ:–ನಂಬರ್: 787/6B, N–6/B ರ ಸ್ವತ್ತು, ಉತ್ತರಕ್ಕೆ: – ರಸ್ತೆ, ದಕ್ಷಿಣಕ್ಕೆ:– ನಂಬರ್: 787/6, N–6 ರ ಸ್ವತ್ತು.

ಐಟಂ– 2: ಮೈಸೂರು, ನಜರ್‌ಬಾದ್ ಮೊಹಲ್ಲಾ, ಇಟ್ಟಿಗೆಗೂಡು, ಬ್ಯಾಂಡ್ ಬಂಗಲೆ ರಸ್ತೆಯಲ್ಲಿರುವ, ಪೂರ್ವ–ಪಶ್ಚಿಮ ದಕ್ಷಿಣದ ಕಡೆ 23 ಅಡಿ, ಉತ್ತರದ ಕಡೆ $24^{1/2}$ ಅಡಿ ಮತ್ತು ಉತ್ತರ–ದಕ್ಷಿಣ: $43^{3/4}$ ಅಡಿ, 'ಒಟ್ಟು ವಿಸ್ತೀರ್ಣ 1037.875 ಚದರ ಅಡಿ ಆಳತೆಯ ಸ್ವತ್ತಿನ ಸಂಖ್ಯೆ 787/B, N–6/B, ಮತ್ತು, ಅದರಲ್ಲಿ ಕಟ್ಟಿರುವ ಕಟ್ಟಡ ಇದಕ್ಕೆ ಚಕ್ಕುಬಂದಿ; ಪೂರ್ವಕ್ಕೆ:– ನಂಬರ್: 787/6A, N–6/A ರ ಸ್ವತ್ತು, ಪಶ್ಚಿಮಕ್ಕೆ:– ರಸ್ತೆ, ಉತ್ತರಕ್ಕೆ:– ರಸ್ತೆ, ದಕ್ಷಿಣಕ್ಕೆ:– ನಂಬರ್: 787/6, N–6 ರ ಸ್ವತ್ತು.

Sd/- M.N. Prakash kalappa, Advocate & legal Consultant , # 2-3, First Floor, PRI Complex; 67/7A, New Sayyajirao Road, Fort Mohalla, Mysore 570004 India Cell: 93431 12535
E-mail: mnprakashkalappa@gmail.com
ಮೈಸೂರು: 08/08/2023

1ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಬಿ.ಹೊಂಬಯ್ಯನವರು

ಜನನ: 04.04.1946 (ನಿವೃತ್ತ ಜಿಲ್ಲಾ ಖಜಾನಾಧಿಕಾರಿ) ಮರಣ: 10.08.2022

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಪತ್ನಿ ಭಾರತಿ ಹಾಗೂ ಸಮಸ್ತ ಕುಟುಂಬವರ್ಗದವರು.

ಪುರಸಭಾ ಕಾರ್ಯಾಲಯ, ಕೃಷ್ಣರಾಜನಗರ, ಮೈಸೂರು ಜಿಲ್ಲೆ

E-Mail ID: itstaff_ulb_krnagar@yahoo.co.in, Phone(0): 08223-262242, Fax: 08223-262241

ಪುಸಕೃ.ಸಂಖ್ಯೆ.ಜೀವ್ಯಾ.ಕು.ಮೇ.ಪಿ.ಆರ್.01.2022–23 ದಿನಾಂಕ: 08.08.2023

ಪತ್ರಿಕಾ ಪ್ರಕಟಣೆ

ಕೃಷ್ಣರಾಜನಗರ, ಪುರಸಭೆಯ 2023–24 ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಮತ್ತು ಪುರಸಭಾ ಅನುದಾನದ ಶೇ. 24.10%, 7.25% ಮತ್ತು 5%, ರ ಕ್ರಿಯಾ ಯೋಜನೆಗೆ ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ರವರು ಪತ್ರ ಸಂಖ್ಯೆ: ಮುನಿಸಿ(4)ಎಸ್.ಎಫ್.ಸಿ.ಮು.ನಿ/ಕೆ.ಆರ್.ನ.ಪು /ಕ್ರಿಯೋ /ಸಿ.ಆರ್–05/2023–24, ದಿನಾಂಕ.06.07.2023 ರಲ್ಲಿ ಅನುಮೋದನೆ ನೀಡಿರುತ್ತಾರೆ. ಸದರಿ ಕ್ರಿಯಾ ಯೋಜನೆಯಲ್ಲಿನ ವೈಯಕ್ತಿಕ ಕಾರ್ಯಕ್ರಮಗಳಿಗೆ ಫಲಾನುಭವಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ಜಾಹಿರಾತು ಪ್ರಕಟಣೆಗೊಂಡ ದಿನಾಂಕದಿಂದ 15 ದಿನದೊಳಗೆ ಕಛೇರಿಗೆ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಪುರಸಭೆಯ ಸಮುದಾಯ ಸಂಘಟನಾಧಿಕಾರಿ, ಪುರಸಭೆ, ಕೃಷ್ಣರಾಜನಗರ ರವರನ್ನು ಸಂಪರ್ಕಿಸಿ ಮಾಹಿತಿಯನ್ನು ಸ್ವೀಕರಿಸಬಹುದು.

ಸಹಿ/– ಮುಖ್ಯಾಧಿಕಾರಿ, ಪುರಸಭೆ, ಕೃಷ್ಣರಾಜನಗರ

ಪುರಸಭಾ ಕಾರ್ಯಾಲಯ, ಕೃಷ್ಣರಾಜನಗರ, ಮೈಸೂರು ಜಿಲ್ಲೆ

E-Mail ID: itstaff_ulb_krnagar@yahoo.co.in, Phone(0): 08223-262242, Fax: 08223-262241

ಪುಸಕೃ.ಸಂಖ್ಯೆ.ಜೀವ್ಯಾ.ಕು.ಮೇ.ಪಿ.ಆರ್.01.2022–23 ದಿನಾಂಕ: 08.08.2023

ಡೇ–ನಲ್ಮ್ ಅಭಿಯಾನದಲ್ಲಿ ಕುಂದುಕೊರತೆ ನಿವಾರಣಾ ಸಮಿತಿ ಮತ್ತು ಮೇಲ್ಮನವಿ ಪ್ರಾಧಿಕಾರ ಸಮಿತಿ ರಚನೆಗೆ ಅರ್ಜಿ ಆಹ್ವಾನ

ಕೆ.ಆರ್.ನಗರ: ಕೆ.ಆರ್.ನಗರ ಪುರಸಭೆ ವ್ಯಾಪ್ತಿಯಲ್ಲಿ ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ವ್ಯಾಪಾರ ನಿಯಂತ್ರಣ) ಅಧಿನಿಯಮ–2014 & ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ ನಿಯಮಗಳು 2019 ರಂತೆ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬೀದಿ ಬದಿ ವ್ಯಾಪಾರಿಗಳ ಕುಂದುಕೊರತೆ ನಿವಾರಣಾ ಸಮಿತಿ ಮತ್ತು ಮೇಲ್ಮನವಿ ಪ್ರಾಧಿಕಾರ ಸಮಿತಿಯನ್ನು ನಿವೃತ್ತ ಸಿವಿಲ್ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ರಚಿಸಬೇಕಾಗಿದೆ. ಕೆ.ಆರ್.ನಗರ ಪುರಸಭೆ ವ್ಯಾಪ್ತಿಯಲ್ಲಿ ವಾಸಿಸುವ ನಿವೃತ್ತ ಸಿವಿಲ್ ನ್ಯಾಯಾಧೀಶರು, ಉತ್ತಮ ಸೇವಾ ರೆಕಾರ್ಡ ಹೊಂದಿರುವ ಒಬ್ಬ ಗ್ರೂಪ್ 'ಎ' ದರ್ಜೆ ಅಧಿಕಾರಿ ಹಾಗೂ ಬೀದಿ ಬದಿ ವ್ಯಾಪಾರಿಗಳಲ್ಲಿ ಒಬ್ಬ ಉತ್ತಮ ಸಾಮಾಜಿಕ ಸೇವೆ ಮತ್ತು ಆರ್ಥಿಕ ಸೇವಾ ಚಟುವಟಿಕೆಯನ್ನು ಹೊಂದಿರುವ ಒಬ್ಬ ವ್ಯಕ್ತಿಯನ್ನು ಸದಸ್ಯರನ್ನಾಗಿ ನೇಮಕಮಾಡಿಕೊಳ್ಳಲು ಪ್ರಕಟಣೆ ಹೊರಡಿಸಲಾಗಿದೆ. ಪ್ರಕಟಣೆ ಹೊರಡಿಸಿದ ಒಂದು ವಾರದೊಳಗೆ ಕೆ.ಆರ್.ನಗರ ಪುರಸಭೆಯ ಮುಖ್ಯಾಧಿಕಾರಿಗೆ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಪುರಸಭೆಯ ಮುಖ್ಯಾಧಿಕಾರಿ ರವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಸಹಿ/– ಮುಖ್ಯಾಧಿಕಾರಿ, ಪುರಸಭೆ, ಕೃಷ್ಣರಾಜನಗರ

ಎರಡನೇ ವರ್ಷದ ಚಿರಸ್ಮರಣೆ



ಜಿ.ವಿ.ನಂಜಪ್ಪ (ಸೊಸೈಟಿ)

ನಿಧನ: 10.08.2021

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷ ಕಳೆದರು ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಹಸಿರಾಗಿದೆ ನಿಮ್ಮ ದಿವ್ಯ ಆತ್ಮಕ್ಕೆ ಚಿರ ಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವ

ದುಃಖತಪ್ತರು:
ಪತ್ನಿ ಕುಮಾರಿ, ಮಕ್ಕಳುಗಳಾದ ಜಿ.ಎನ್.ಸತ್ಯನಾರಾಯಣ, ಜಿ.ಎನ್.ವೆಂಕಟೇಶ್(ಪಾಪು) ಜೆಡಿಎಸ್ ಮುಖಂಡರು. ಗುತ್ತಿಗೆದಾರರು ಕರಿಗೌಡರ ಬೀದಿ, ಹುಣಸೂರು.